# ಯುಗರಶ್ಮಿ

★ ದೇವನ ನಿಸ್ತುಲ್ಯತೆ
★ ಮನುಷ್ಯಾರಂಭ – ಆದಂ ಮತ್ತು ಹವ್ವ
★ ಇಸ್ಲಾಂ ಮತ್ತು ಕೋಮು ಸೌಹಾರ್ದ
★ ಈಸ್ಟರ್ ಅಥವಾ ಪುನರುತ್ಥಾನ ಹಬ್ಬ
★ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ
★ ವಿವಾಹ ವಿಚ್ಛೇದಿತೆ ಮುಸ್ಲಿಂ ಮಹಿಳೆಯ ಜೀವನಾಂಶ
★ ವ್ರತಾನುಷ್ಠಾನ
★ ಪೋಪರಿಗೆ ಸ್ವಾಗತ – ಇಸ್ಲಾಮಿಗೆ ಆಮಂತ್ರಣ.


ತ್ರೈಮಾಸಿಕ

ಜೂನ್ 1986

ಬೆಲೆ: ರೂ. 1-00


ಓ ವಿಶ್ವಾಸಿಗಳೇ, ನೀವು ನ್ಯಾಯ ರೀತಿಯಲ್ಲಿ ಸಂಪಾದಿಸಿದ ಸಂಪತ್ತಿನಿಂದ ಜನರಿಗೆ ದಾನಧರ್ಮ, ಉಪಕಾರಗಳನ್ನು ಮಾಡಿರಿ; ಅನ್ಯಾಯದ ಸಂಪಾದನೆಯಿಂದ ದಾನಮಾಡುವ ವಿಚಾರ ನಿಮ್ಮ ಹೃದಯದಿಂದ ದೂರವಿರಲಿ.

—ಪವಿತ್ರ ಖುರ್‌ಆನ್ (2:268)

# ಯುಗರಶ್ಮಿ ತ್ರೈಮಾಸಿಕ

10–23–1008, ಅನ್ಸಾರಿ ರೋಡ್, ಬಂದರ್, ಮಂಗಳೂರು–575 001

ಬಿಡಿಪ್ರತಿ: ರೂ. 1–00

ವಾರ್ಷಿಕ ಚಂದಾ: ರೂ. 4–00

ಅಂಚೆ ಮೂಲಕ: ರೂ. 5–00


**ವಿಷಯ ಸೂಚಿಕೆ :**


| | ಪುಟ |
|---|---|
| ★ ರಮಝಾನ್ ವ್ರತಾನುಷ್ಠಾನ ... | 1 |
| ★ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... | 2 |
| ★ ದೇವನ ನಿಸ್ತುಲ್ಯತೆ ... | 3 |
| ★ ಮನುಷ್ಯಾರಂಭ—ಆದಂ ಮತ್ತು ಹವ್ವ ... | 5 |
| ★ ಇಸ್ಲಾಂ ಮತ್ತು ಕೋಮು ಸೌಹಾರ್ದ ... | 7 |
| ★ ಈಸ್ಟರ್ ಅಥವಾ ಪುನರುತ್ಥಾನ ಹಬ್ಬ ... | 12 |
| ★ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ—8 ... | 20 |
| ★ ವಿವಾಹ ವಿಚ್ಛೇದಿತೆ ಮುಸ್ಲಿಂ ಮಹಿಳೆಯ ಜೀವನಾಂಶ ... | 24 |
| ★ ವ್ರತಾನುಷ್ಠಾನ ... | 29 |
| ★ ಪೋಪರಿಗೆ ಸ್ವಾಗತ—ಇಸ್ಲಾಮಿಗೆ ಆಮಂತ್ರಣ ... | 31 |
| ★ ಅಹ್ಮದಿಯಾ ವಾರ್ತೆಗಳು ... | 38 |



## Statement about Ownership and other particulars about the Newspaper YUGARASHMI Quarterly

**FORM IV [See Rule 8]**

| | | |
|---|---|---|
| 1 | Place of publication | Mangalore |
| 2 | Period of its publication | Quarterly |
| 3 | Printer's name | Muhammad Yusuf |
| | Whether citizen of India ? | Yes |
| | Address | Jubilee Printing Press<br>10-23-1008/1 Ansari Road, Bunder<br>Mangalore-575 001 |
| 4 | Publisher's name | Muhammad Yusuf |
| | Whether citizen of India ? | Yes |
| | Address | 10-23-1008/1 Ansari Road, Bunder,<br>Mangalore-575 001. |
| 5 | Editor's name | Muhammad Yusuf |
| | Whether citizen of India ? | Yes |
| | Address | 10-23-1008, Ansari Road, Bunder,<br>Mangalore-575 001. |
| 6 | Names and addresses of individuals who own the newspaper and partners or shareholders holding more than one percent of the capital | Jamath Ahmadiyya,<br>10-23-1008/1 Ansari Road, Bunder,<br>Mangalore-575 001. |

I, Muhammad Yusuf hereby declare that the particulars given above are true to the best of my knowledge and belief.

Dated: 1—4—1986

Sd/- **Muhammad Yusuf**

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : **ಮುಹಮ್ಮದ್ ಯೂಸುಫ್**

| ಸಂಪುಟ : 11 | ಎಪ್ರಿಲ್—ಜೂನ್ 1986/ಶಹಾದತ್–ಇಹ್‌ಸಾನ್ 1365 | ಸಂಚಿಕೆ : 2–4 |
| --- | --- | --- |

# ರಮಝಾನ್ ವ್ರತಾನುಷ್ಠಾನ

ಇಸ್ಲಾಮಿನ ಒಂದು ಮೌಲಿಕ ಕರ್ಮವಾಗಿದೆ ವ್ರತಾನುಷ್ಠಾನ. ಇಸ್ಲಾಂ ನಿರ್ದೇಶಿಸಿದ ಆರಾಧನಾ ಕರ್ಮಗಳಲ್ಲಿ ಬದಲಾವಣೆಯನ್ನುಂಟುಮಾಡಬೇಕೆಂದು ಮುಸ್ಲಿಂ ಎಂದು ಕರೆಯಲ್ಪಡುವವರಲ್ಲೇ ಕೆಲವರು ಇಂದಿನ ಕಾಲದಲ್ಲಿ ಅಭಿಪ್ರಾಯವುಳ್ಳವರಾಗಿದ್ದಾರೆಂಬುದು ವ್ಯಸನಕರವಾಗಿದೆ. ಅವರು ಆಧ್ಯಾತ್ಮಿಕವಾಗಿ ಅಂಥತೆ ಬಾಧಿಸಿದವರೂ ದೇವಾಜ್ಞೆಗಳಲ್ಲಿ ಅಂತರ್ಲೀನವಾಗಿರುವ ತತ್ವರಹಸ್ಯಗಳನ್ನು ತಿಳಿಯದವರೂ ಆಗಿದ್ದಾರೆ. ಪ್ರಸ್ತುತ ಕರ್ಮಾನುಷ್ಠಾನಗಳು ಆತ್ಮಸಂಸ್ಕರಣಕ್ಕೆ ಅತ್ಯಗತ್ಯವಾಗಿವೆ. ಆಧ್ಯಾತ್ಮಿಕ ಮಾರ್ಗದಲ್ಲಿ ಕಾಲಿಡದವರು ಅದಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡಲು ಪ್ರಯತ್ನಿಸುವುದು ವಿವೇಕಯುತವಲ್ಲ. ತಾವು ಒಮ್ಮೆಯಾದರೂ ನಡೆದು ನೋಡದ ಆತ್ಮ ಸಾಮ್ರಾಜ್ಯದಲ್ಲಿ ಸುಧಾರಣೆಗಳನ್ನು ತರಲು ಅವರು ಕೃತ್ರಿಮ ಕ್ರಮಗಳನ್ನು ನಿರ್ದೇಶಿಸುತ್ತಾರೆ. ಇವರು ಜೀವಮಾನವನ್ನಿಡೀ ಲೌಕಿಕ ವಿಚಾರಗಳಲ್ಲಿ ವ್ಯಯಿಸುವವರೂ ಆತ್ಮ ವಿಚಾರಗಳ ಕುರಿತು ತಿಳುವಳಿಕೆ ಇಲ್ಲದವರೂ ಆಗಿದ್ದಾರೆ. ಆಹಾರವನ್ನು ಕಡಿಮೆ ಮಾಡಿ ಹಸಿವೆಯನ್ನು ಸಹಿಸುವುದು ಆತ್ಮದ ಸಂಸ್ಕಾರಕ್ಕೆ ಮತ್ತು ಉನ್ನತಿಗೆ ಆವಶ್ಯಕವಾದೊಂದು ಕರ್ಮವಾಗಿದೆ. ಅದು ಆತ್ಮದರ್ಶನ ಶಕ್ತಿಯನ್ನು ಪೋಷಿಸುತ್ತದೆ. ಮನುಷ್ಯನು ಭಕ್ಷ್ಯಪೇಯಗಳಿಂದ ಮಾತ್ರವಲ್ಲ ಜೀವಿಸುವುದು. ಈ ಜೀವಿತದ ನಂತರ ಅವನಿಗೆ ಮತ್ತೊಂದು ಜೀವಿತವಿದೆ.

ನಿತ್ಯವಾದ ಆ ಪರಲೋಕ ಜೀವನವನ್ನು ಅಲಕ್ಷ್ಯ ಮಾಡುವುದರಿಂದಾಗಿ ದೇವರಿಂದ ಬೇರ್ಪಟ್ಟು ಆ ಮೂಲಕ ಅವನ ಅಪ್ರೀತಿಗೆ ಸ್ವಯಂ ಗುರಿಯಾಗುತ್ತಾನೆ.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ವ್ರತವು ಒಂದು ರಕ್ಷಾಬಲವಾಗಿದೆ. ಆದ್ದರಿಂದ ವ್ರತಾನುಷ್ಠಾನಿ ಅಸಭ್ಯ ನುಡಿಯುವುದಾಗಲಿ ಮೌಢ್ಯ ವರ್ತಿಸುವುದಾಗಲಿ ಸಲ್ಲದು. ಯಾರಾದರೂ ಕಲಹಕ್ಕೆ ಬಂದರೆ, "ನಾನು ಉಪವಾಸಿಗ" ಎಂದು ಆತನು ಎರಡು ಸರ್ತಿ ಹೇಳಲಿ.

2. ಅಸಭ್ಯ ಮಾತುಗಳನ್ನೂ ಅದೇ ಬಗೆಯ ವರ್ತನೆಗಳನ್ನೂ ವರ್ಜಿಸದವನು, ಅನ್ನಪಾನಾದಿಗಳನ್ನು ವರ್ಜಿಸುವುದು ಅಲ್ಲಾಹನಿಗೆ ಅಗತ್ಯವಿಲ್ಲ.

3. ಉಪವಾಸಿಗನು ನೆನಪಿಲ್ಲದೆ ತಿಂದರೆ ಅಥವಾ ಕುಡಿದರೆ ಆತನು ತನ್ನ ಉಪವಾಸವನ್ನು ಪೂರ್ತಿಗೊಳಿಸಲಿ. ಅವನು ತಿನ್ನುವಂತೆ ಯಾ ಕುಡಿಯುವಂತೆ ಮಾಡಿದ್ದು ಅಲ್ಲಾಹನೇ.

4. ರಮಝಾನ್ ಮಾಸದಲ್ಲಿ ಸ್ವರ್ಗದ ಬಾಗಿಲುಗಳು ತೆರೆಯಲ್ಪಡುವುವು. ನರಕದ ಬಾಗಿಲುಗಳು ಮುಚ್ಚಲ್ಪಡುವುವು. ಪಿಶಾಚಿಗಳನ್ನು ಸಂಕಲೆಗಳಿಂದ ಬಂಧಿಸಲಾಗುವುದು.

5. "ವ್ರತವು ನನಗೋಸ್ಕರವಾಗಿದೆ. ನನಗೋಸ್ಕರ ಶಾರೀರಿಕೇಚ್ಛೆಗಳನ್ನೂ ಆಹಾರವನ್ನೂ ವರ್ಜಿಸುವವನಿಗೆ ನಾನು ವಿಶೇಷ ಪ್ರತಿಫಲ ನೀಡುವೆನು" ಎಂದು ಅಲ್ಲಾಹನು ಹೇಳಿರುವನು.

---

(1ನೇ ಪುಟದಿಂದ)

ವ್ರತಾನುಷ್ಠಾನದ ಉದ್ದೇಶ ಒಂದು ಕ್ಲಪ್ತಕಾಲದ ವರೆಗೆ ಪಾನಾಶನಾದಿಗಳನ್ನು ವರ್ಜಿಸಿ ಹಸಿವೆ, ದಾಹಗಳನ್ನು ಸಹಿಸುವುದು ಮಾತ್ರವಲ್ಲವೆಂದು ನೆನಪಿಡಬೇಕಾಗಿದೆ. ಎಲ್ಲಾ ವಿಧ ದೋಷಗಳಿಂದ ಅಗಲಿ ನಿಂತು ವ್ರತಾನುಷ್ಠಾನಿ ದೇವ ಸ್ಮರಣೆಯಲ್ಲಿ ಹೆಚ್ಚಿನ ವೇಳೆಯನ್ನು ಕಳೆಯಬೇಕಾದುದು ಅತ್ಯಾವಶ್ಯಕ. ಮುಹಮ್ಮದ್ ಪೈಗಂಬರ್ (ಸ) ರಮಝಾನ್ ಮಾಸದಲ್ಲಿ ಬಹಳ ಹೆಚ್ಚಾಗಿ ದೇವಾರಾಧನೆಯಲ್ಲಿ ಮಗ್ನರಾಗಿರುತ್ತಿದ್ದರು. ಒಟ್ಟಾರೆ, ಉಪವಾಸ ವೇಳೆಯಲ್ಲಿ ಆಹಾರಪಾನೀಯಗಳಿಗೆ ಸಂಬಂಧಿಸಿದ ವಿಚಾರಗಳಿಂದ ವಿರಮಿಸಿಯೂ ಆ ಬಗ್ಗೆಯ ಕಟ್ಟುಪಾಡುಗಳನ್ನು ಬಿಟ್ಟುಕೊಂಡೂ ಗಮನವನ್ನೆಲ್ಲ ದೇವಸಮಕ್ಷದಲ್ಲಿ ಅರ್ಪಿಸಬೇಕಾಗಿದೆ. ಭೌತಿಕವಾದ ಭಕ್ಷ್ಯ ಸಾಧನಗಳು ಲಭಿಸಿರುವಾಗ ಆಧ್ಯಾತ್ಮಿಕಾಹಾರದ ಕುರಿತು ಚಿಂತಿಸದ ಮನುಷ್ಯನು ಭಾಗ್ಯಹೀನನೆಂದೇ ಭಾವಿಸಬೇಕಾಗಿದೆ. ಆಹಾರವನ್ನು ಸೇವಿಸುವುದರ ಮೂಲಕ ಶರೀರಕ್ಕೆ ಶಕ್ತಿಯೂ ಓಜಸ್ಸೂ ಲಭಿಸುವಂತೆಯೇ ಆಧ್ಯಾತ್ಮಿಕಾಹಾರ ಮೂಲಕ ಆತ್ಮಕ್ಕೆ ರಕ್ಷೆಯೂ ಆತ್ಮಶಕ್ತಿಗಳಿಗೆ ಚೈತನ್ಯವೂ ಸಿದ್ಧಿಸುತ್ತದೆ. ಎಲ್ಲಾ ವಿಧ ಸಫಲತೆಗಳ ಬಾಗಿಲು ದೇವಾನುಗ್ರಹದಿಂದ ತೆರೆಯಲ್ಪಡುವುದರಿಂದ ವಿಜಯಲಬ್ಧಿಗೆ ದೇವರಿಂದಲೇ ಸಹಾಯವನ್ನು ಗಳಿಸಬೇಕಾಗಿದೆ. ("ಬದ್ರ್" 18-1-1907)

ಹಝ್ರತ್ ಅಹ್ಮದ್

ಅಹ್ಮದಿಯಾ ಜಮಾಅತಿನ ಸ್ಥಾಪಕರು.

# ದೇವನ ನಿಸ್ತುಲ್ಯತೆ

★ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ಭೌತಿಕ ಪ್ರಪಂಚಕ್ಕೆ ಸಂಬಂಧಿಸಿದ ವೀಕ್ಷಣಗಳು ಒಂದು ವ್ಯವಸ್ಥೆಯನುಸಾರ ಅದು ಪ್ರವರ್ತಿಸುತ್ತದೆಂದು ವ್ಯಕ್ತಪಡಿಸುತ್ತವೆ. ಈ ವ್ಯವಸ್ಥೆಯನುಸರಿಸಿ ಅನೇಕ ಗೋಳಗಳು ಸೂರ್ಯನಿಗೆ ಸುತ್ತುಬರುತ್ತಿವೆಯೆಂದೂ ಸೂರ್ಯನು ಅದರ ಎಲ್ಲಾ ಉಪಗ್ರಹಗಳ ಸಹಿತ ಒಂದು ಗುರಿಯನ್ನಿಟ್ಟು—ಆಧುನಿಕ ಗಣಿತಶಾಸ್ತ್ರಜ್ಞರ ಪ್ರಕಾರ, ಅನೇಕ ಸೌರವ್ಯೂಹಗಳಿಗೆ ಸಂಬಂಧಿಸಿದ ಒಂದು ಕೇಂದ್ರದೆಡೆಗೆ—ಪ್ರಯಾಣ ಮಾಡುತ್ತಿದೆ. ಈ ಊಹೆಗಳು ಯಥಾರ್ಥ್ಯದಲ್ಲಿ ಅಧಿಷ್ಠಿತವಾಗಿದ್ದರೂ ಅಲ್ಲವಾದರೂ ಭೌತಿಕ ಪ್ರಪಂಚ ಎಲ್ಲವೂ ಒಂದು ವ್ಯವಸ್ಥೆಯ ಪ್ರಕಾರ ಚಲಿಸುತ್ತಿದೆಯೆಂಬುದನ್ನು ಅಲ್ಲಗಳೆಯಲಾಗದು. ಹಾಗೆ ಅಲ್ಲವಾಗಿದ್ದರೆ, ಎಷ್ಟೋ ಮುಂಚೆಯೇ ಈ ಪ್ರಪಂಚಯಂತ್ರ ಕೆಟ್ಟು ನಿರ್ನಾಮವಾಗುತ್ತಿತ್ತು. ಈ ವ್ಯವಸ್ಥೆಗಳೂ ಕ್ರಮೀಕರಣಗಳೂ ಎಲ್ಲವೂ ಒಂದು ನಿಯಮಕ್ಕೆ ವಿಧೇಯವಾಗಿ ಪ್ರವರ್ತಿಸುತ್ತಿವೆ. ಪದಾರ್ಥಗಳ ವಿವಿಧ ರೂಪಾಂತರಗಳು ಆ ನಿಯಮಾವಳಿಯನುಸಾರ ಕ್ರಮೀಕರಿಸಲ್ಪಟ್ಟಿರುವುದರಿಂದ, ಅನೇಕ ವಿಧದ ಅಸಂಖ್ಯಾತ ಪದಾರ್ಥಗಳಿಂದಲೂ ವಸ್ತುಗಳಿಂದಲೂ ಪ್ರಪಂಚವು ತುಂಬಿಕೊಂಡಿದೆ. ಭೌತಿಕ ವಸ್ತುಗಳ ಉಪಯೋಗ ಮತ್ತು ಪ್ರಯೋಗವನುಸಾರ ವಿಶ್ವದ ವಿಕಾಸಾಭಿವೃದ್ಧಿಗಳು ಉಂಟಾಗುವುವು. ಇದೇ ಪ್ರಕಾರ ಆಧ್ಯಾತ್ಮಿಕ ಪ್ರಪಂಚ ಸಹ ಒಂದು ವ್ಯವಸ್ಥೆಯನುಸಾರ ಪ್ರವರ್ತಿಸುತ್ತಿದೆಯೆಂದು ಖುರ್‌ಆನ್ ಕಲಿಸುತ್ತದೆ. ಪ್ರಪಂಚವನ್ನೆಲ್ಲಾ ನಿಯಂತ್ರಿಸುವ ಸಕಲಾಶ್ಲೇಷಕವಾದ ಒಂದು ಕೇಂದ್ರದಿಂದ ಹೊರಗಿರುವ, ಸ್ವತಂತ್ರವಾಗಿ ನೆಲೆಗೊಳ್ಳುವಂಥ ಏನೂ ಪ್ರಪಂಚದಲ್ಲಿಲ್ಲ. ಸ್ವಯಂಭೂ ಹಾಗೂ ಅಸೃಷ್ಟಿತವಾಗಿರುವ ಒಂದು ಸತ್ತೆಯಾಗಿದೆ ಆ ಕೇಂದ್ರ.

ದೇವನು ಅವನ ಉದ್ದೇಶಲಕ್ಷ್ಯಗಳನ್ನು ಈಡೇರಿಸಲು ಏನನ್ನೂ ಆಶ್ರಯಿಸುವುದಿಲ್ಲ. ಅವನು ಯಾರ ಪುತ್ರನೂ ಅಲ್ಲ. ಅವನಿಗೆ ಪುತ್ರನೂ ಇಲ್ಲ. ಅವನ ಶಕ್ತಿಗಳಲ್ಲೂ ಪ್ರವೃತ್ತಿಗಳಲ್ಲೂ ಭಾಗಿಯಾಗಿರುವ ಒಬ್ಬ ಸಂಗಾತಿಯಾಗಲಿ, ಪಾಲುಗಾರನಾಗಲಿ ಅವನಿಗಿಲ್ಲ. ಇದು ಖುರ್‌ಆನಿನ ಸೂರ ಇಖ್‌ಲಾಸ್‌ನಲ್ಲಿ (112ನೇ ಅಧ್ಯಾಯ) ಬಹಳ ಸ್ಪಷ್ಟವಾಗಿ ವಿವರಿಸಲಾಗಿದೆ. ದೇವನು ಅವನ ಶಕ್ತಿಗಳಲ್ಲೂ ಗುಣಗಳಲ್ಲೂ ಅನುಪಮನೆಂಬ ಸತ್ಯವನ್ನು ಘೋಷಿಸಲು ಈ ಅಧ್ಯಾಯದಲ್ಲಿ ಮುಹಮ್ಮದ್ ಪೈಗಂಬರರೊಡನೆ ಆಜ್ಞಾಪಿಸಲಾಗಿದೆ. ಒಂದು ವಸ್ತುವಿನ ಅಥವಾ ಒಬ್ಬ ವ್ಯಕ್ತಿಯ ಗುಣಗಳು ದೇವನ ಗುಣಗಳೊಂದಿಗೆ ಕೆಲವೊಮ್ಮೆ ಸಾದೃಶ್ಯವನ್ನು ಯಾರಾದರೂ ಕಾಣಲೂ ಬಹುದು. ಆದರೆ ಆ ಸಾದೃಶ್ಯತೆ ಬಾಹ್ಯ ಮಾತ್ರವೇ ಆಗಿರುವಂಥದ್ದಾಗಿದೆ. ಉದಾಹರಣೆಗೆ, ದೇವನಿದ್ದಾನೆಂದು ನಾವು ಹೇಳುತ್ತೇವೆ. ಅದೇ ಪ್ರಕಾರವೇ ಮನುಷ್ಯರು, ಮೃಗಗಳು ಮತ್ತು ಇತರ ವಸ್ತುಗಳ ಇರುವಿಕೆಯ ಬಗ್ಗೆ ನಾವು ಹೇಳುತ್ತೇವೆ. ಇರುವಿಕೆಯ ಬಗ್ಗೆ ಪ್ರಕಟಿಸುವಾಗ ನಾವು ಪ್ರಯೋಗಿಸುವ ಪದ ಎರಡರಲ್ಲೂ ಒಂದೇ ಬಗೆಯಾದರೂ ನಾವು ಪ್ರತಿಯೊಂದರಲ್ಲೂ ಸೂಚಿಸುವುದು ಒಂದೇ ಯಾಥಾರ್ಥ್ಯವನ್ನಲ್ಲವೆಂಬುದು ಸ್ಪಷ್ಟವಷ್ಟೇ. ದೇವನಿದ್ದಾನೆಂದು ನಾವು ಹೇಳುವಾಗ ಅವನು ಸ್ವಯಂಭೂವೆಂದೂ ಪರಿಪೂರ್ಣನೂ ಬೇರೆ ಯಾವುದೇ ವಸ್ತುವಿನಿಂದಲೂ ಜೀವಿಯಿಂದಲೂ ವಿಭಿನ್ನನೆಂದೂ ನಿರಾವಲಂಬಿಯಾಗಿ ನೆಲೆಗೊಳ್ಳುವವನೆಂದೂ ನಾವು ಅರ್ಥೈಸುತ್ತೇವೆ. ಆದರೆ ಒಬ್ಬ ಮನುಷ್ಯನಾಗಲಿ, ಒಂದು ಮೃಗವಾಗಲಿ, ಬೇರಾವುದೇ ವಸ್ತುವಾಗಲಿ ಉಂಟೆಂದು ನಾವು ಹೇಳುವಾಗ ಆ ಮನುಷ್ಯನ, ಮೃಗದ, ವಸ್ತುವಿನ ಸೃಷ್ಟಿಗೆ ನಿದಾನವಾಗಿರುವ ಪ್ರತಿವರ್ತನೆ ಪ್ರಕ್ರಿಯೆಯ ಕಾರಣಗಳೂ ಉಪಾಧಿಗಳೂ ಮುಂದವರಿದುಕೊಂಡಿರುವ ವರೆಗೆ ಅದು ನೆಲೆನಿಲ್ಲುತ್ತದೆ ಎಂದು ಮಾತ್ರ ನಾವು ಅರ್ಥಮಾಡುತ್ತೇವೆ. ಆ ಕಾರಣಗಳೂ ಉಪಾಧಿಗಳೂ ನೀಗಿಸಲ್ಪಟ್ಟರೆ, ಆ ಮನುಷ್ಯನಾಗಲಿ, ಮೃಗವಾಗಲಿ, ವಸ್ತುವಾಗಲಿ ಇಲ್ಲದಾಗುತ್ತದೆ. ಉದಾಹರಣೆಗೆ ಒಬ್ಬನ

ಆತ್ಮ ಮತ್ತು ಶರೀರ ಸಂಬಂಧ ಬಾಕಿಯುಳಿಯುವ ವರೆಗೆ ಮಾತ್ರವೇ ಅವನು ಜೀವಂತನೆಂದು ಹೇಳಲ್ಪಡುತ್ತಾನೆ. ಆದರೆ ಈ ಸಂಬಂಧ ತಾತ್ಕಾಲಿಕವೂ ಭಂಗುರವೂ ಆಗಿದೆ. ಈ ಸಂಬಂಧ ಬೇರ್ಪಟ್ಟರೆ ಮನುಷ್ಯಶರೀರ ಮತ್ತೂ ಬಾಕಿಯಾಗುವುದಾದರೂ ಅದು ಸಜೀವದೊಂದಿಗಿರುವುದಿಲ್ಲ. ಅಸಂಖ್ಯಾತ ಜೀವಾಣುಗಳು ಸಂಯೋಜನೆಗೊಂಡು ಶರೀರವು ಒಂದು ಸವಿಶೇಷ ರೂಪವನ್ನು ಪಡೆಯುತ್ತದೆ. ಕೆಲವು ವಿಶೇಷ ಪರಿಸ್ಥಿತಿಗಳಲ್ಲಿ ಧಾತು ಸಂಯೋಗ ಬೇರೆ ತರದಲ್ಲಿ ಸಂಭವಿಸುತ್ತದೆ. ಆದರೆ ಧಾತು ವಿಘಟನೆ ಉಂಟಾಗುವಾಗ ಶರೀರವು ಒಂದು ಶರೀರವಾಗಿ ನೆಲೆನಿಲ್ಲದಾಗುತ್ತದೆ. ಮಣ್ಣಿನಲ್ಲಿ ಸಮಾಧಿಗೊಳಿಸಲ್ಪಟ್ಟ ಮೃತ ಶರೀರದಲ್ಲಿ ಕೆಲವು ರಾಸಾಯನಿಕ ಕ್ರಿಯೆಗಳು ಸಂಭವಿಸಿ ಅದು ಜೀರ್ಣಿತವಾಗುತ್ತದೆ. ಮನುಷ್ಯ ಶರೀರಕ್ಕೆ ರೂಪ ನೀಡಿದ ಜೀವಾಣುಗಳು ನಂತರ ಸಹ ಬಾಕಿಯಾಗುವುದಾದರೂ ಆ ಜೀವಾಣುಗಳನ್ನು ಒಂದು ಶರೀರದ ರೂಪದಲ್ಲಿ ಸಂಯೋಜಿಸುವಂತೆ ಮಾಡಿದ ಪರಿಸ್ಥಿತಿಗಳೂ ಉಪಾಧಿಗಳೂ ಬದಲಾಗುವುದರಿಂದ ಆ ಶರೀರ ಇಲ್ಲದಾಗುತ್ತದೆ. ನೀರು, ಬೆಂಕಿ, ವಿದ್ಯುಚ್ಛಕ್ತಿ ಇತ್ಯಾದಿಗಳ ಪ್ರವರ್ತನೆ ಮೂಲಕ ದೇಹವು ಜೀರ್ಣಿತವಾಗುವಾಗಲೂ ಹೀಗೆಯೇ ಸಂಭವಿಸುತ್ತದೆ. ಶರೀರ ರಚನೆಗೆ ಮೂಲ ಕಾರಣವಾಗಿರುವ ಜೀವಾಣುಗಳು ನೆಲೆನಿಲ್ಲುವುದಾದರೂ ಅವು ಹೊಸ ರೂಪವನ್ನು ಪಡೆದು ಶರೀರಕ್ಕೆ ಅದರ ರೂಪ ಮತ್ತು ರಚನೆಯನ್ನು ಬಾಕಿಯುಳಿಸಲು ಅಸಾಧ್ಯವಾಗುತ್ತದೆ. ಆದರೆ ಇಂತಹ ಕಾರ್ಯಗಳೊಂದೂ ಸಹ ದೇವನಿಗೆ ಅನ್ವಯಿಸುವುದಿಲ್ಲ. ಬಾಹ್ಯವಾದ ಯಾವುದಾದರೂ ಹೇತು ಅಥವಾ ಉಪಾಧಿ ದೇವನ ಅಸ್ತಿತ್ವಕ್ಕೆ ಆಧಾರವಾಗಲಿ, ಅವನ ಇರುವಿಕೆಯನ್ನು ನೆಲೆನಿಲ್ಲಿಸಲು ಸಹಾಯಕವಾಗಲಿ ಆಗುವುದಿಲ್ಲ. ಸರ್ವಥಾ ಪರಿಪೂರ್ಣನಾಗಿರುವುದರಿಂದಲೂ ಕಾಲ ಪರಿಧಿಗಳಿಗೆ ಅತೀತನಾಗಿರುವುದರಿಂದಲೂ ಅವನು ಎಂದೆಂದೂ ನೆಲೆಗೊಂಡಿರುತ್ತಾನೆ. ಭೌತಿಕ ವಸ್ತುಗಳೆಲ್ಲಾ ಕಾಲ ಪರಿಧಿಗಳಿಗೆ ಅಧೀನವಾಗಿರುವಾಗ ಕಾಲ ಪರಿಧಿಗಳಿಗೆ ಅತೀತನಾಗಿ ನೆಲೆನೆಲ್ಲಲು ದೇವನಿಗೆ ಸಾಧ್ಯವಾಗುವುದು ಹೇಗೆಂದು ಮನಗಾಣಲು ಮನುಷ್ಯ ಬುದ್ಧಿಗೆ ಸಾಧ್ಯವಿಲ್ಲವೆಂದು ಹೇಳಲ್ಪಡುತ್ತದೆ. ಆದರೆ ಮನುಷ್ಯ ಅಥವಾ ಮತ್ತಿತರ ಭೌತಿಕ ವಸ್ತುಗಳು ನೆಲೆಗೊಳ್ಳುತ್ತವೆ ಎಂಬ ಅರ್ಥದಲ್ಲಲ್ಲ ದೇವನ ನೆಲೆನಿಲ್ಲುವಿಕೆಯನ್ನು ನಾವು ಹೇಳುವುದು. ನೆಲೆನೆಲ್ಲುವಿಕೆಗೆ ಸಂಬಂಧಿಸಿದ ತಾರತಮ್ಯ ಬಾಹ್ಯಮಾತ್ರವಾಗಿದೆ. ದೇವನು ನಿಸ್ತುಲನಾಗಿರುವುದರಿಂದ ಬೇರೆ ಯಾವುದೇ ಜೀವಿಯಾಗಲಿ, ವಸ್ತುವಾಗಲಿ ಅವನ ಗುಣಗಳಲ್ಲಿ ಸಹಭಾಗಿತ್ವ ವಹಿಸುವುದಿಲ್ಲ. ದೇವನು ಭೂಮ್ಯಾಕಾಶಗಳ ಸೃಷ್ಟಿಕರ್ತನೆಂದು ಖುರ್‌ಆನ್ ಇನ್ನೊಂದೆಡೆ ಹೇಳುತ್ತದೆ. ಅವನು ಮನುಷ್ಯನನ್ನೂ ಮೃಗಗಳನ್ನೂ ಬಾಕಿಯೆಲ್ಲವನ್ನೂ ಜೋಡಿಯಾಗಿ ಸೃಷ್ಟಿಸಿ, ಭೌತಿಕ ಪ್ರಪಂಚದ ಪ್ರಗತಿಗೆ ಮಾರ್ಗಗಳನ್ನು ಸಿದ್ಧಪಡಿಸಿದ್ದಾನೆ (ಖುರ್‌ಆನ್ (42:12). ಮನುಷ್ಯರೂ ಮೃಗಗಳೂ ಸಸ್ಯಲತಾದಿಗಳೂ ಘನಪದಾರ್ಥಗಳು ಕೂಡ ಹೆಣ್ಣು-ಗಂಡು ಅಥವಾ ಪೊಸಿಟಿವ್-ನೆಗೆಟಿವ್ ಯೂ ಬೇರಾವುದೇ ಹೆಸರುಗಳಿಂದ ಕರೆಯಲ್ಪಡುವ ರೀತಿಯಲ್ಲಿ ಜೋಡಿಗಳಾಗಿ ಸೃಷ್ಟಿಸಲ್ಪಟ್ಟಿವೆಯೆಂದೂ ಎಲ್ಲಾ ವಸ್ತುಗಳೂ ಜೋಡಿಯಾಗಿ ಸೃಷ್ಟಿಸಲ್ಪಟ್ಟಿರುವುವೆಂಬ ಆಧಾರದಲ್ಲಿ ಪ್ರಪಂಚವಿಡೀ ಚಲಿಸುತ್ತಿದೆಯೆಂಬುದಾಗಿದೆ ಇದರ ಅರ್ಥ. ಖುರ್‌ಆನ್ ಹೇಳುತ್ತದೆ: "ಎಲ್ಲಾ ವಸ್ತುಗಳಿಂದಲೂ ಜೋಡಿಗಳನ್ನು ನಾವು ಸೃಷ್ಟಿಸಿದ್ದೇವೆ—ನೀವು ಚಿಂತಿಸಲಿಕ್ಕಾಗಿ" (51:50). ಪ್ರಪಂಚದ ಸಕಲ ವಸ್ತುಗಳ ಕುರಿತು ಚಿಂತನ ಮಾಡಿಯೂ ಎಲ್ಲಾ ವಸ್ತುಗಳು ಜೋಡಿಯಾಗಿ ಸೃಷ್ಟಿಸಲ್ಪಟ್ಟಿವೆಯೆಂಬ ನಿಜಾಂಶವನ್ನು ವೀಕ್ಷಿಸಿ ತಿಳಿದೂ ಈ ಸೃಷ್ಟಿವಸ್ತುಗಳು ಯಾವುದೂ ಸಹ ದೇವನಾಗಿರಲಿಕ್ಕೆ ಸಾಧ್ಯವಿಲ್ಲವೆಂದೂ ಪ್ರತಿಯೊಂದು ವಸ್ತುವೂ ಅಪರಿಪೂರ್ಣವೆಂದೂ ಜೋಡಿಯ ಸಹಾಯದಿಂದ ಮಾತ್ರವೇ ಅವು ಪ್ರವರ್ತಿಸಲಿಕ್ಕೂ ನೆಲೆನಿಲ್ಲಲಿಕ್ಕೂ ಸಾಧ್ಯತೆ ಇದೆಯೆಂಬ ಯಾಥಾರ್ಥ್ಯವನ್ನು ಮನುಷ್ಯನಿಗೆ ಮನಗಾಣಲು ಸಾಧ್ಯವೆಂಬುದಾಗಿದೆ ಇದರ ಅರ್ಥ.

ಸಂಕ್ಷಿಪ್ತವಾಗಿ, ಪ್ರಪಂಚದ ಕೇಂದ್ರಶಕ್ತಿ ನಿಸ್ತುಲವಾದ ಒಂದು ಸತ್ತೆಯೂಗಿರುವುದರಿಂದ, ಬೇರೆ ಯಾವುದೇ ವಸ್ತುವಿಗೆ ದೇವನೊಡನೆ ಪೂರ್ಣ ಸಾದೃಶ್ಯತೆಯನ್ನು ಪಡೆಯಲು ಸಾಧ್ಯವಿಲ್ಲವೆಂದು ಖುರ್‌ಆನ್ ಸಾರುತ್ತದೆ. ಪ್ರಪಂಚವಿಡೀ ಅದರ ನೆಲೆನಿಲ್ಲುವಿಕೆಗೂ ಪ್ರವರ್ತನೆಗಳಿಗೂ ಬೇರೊಂದನ್ನು ಆಶ್ರಯಿಸಿರುತ್ತದೆ. ಆದರೆ, ಪ್ರಪಂಚದ ಕೇಂದ್ರಶಕ್ತಿಯಾಗಿರುವವನು ನೆಲೆನಿಲ್ಲುವಿಕೆಗಾಗಲಿ, ಅವನ ಗುಣಗಳನ್ನು ಪ್ರಕಟಿಸಲಿಕ್ಕಾಗಲಿ ಬೇರಾವುದೇ ಸಂಗಾತಿಯನ್ನಾಗಲಿ ವಸ್ತುವನ್ನಾಗಲಿ ಯಾವ ಪ್ರಕಾರದಲ್ಲೂ ಆಶ್ರಯಿಸುವುದಿಲ್ಲ. ಆ ಕೇಂದ್ರಸತ್ತೆಯೂರ ಸಂತಾನವೂ ಅಲ್ಲ: ಅವನಿಗೆ ಸಂತಾನವೂ ಇಲ್ಲ

# ಮನುಷ್ಯಾರಂಭ—ಆದಂ ಮತ್ತು ಹವ್ವ

★ ಮಿರ್ಝಾ ಬಶೀರ್ ಅಹ್ಮದ್ ಎಂ. ಏ.

ಅಲ್ಲಾಹನು ಆದಮನನ್ನು ಮಣ್ಣಿನಿಂದ ಸೃಷ್ಟಿಸಿದನು; ಅವನ ಆಜ್ಞೆ ಪ್ರಕಾರ ಆದಮನಿಗೆ ಜೀವ ತುಂಬಿತು ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಅಲ್ಲಾಹನು ಮಣ್ಣಿನಿಂದ ಒಂದು ವಿಗ್ರಹ ಮಾಡಿ, ನಂತರ ಅದರೊಳಗೆ ಊದಿ ಮನುಷ್ಯ ವಂಶದ ಸೃಷ್ಟಿ ಆರಂಭಿಸಿದ್ದೆಂದು ಕೆಲವರು ಇದರಿಂದ ಊಹಿಸುತ್ತಾರೆ. ಆದರೆ ಖುರ್‌ಆನ್ ಉದ್ದೇಶಿಸುವುದೇನೆಂದರೆ ಮನುಷ್ಯ ಸೃಷ್ಟಿಯಲ್ಲಿ ಭೌತಿಕ ವಸ್ತುಗಳ ಮಿಶ್ರಣ ಇದೆಯೆಂದೂ ಅವನು ಭೌತಿಕತೆಯೆಡೆಗೆ ವಾಲುವವನೆಂದೂ ಆದರೆ ಅವನ ಭೌತಿಕ ಮಿಶ್ರಣವು ಆಧ್ಯಾತ್ಮಿಕೋನ್ನತಿಗೆ ತಡೆಯಾಗದಿರಲಿಕ್ಕಾಗಿ ಅವನನ್ನು ಸೃಷ್ಟಿಸಿದಾಗ ಅವನೊಳಗೆ ಆಧ್ಯಾತ್ಮಿಕತೆಯ ಸಾರವನ್ನು ದೇವರು ಸೇರಿಸಿರುವನೆಂದು ಮಾತ್ರ. ವಾಸ್ತವದಲ್ಲಿ, ಬಹಳ ಸೂಕ್ಷ್ಮವಾದ ಒಂದು ವಿಷಯವನ್ನು ಖುರ್‌ಆನ್ ಅದರ ವಾಡಿಕೆಯಂತೆ ರೂಪಕವಾಗಿ ಪ್ರತಿಪಾದಿಸಿದ್ದಕ್ಕೆ ಬಾಹ್ಯಾರ್ಥವನ್ನು ನೀಡಿ ಆಕ್ಷೇಪಕ್ಕೆ ಗುರಿಪಡಿಸಲಾಗಿದೆ. ಆದರೆ ನಾನು ಹೇಳುವುದೇನೆಂದರೆ, ಈ ವಚನಕ್ಕೆ ಶಬ್ದಾರ್ಥವನ್ನು ಕೊಡುವುದಾದರೆ ಕೂಡ ಅದು ಆಕ್ಷೇಪಕ್ಕೆ ಈಡಾಗುವುದಿಲ್ಲ. ಏಕೆಂದರೆ, ಪವಿತ್ರ ಖುರ್‌ಆನ್ ಪ್ರಪಂಚಾರಂಭ ಅವಸ್ಥೆಯನ್ನು ವಿವರಿಸಲಿಕ್ಕಾಗಿ ಅವತೀರ್ಣವಾದ ಗ್ರಂಥವಲ್ಲ. ಅದರ ಲಕ್ಷ್ಯ ಲೋಕದ ನೈತಿಕ ಮತ್ತು ಆಧ್ಯಾತ್ಮಿಕ ಪರಿಷ್ಕರಣವಾಗಿದೆ. ಈ ಗುರಿಯನ್ನು ಸಾಧಿಸಲು ಅವಶ್ಯವಿರುವಷ್ಟು ಮಾತ್ರವೇ ಅದು ಇತರ ವಿಷಯಗಳ ಕುರಿತು ಪ್ರತಿಪಾದಿಸಿದೆ. ಬಾಕಿ ಸಂಗತಿಗಳನ್ನು ಅದು ಬಿಟ್ಟಿರುತ್ತದೆ. ಉದಾಹರಣೆಗೆ, ವೈದ್ಯ ಶಾಸ್ತ್ರವನ್ನು ವಿವರಿಸುವುದು ಖುರ್‌ಆನಿನ ಕೆಲಸವಲ್ಲ. ಏಕೆಂದರೆ ಅದೊಂದು ವೈದ್ಯ ಗ್ರಂಥವಲ್ಲ. ಆದರೆ, ಮನುಷ್ಯನ ಆರೋಗ್ಯ ಅವನ ನೈತಿಕ ಹಾಗೂ ಧಾರ್ಮಿಕ ವಿಚಾರಗಳಲ್ಲಿ ಫಲ ನೀಡುವುದು. ಆದ್ದರಿಂದ ಮನುಷ್ಯನ ಆರೋಗ್ಯಕ್ಕೆ ಸಂಬಂಧಿಸಿದ ಮುಖ್ಯ ವಿಷಯಗಳ ಬಗ್ಗೆ ಅಲ್ಲಲ್ಲಿ ಅದು ಎಚ್ಚರಿಸಿದೆ. ಆದರೂ ಉದ್ದೇಶ ಸಿದ್ಧಿಗೆ ಅಗತ್ಯವಿರುವಷ್ಟು ಮಾತ್ರವೇ ಅದು ಆ ವಿಷಯದ ಬಗ್ಗೆ ಪ್ರತಿಪಾದಿಸಿದೆ. ಈ ಮೂಲ ತತ್ವವನ್ನು ಮುಂದಿಟ್ಟುಕೊಂಡು ಮೇಲಿನ ಖುರ್‌ಆನ್ ವಚನಕ್ಕೆ ಅರ್ಥ ಕೊಡುವುದಾದರೆ ಯಾವುದೇ ಆಕ್ಷೇಪಕ್ಕೆ ಎಡೆಯಿಲ್ಲ. ಆದಮನನ್ನು ಶಬ್ದ ಹೊರಡಿಸುವ ಸಿದ್ಧಪಡಿಸಿದ ಮಣ್ಣಿನಿಂದ ಸೃಷ್ಟಿಸಲಾಯಿತೆಂದೂ ಅನಂತರ ಆತನಿಗೆ ದೈವಾಜ್ಞೆಯನುಸಾರ ಜೀವ ನೀಡಲಾಯಿತೆಂದೂ ಖುರ್‌ಆನ್

---

( ನಾಲ್ಕನೇ ಪುಟದಿಂದ )

ಎಂದು ಖುರ್‌ಆನ್ ಕಲಿಸುತ್ತದೆ. ಈ ವಿಚಾರದಲ್ಲಿ ಖುರ್‌ಆನಿನ ಅಧ್ಯಾಪನ ಕ್ರೈಸ್ತಮತ ಸಿದ್ಧಾಂತದಿಂದ ಸಂಪೂರ್ಣ ಭಿನ್ನವಾಗಿದೆ. ಕ್ರೈಸ್ತಮತ ಮತ್ತು ಕೆಲವು ಆರ್ಯ ಮತಗಳು ದೇವರಿಗೆ ಸಂತಾನಗಳಿರಬಹುದೆಂದು ಸಿದ್ಧಾಂತಿಸುತ್ತವೆ. ಬೇರೊಂದನ್ನು ಆಶ್ರಯಿಸುವ ಹಾಗೂ ನಶ್ವರವಾದುದಕ್ಕೆ ಮಾತ್ರವೇ ಸಂತಾನಗಳ ಆವಶ್ಯಕತೆ ಬರುತ್ತದೆಂದು ಖುರ್‌ಆನ್ ಕಲಿಸುತ್ತದೆ. ದೇವನು ನಶ್ವರನಲ್ಲವಾದುದರಿಂದಲೂ ಅವನು ಎಂದಿಗೂ ಇಲ್ಲದಾಗುವುದಿಲ್ಲವಾದುದರಿಂದಲೂ ಅವನಿಗೆ ಸಂತಾನಗಳ ಅವಶ್ಯವಿಲ್ಲ. ಸ್ವಯಂಭೂ ಆಗಿರುವುದರಿಂದ ಅವನಿಗೆ ಪಿತನೂ ಇಲ್ಲ. ಪುತ್ರನಲ್ಲದ್ದರಿಂದಲೂ ಪುತ್ರನಿಲ್ಲದ್ದರಿಂದಲೂ ಅವನು ನಿಸ್ತುಲ್ಯನಾಗಿದ್ದಾನೆ. ಅವನಂತಹ ಶಕ್ತಿಗಳಿಂದಲೂ ಗುಣಗಳಿಂದಲೂ ಕೂಡಿದ ಬೇರೊಂದು ಸತ್ತೆಯಿಲ್ಲದ್ದರಿಂದಲೂ ಅವನು ಅಸದೃಶನು. ಎಂದರೆ, ದೇವನು ಯಾರ ಸೃಷ್ಟಿಯೂ ಅಲ್ಲ; ಅವನಿಗೆ ಸುತನಿಲ್ಲ; ಅವನಿಗೆ ಸಹಾಯಿಯಾಗಿ ಯಾರೂ ಇಲ್ಲ. ಖುರ್‌ಆನಿನ ಈ ಪಾಠ ಜೊರಾಷ್ಟ್ರಿಯನ್ ರೀತಿಯ ಮತಗಳಲ್ಲಿ ಕಾಣುವ ದೇವಕಲ್ಪನೆಯನ್ನು ಸಂಪೂರ್ಣ ಖಂಡಿಸುತ್ತದೆ.

ಹೇಳುತ್ತದೆ (ಸೂರಃ ಹಿಜ್ರ್). ಆದರ ಸಾರಾಂಶ— ಮನುಷ್ಯನು ಮಾತನಾಡುವ ಗುಣ ವಿಶೇಷದಿಂದ ಕೂಡಿ ಅಭಿವೃದ್ಧಿಗೊಳ್ಳಲಿಕ್ಕಾಗಿ ಇತರ ಜೀವಿಗಳಿಂದ ವ್ಯತ್ಯಸ್ತವಾದ ರೀತಿಯಲ್ಲಿ ಸೃಷ್ಟಿಸಲ್ಪಟ್ಟ ಒಂದು ಜೀವಿಯೆಂದೂ ಅವನ ಶರೀರ ಮತ್ತು ಆತ್ಮ ದೇವಸೃಷ್ಟಿಯೆಂದೂ ಅವನು ವಿಶಿಷ್ಟವಾದೊಂದು ನಿರ್ಮಾಣದ ಮೂಲಕ ಅಸ್ತಿತ್ವವನ್ನು ಪಡೆದವನೆಂದೂ ಆಗಿದೆ. ಆದರೆ, ಮಣ್ಣು ಎಂಬುದರಿಂದ ಯಾವ ಮಣ್ಣನ್ನು ಉದ್ದೇಶಿಸಲಾಗಿದೆಯೆಂದು ಖುರ್‌ಆನ್ ಹೇಳುವುದಿಲ್ಲ. ಏಕೆಂದರೆ ಎಲ್ಲಾ ಮೂಲಧಾತುಗಳು ಮಣ್ಣಿನ ಅಂಶ. ಅದೇ ಪ್ರಕಾರ, ಯಾವ ರೀತಿಯಲ್ಲಿ ದೇವರು ಮನುಷ್ಯನನ್ನು ಸೃಷ್ಟಿಸಿದ್ದು, ಎಷ್ಟು ಕಾಲದೊಳಗೆ ಸೃಷ್ಟಿಸಿದ್ದು, ಯಾವೆಲ್ಲ ಘಟ್ಟಗಳನ್ನು ದಾಟಿ ಮನುಷ್ಯನು ಇಂದಿನ ಅವಸ್ಥೆಗೆ ತಲಪಿದ್ದು, ಹೇಗೆ ದೇವರು ಅವನಿಗೆ ಜೀವ ಕೊಟ್ಟದ್ದು, ಎಷ್ಟು ಹಂತಗಳಾಗಿ ಮತ್ತು ಯಾವೆಲ್ಲಾ ಹಂತಗಳಾಗಿ ನೀಡಿದ್ದು, ಹೇಗೆ ಅವನನ್ನು ಬೆಳಸಿಕೊಂಡು ಬಂದದ್ದು ಇತ್ಯಾದಿ ಸಂಗತಿಗಳ ಕುರಿತು ಸಹ ಖುರ್‌ಆನ್ ಮೌನವಹಿಸಿದೆ. ಈ ಸಂಗತಿಗಳನ್ನು ವಿವರಿಸುವುದು ಖುರ್‌ಆನಿನ ಲಕ್ಷ್ಯಕ್ಕೆ ಸಂಬಂಧವಿಲ್ಲದುದಾಗಿದೆ. ಆದ್ದರಿಂದಲೇ ಅದು ಆ ಬಗ್ಗೆ ಮೌನವಹಿಸಿದ್ದು. ಒಟ್ಟಾರೆ ಯಾವನೇ ಶಾಸ್ತ್ರಜ್ಞನಿಗೆ ಖುರ್‌ಆನಿನ ವಿವರಣೆಯನ್ನು ಆಕ್ಷೇಪಿಸುವುದು ಶಕ್ಯವಲ್ಲ. ಅದರಲ್ಲಿ ಮನುಷ್ಯ ಸೃಷ್ಟಿಯ ಸಮಷ್ಟಿಯಾದರೂ ಸರಿಯಾದ ಸ್ವಭಾವವನ್ನು ವಿವರಿಸಲಾಗಿದೆ. ಅದು ವಿಜ್ಞಾನದ ಯಾವ ಸ್ಥಾಪಿತ ಸತ್ಯಕ್ಕೂ ವಿರುದ್ಧವಲ್ಲ. ತದ್ವಿರುದ್ಧ, ವಿಜ್ಞಾನಕ್ಕೆ ದಾರಿ ತೋರಿಸುವ ಒಂದು ದೀಪಸ್ತಂಭವಾಗಿದೆ. ಪವಿತ್ರ ಖುರ್‌ಆನಿನ ಈ ವಿವರಣೆಗೆ ಯಾರಾದರೂ ತನ್ನ ಕಡೆಯಿಂದ ವ್ಯಾಖ್ಯಾನಕೊಟ್ಟು ಅದನ್ನು ವಿಜ್ಞಾನದ ಯಾವುದಾದರೂ ಸಿದ್ಧಾಂತಕ್ಕೆ ವಿರುದ್ಧವಾಗಿ ತಂದರೆ ಅದಕ್ಕೆ ಹೊಣೆಗಾರ ಆತನೇ. ಆ ಕಾರಣದಿಂದ ಖುರ್‌ಆನ್ ಆಕ್ಷೇಪಕ್ಕೆ ಗುರಿಯಾಗಲಾರದು.

ಇದೇ ಪ್ರಕಾರ ಹಝ್ರತ್ ಹವ್ವರನ್ನು ಹಝ್ರತ್ ಆದಮರ ಪಕ್ಕೆಲುಬಿನಿಂದ ಸೃಷ್ಟಿಸಲಾಯಿತೆಂದು ಹದೀಸಿನಲ್ಲಿ ಹೇಳಲಾಗಿದೆ. ಅದಮರ ದೇಹವನ್ನು ಸಿಗಿದು ಪಕ್ಕೆಲುಬನ್ನು ತೆಗೆದು ಹವ್ವರನ್ನು ಸೃಷ್ಟಿಸಿದ್ದೆಂದು ಕೆಲವರು ಇದಕ್ಕೆ ಅರ್ಥ ಕಲ್ಪಿಸಿ ಬಿಟ್ಟಿದ್ದಾರೆ. ಹಾಗೆ ಶಾಸ್ತ್ರಜ್ಞರಿಗೆ ಆಕ್ಷೇಪಕ್ಕೆ ಸಂದರ್ಭವೂ ದೊರೆಯಿತು.

ಆದರೆ, ಯಥಾರ್ಥದಲ್ಲಿ, ದೇವಪ್ರೋಕ್ತ ಗ್ರಂಥಗಳ ವಾಡಿಕೆಯಂತೆ ಪ್ರಸ್ತುತ ವಚನ ರೂಪಕವಾಗಿ ಪ್ರಯೋಗಿಸಲ್ಪಟ್ಟಿದೆ. ಅದರ ಅರ್ಥ, ಸ್ತ್ರೀಯು ಪುರುಷನ ಜೊತೆಗಾರ್ತಿಯಾಗಲಿಕ್ಕಾಗಿ ಸೃಷ್ಟಿಸಲ್ಪಟ್ಟಿದ್ದಾಳೆಂದೂ ಅವರೀರ್ವರೂ ಮನುಷ್ಯಜೀವಿತದ ಅಭೇದ್ಯ ಘಟಕಗಳೆಂದೂ ಆಗಿದೆ. ಆದರೆ ಯಾವ ರೀತಿ ಪಕ್ಕೆಲುಬು ಬಾಗಿರುತ್ತದೋ ಅದೇ ರೀತಿ ಸ್ತ್ರೀಯಲ್ಲಿ ಕೆಲವು ಕಾರಣಗಳಿಂದ ಸ್ವಾಭಾವಿಕವಾದ ಕೆಲವು ದೌರ್ಬಲ್ಯಗಳಿವೆ. ಅವಳೊಡನೆ ವರ್ತಿಸುವಾಗ ಆ ದುರ್ಬಲತೆಗಳನ್ನು ಮುಂದಿಟ್ಟುಕೊಂಡು ಔದಾರ್ಯ ಮತ್ತು ಸಹಿಷ್ಣುತೆಯನ್ನು ಕೈಗೊಳ್ಳಬೇಕಾಗಿದೆ. ಮುಹಮ್ಮದ್ ಪೈಗಂಬರ್ (ಸ) ಬೇರೊಂದೆಡೆಯಲ್ಲಿ ಸ್ತ್ರೀಯ ಬಗ್ಗೆ ಇದೇ ಪದವನ್ನೇ ಪ್ರಯೋಗಿಸಿದ್ದಾರೆ. ಸ್ತ್ರೀ ಒಂದು ಬಾಗಿದ ಪಕ್ಕೆಲುಬಿನಂತೆ; ಆ ಡೊಂಕು ಸ್ತ್ರೀ ವರ್ಗದ ಸೌಂದರ್ಯವಾಗಿದೆ. ಸ್ತ್ರೀಯ ಆ ದೌರ್ಬಲ್ಯವನ್ನು ಮುಂದಿರಿಸಿ ಪುರುಷನು ಅವಳೊಡನೆ ವರ್ತಿಸಬೇಕು; ಅವಳ ಪ್ರಕೃತಿ ಸೌಂದರ್ಯ ನಷ್ಟವಾಗುವ ರೀತಿಯಲ್ಲಿ ಆ ಡೊಂಕನ್ನು ನೇರ ಮಾಡಲು ಪ್ರಯತ್ನಿಸಬಾರದೆಂದು ಪೈಗಂಬರರು ನುಡಿದಿರುವರು.

ಸಂಕ್ಷಿಪ್ತವಾಗಿ, ಪವಿತ್ರ ಖುರ್‌ಆನ್ ಮತ್ತು ಹದೀಸಿನಲ್ಲಿ ಲೋಕಾರಂಭದ ಕುರಿತು ಮತ್ತು ಆದಮರ ಸೃಷ್ಟಿಯ ಕುರಿತು ಪ್ರಯೋಗಿಸಿದ ಮಾತುಗಳ ಬಗ್ಗೆ ಆಲೋಚಿಸಿದರೆ, ಅವು ಯಾವುದೇ ರೀತಿಯ ಆಕ್ಷೇಪಕ್ಕೆ ಎಡೆಕೊಡುವುದಿಲ್ಲವೆಂದೂ ಅವುಗಳ ಕುರಿತು ಆಕ್ಷೇಪವೆತ್ತುವವರು ಅಥವಾ ಅವು ಆಕ್ಷೇಪಾರ್ಹಗಳೆಂದು ಭಾವಿಸುವವರು ಅಜ್ಞಾನದಿಂದ ಹಾಗೆ ಮಾಡುತ್ತಾರೆಂದೂ ಮನಗಾಣಲು ಸಾಧ್ಯ. ಅದೇ ಪ್ರಕಾರ ಇತರ ದೈವಪ್ರೋಕ್ತ ಗ್ರಂಥಗಳ ಆಕ್ಷೇಪಾರ್ಹವೆಂದು ಭಾವಿಸಲ್ಪಟ್ಟಿರುವ ಪ್ರಸ್ತಾವನೆಗಳಲ್ಲಿ ಹೆಚ್ಚಿನವುಗಳ ಕುರಿತು ತಪ್ಪು ಕಲ್ಪನೆ ಉಂಟಾಗಿದೆಯೆಂದೂ ಅವುಗಳ ಸರಿಯಾದ ಅರ್ಥ ಗ್ರಹಿಸಲ್ಪಡಲಿಲ್ಲವೆಂದೂ ನನ್ನ ಭಾವನೆ. ಎಲ್ಲಿಯಾದರೂ ಸರಿಯಾದ ಯಾವುದೇ ಆಕ್ಷೇಪ ಉದ್ಭವಿಸುವುದಾದರೆ ಅದು ನಂತರ ಕಾಲದ ಹಸ್ತಕ್ಷೇಪದ ಫಲವಾಗಿದೆ. ದೌರ್ಭಾಗ್ಯವಶಾತ್ ಪವಿತ್ರ ಖುರ್‌ಆನ್ ಹೊರತು ಬೇರೆ ಯಾವುದೇ ದೈವಪ್ರೋಕ್ತ ಗ್ರಂಥವಾಗಲಿ ಮನುಷ್ಯನ ಹಸ್ತಕ್ಷೇಪದಿಂದ ಸುರಕ್ಷಿತವಾಗಿಲ್ಲ. ಆದರೆ ದೇವಕೃಪೆಯಿಂದ ಪವಿತ್ರ ಖುರ್‌ಆನ್ ಎಲ್ಲಾ ವಿಧ

# ಇಸ್ಲಾಂ ಮತ್ತು ಕೋಮು ಸೌಹಾರ್ದ*

★ ಎಂ. ಪಿ. ಇಬ್ರಾಹಿಂ

ಇಂದು ಲೋಕದಲ್ಲಿ ಅನೇಕ ಧರ್ಮಗಳನ್ನು ನಾವು ಕಾಣುತ್ತೇವೆ. ವಿಶೇಷವಾಗಿ ನಮ್ಮ ಭಾರತ ಭೂಮಿಯು ಮತ-ಧರ್ಮಗಳ ಒಂದು ಪ್ರದರ್ಶನಾಲಯವಾಗಿದೆ. ಭಾರತದಲ್ಲಿ ಇಲ್ಲದಿರುವ ಧರ್ಮವೇ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಹೀಗಿರುವಾಗ ವಿವಿಧ ಧರ್ಮಗಳಲ್ಲಿ ವಿಶ್ವಾಸ ಹೊಂದಿರುವ, ವಿವಿಧ ಮತಾನುಯಾಯಿಗಳು ಜೀವಿಸುತ್ತಿರುವ ಈ ಲೋಕದಲ್ಲಿ – ಮುಖ್ಯವಾಗಿ ನಮ್ಮ ಭಾರತದಲ್ಲಿ ಅವರೆಲ್ಲರೂ ಪರಸ್ಪರ ಮೈತ್ರಿಯಿಂದಲೂ ಸೌಹಾರ್ದದಿಂದಲೂ ಬಾಳಬೇಕಾದುದು ಅತ್ಯಂತ ಅಗತ್ಯವಾಗಿರುತ್ತದೆ. ಶಾಂತಿಯಿಂದಲೂ ಸಮಾಧಾನದಿಂದಲೂ ಬಾಳ್ವೆಯನ್ನು ನಡೆಸಲು ಎಲ್ಲರೂ ಇಚ್ಛಿಸುತ್ತಾರೆ. ಎಲ್ಲಿ ಶಾಂತಿ ಮತ್ತು ಸಮಾಧಾನ ಇಲ್ಲವೋ ಅಲ್ಲಿ ಮನುಷ್ಯನಿಗೆ ಸೌಖ್ಯದಿಂದ ಜೀವಿಸಲು ಸಾಧ್ಯವಿಲ್ಲ. ಈ ಮಹಾ ಧರ್ಮ ಸಮ್ಮೇಳನದಲ್ಲಿ ಇಸ್ಲಾಂ ಧರ್ಮದ ಪ್ರತಿನಿಧಿಯೂಗಿದ್ದುಕೊಂಡು "ಇಸ್ಲಾಂ ಮತ್ತು ಕೋಮು ಸೌಹಾರ್ದ" ಎಂಬ ವಿಷಯದಲ್ಲಿ ಒಂದೆರಡು ಮಾತುಗಳನ್ನಾಡಲು ಸಂದರ್ಭ ಲಭಿಸಿದ್ದರಲ್ಲಿ ನನಗೆ ಅತೀವ ಸಂತೋಷವಿದೆ.

ಪ್ರಿಯ ಧರ್ಮಾಭಿಮಾನಿಗಳೇ, ಅತ್ಯಂತ ಆಪತ್ಕರವಾದ ಒಂದು ಕಾಲದಲ್ಲಿ ನಾವಿಂದು ಜೀವಿಸುತ್ತಿದ್ದೇವೆ. ಅಂದರೆ, ಇಂದಿನ ಜಗತ್ತಿನಲ್ಲಿ ಧರ್ಮಗಳಿಗೆ ಸ್ಥಾನವು ಕಡಿಮೆಯಾಗುತ್ತಾ ಬರುತ್ತಿದೆ. ಮತ ಧರ್ಮಗಳನ್ನು ವಿರೋಧಿಸುವ, ಪರಮಾತ್ಮನ ಅಸ್ತಿತ್ವವನ್ನೇ ನಿರಾಕರಿಸುವ ಬಹಳ ಮಂದಿಗಳನ್ನು ನಾವು ಕಾಣುತ್ತೇವೆ. ಮನುಷ್ಯ ಜೀವನದಲ್ಲಿ ಧರ್ಮಗಳ ಆವಶ್ಯಕತೆಯೇ ಇಲ್ಲವೆಂಬುದು ಅವರ ವಾದ. ಧರ್ಮಗಳ ಹೆಸರಿನಲ್ಲಿ ಮತಸ್ಥಾಪಕರೂ ಮತಾಚಾರ್ಯರೂ ಮನುಷ್ಯಕುಲವನ್ನು ವಂಚಿಸಿದ್ದಾರೆಂದು ಅವರು ಹೇಳುತ್ತಾರೆ. ಮನುಷ್ಯನಿಗೆ ಧರ್ಮಗಳ ಮತ್ತು ಅದರ ನೀತಿ ಸಂಹಿತೆಗಳ ಆವಶ್ಯಕತೆಯಿಲ್ಲ ಎಂದು ಮಾತ್ರವಲ್ಲ ಲೋಕದಲ್ಲಿ ಧರ್ಮಗಳೇ ಇರಬಾರದು ಎಂಬುದನ್ನು ಧೃಢೀಕರಿಸಲು ಅವರು ತೋರಿಸುವ ಒಂದು ಕಾರಣ ವಿಭಿನ್ನ ಧರ್ಮಿಯರಲ್ಲಿ ಕಂಡುಬರುವ ಪರಸ್ಪರ ಕಲಹ ಮತ್ತು ದ್ವೇಷವಾಗಿದೆ. ಪ್ರಪಂಚದಲ್ಲಿರುವವರೆಲ್ಲಾ ಒಂದೇ ಮತಸ್ಥರಲ್ಲ; ಒಂದೇ ಧರ್ಮದಲ್ಲಿ ವಿಶ್ವಾಸವಿಡುವವರಲ್ಲ. ಹಾಗಿರುವಾಗ ಇವರೊಳಗೆ ಅನ್ಯೋನ್ಯ ಕಲಹವೂ ಹೋರಾಟವೂ ತಪ್ಪಿದ್ದಲ್ಲ–ಎಂದು ಧರ್ಮದ ಎದುರಾಳಿಗಳು ಹೇಳುತ್ತಾರೆ. ಮತಪರವಾದ ವ್ಯತ್ಯಾಸಗಳನ್ನು ಆಧಾರವಾಗಿರಿಸಿಕೊಂಡು ಇಂದು ಲೋಕದಲ್ಲಿ ವರ್ಣಿಸಲಸಾಧ್ಯವಾದಂತಹ ಕಲಹಗಳೂ ಕೊಲೆಗಳೂ ಕೊಳ್ಳೆಗಳೂ ನಡೆಯುತ್ತಿವೆ ಎಂಬುದಂತೂ ಸತ್ಯ. ಆದರೆ, ಇವಕ್ಕೆಲ್ಲಾ

( ಆರನೇ ಪುಟದಿಂದ )

ದಲ್ಲೂ ಸುರಕ್ಷಿತವಾಗಿದೆ. ಅದು ಮಾನವನ ಹಸ್ತಕ್ಷೇಪದಿಂದ ಸುರಕ್ಷಿತವಾಗಿದೆಯೆಂದು ಇಸ್ಲಾಮಿನ ಬದ್ಧ ವೈರಿಗಳು ಸಹ ಸಾಕ್ಷ್ಯ ವಹಿಸಿದ್ದಾರೆ. ಒಟ್ಟಾರೆ, ಪವಿತ್ರ ಖುರ್‌ಆನಿಗೆ ಸಂಬಂಧಿಸಿ, ಅದರಲ್ಲಿ ಆಕ್ಷೇಪಾರ್ಹವಾದ ಏನೂ ಇಲ್ಲವೆಂದೂ ಯಾವುದೇ ವೈಜ್ಞಾನಿಕ ಸತ್ಯ ಅದರ ಅಧ್ಯಾಪನಕ್ಕೆ ವಿರುದ್ಧವಲ್ಲವೆಂದೂ ನಾವು ಧೈರ್ಯದಿಂದ ಹೇಳಬಲ್ಲೆವು. ವೈಜ್ಞಾನಿಕ ಸತ್ಯವು ಖುರ್‌ಆನಿಗೆ ವಿರುದ್ಧವಾಗುವುದು ಸಂಭವನೀಯವಲ್ಲ. ಏಕೆಂದರೆ ಪವಿತ್ರ ಖುರ್‌ಆನ್ ದೇವರ ವಚನವಾಗಿದೆ. ವಿಜ್ಞಾನವು ವಿವರಿಸುವ ಪ್ರಕೃತಿ ವಿಚಾರ ಅವನ ಕ್ರಿಯೆಯಾಗಿದೆ. ದೇವರ ವಚನ ಮತ್ತು ಕ್ರಿಯೆ ಪರಸ್ಪರ ವಿರುದ್ಧವಾಗುವುದು ಅಸಂಭಾವ್ಯ. ❖

* 1986ನೇ ಫೆಬ್ರವರಿ 16ರಂದು ಶಿರಸಿಯಲ್ಲಿ ಸಮಾವೇಶಗೊಂಡ ಭಾರತೀಯ ಧರ್ಮ ಸಮ್ಮೇಳನದ 10ನೆಯ ಅಧಿವೇಶನದಲ್ಲಿ ಮಾಡಿದ ಭಾಷಣ.

ಧರ್ಮಗಳೇ ಕಾರಣ; ಆದುದರಿಂದ ಧರ್ಮಗಳೇ ಬೇಡ ವೆಂದು ಹೇಳುವುದು ಯಾವತ್ತೂ ಸರಿಯಲ್ಲ. ಲೋಕ ದಲ್ಲಿ ಇಂದು ಅಸ್ತಿತ್ವದಲ್ಲಿರುವ ಯಾವುದೇ ಮತವೂ ಯಾವುದೇ ಧರ್ಮವೂ ಅಕ್ರಮವನ್ನೂ ಅನಾಚಾರ ವನ್ನೂ ಕಲಹವನ್ನೂ ಉಪದೇಶಿಸುವುದಿಲ್ಲ ಎಂದು ನಾನು ಮೊತ್ತಮೊದಲಾಗಿ ಹೇಳಬಯಸುತ್ತೇನೆ. ಧರ್ಮ ಗಳ ನಿಜವಾದ ಉಪದೇಶಗಳನ್ನು ಸರಿಯಾಗಿ ಗ್ರಹಿಸದ ಯಾರೋ ಅಲ್ಪಜ್ಞಾನಿಗಳು ಧರ್ಮದ ಹೆಸರಿನಲ್ಲಿ ಅತ್ಯಾಚಾರವೆಸಗಿದ್ದರೆ ಅದಕ್ಕೆ ಧರ್ಮಗಳು ಎಂದೂ ಹೊಣೆಯಲ್ಲ. ನನಗೆ ತಿಳಿದಷ್ಟರ ಮಟ್ಟಿಗೆ ಎಲ್ಲಾ ಧರ್ಮಗಳೂ ಶಾಂತಿಯನ್ನೂ ಸಮಾಧಾನವನ್ನೂ ಪರ ಸ್ಪರ ಸೌಹಾರ್ದವನ್ನೂ ಉಪದೇಶಿಸುತ್ತವೆ. ಇಸ್ಲಾಂ ಧರ್ಮದ ಪ್ರತಿನಿಧಿಯೆಂಬ ನೆಲೆಯಲ್ಲಿ ನಾನು ಹೇಳು ತ್ತೇನೆ: "ಇಸ್ಲಾಂ" ಎಂಬ ನಾಮವೇ ಶಾಂತಿಯ ಸಂಕೇತವಾಗಿದೆ. ಪರಸ್ಪರ ಶಾಂತಿಯಿಂದಲೂ ಸೌಹಾ ರ್ದದಿಂದಲೂ ವರ್ತಿಸಲು ಇಸ್ಲಾಂ ಧರ್ಮವು ಉಪ ದೇಶಿಸುತ್ತದೆ. ಇಸ್ಲಾಂ ಮತದ ಹೊರಗಿನವರನ್ನು ಹೀನ ಭಾವದಿಂದ ಕಾಣಲು ಇಸ್ಲಾಂ ಹೇಳುವುದಿಲ್ಲ. ಎಲ್ಲರೂ ಏಕ ಪರಮಾತ್ಮನ ಸೃಷ್ಟಿಗಳು. ಮನುಷ್ಯರೆಂಬ ನೆಲೆಯಲ್ಲಿ ಎಲ್ಲರೂ ಸಮಾನರು–ಸಹೋದರರು. ಎಲ್ಲ ರನ್ನೂ ಸೃಷ್ಟಿಸಿದವನು ಪರಮಾತ್ಮನೇ ಆಗಿರುವುದರಿಂದ ಅವನ ಮಕ್ಕಳಂತಿರುವ ನಾವೆಲ್ಲರೂ ಪರಸ್ಪರ ಸಹೋ ದರರಾಗಿದ್ದೇವೆ. ಮುಸ್ಲಿಮರಿಗೆ ಬೇರೆ ದೇವರು. ಹಿಂದೂಗಳಿಗೆ ಬೇರೆ. ಕ್ರೈಸ್ತರಿಗೆ ಬೇರೆ ಎಂಬುದಾಗಿ ಇಸ್ಲಾಂ ಹೇಳುವುದಿಲ್ಲ. ನೋಡಿರಿ. ಇಸ್ಲಾಮಿನ ಧರ್ಮ ಗ್ರಂಥವಾದ ಪವಿತ್ರ ಖುರ್‌ಆನಿನ ಮೊತ್ತಮೊದಲಿನ ವಚನವು ''ಅಲ್ ಹಮ್ದು ಲಿಲ್ಲಾಹಿ ರಬ್ಬಿಲ್ ಆಲ ಮೀನ್" ಎಂದಾಗಿದೆ. ಇದರರ್ಥ "ಸಮಸ್ತ ಜಗತ್ತಿನ ಸೃಷ್ಟಿಕರ್ತನೂ ಪಾಲಕನೂ ಆದ ಪರಮಾತ್ಮನು ಮಾತ್ರ ಎಲ್ಲಾ ಸ್ತುತಿಗಳಿಗೂ ಅರ್ಹನು" ಎಂದು. 'ರಬ್ಬಿಲ್ ಆಲಮೀನ್' ಎಂದರೆ ಸರ್ವ ಜಗತ್ತಿನ ಪಾಲಕನಾದ ಪರ ಮಾತ್ಮ ಎಂದರ್ಥ. ಇಲ್ಲಿ ಮುಸ್ಲಿಮರ ದೇವರೆಂದೋ ಇನ್ನಾವುದೇ ಪಂಗಡದವರ ದೇವರೆಂದೋ ಹೇಳದೆ ಸರ್ವಲೋಕ ಪಾಲಕನಾದ ಏಕ ಪರಮಾತ್ಮ ಎಂಬುದಾಗಿ ಹೇಳಿದ್ದನ್ನು ಕಾಣಬಹುದು. ಅವನು ಎಲ್ಲರ ಒಡೆ ಯನು. ಎಲ್ಲಾ ಸೃಷ್ಟಿಗಳೂ ಅವನ ಮಕ್ಕಳು.

ಮಾನವರು ಪರಸ್ಪರ ಸ್ನೇಹದಿಂದಲೂ ಸೌಹಾರ್ದ ದಿಂದಲೂ ವರ್ತಿಸಿ ಪ್ರಪಂಚದಲ್ಲಿ ಶಾಂತಿಯು ನೆಲೆ ಗೊಳ್ಳುವಂತಾಗಲು ಇಸ್ಲಾಂ ಧರ್ಮವು ಹಲವಾರು ಮೂಲಭೂತ ಸಿದ್ಧಾಂತಗಳನ್ನು ನಮ್ಮ ಮುಂದಿಟ್ಟಿದೆ. ಅದರಲ್ಲಿ ಒಂದನೆಯದು ಪರಮಾತ್ಮನ ಏಕತ್ವವಾಗಿದೆ. ಅಂದರೆ, ನಮ್ಮನ್ನೆಲ್ಲಾ ಸೃಷ್ಟಿಸಿ ಪೋಷಿಸುವ ಪರ ಮಾತ್ಮನು ಜಗತ್ತಿನ ಏಕ ತಂದೆಯಂತಿರುವನು. ಆಗ, ಅವನ ಮಕ್ಕಳಾದ ನಾವೆಲ್ಲರೂ ಸಹೋದರ ರಾದೆವು. ಹಿಂದುಗಳೋ ಕ್ರೈಸ್ತರೋ ಸಿಖ್ಖರೋ ಮುಸ್ಲಿಮರೋ ಯಾವ ಮತಸ್ಥರೇ ಆದರೂ ಪರಸ್ಪರ ಸಹೋದರರು. ಇಸ್ಲಾಂ ಧರ್ಮವು ಸಮರ್ಪಿಸುವ ಮಹ ತ್ವಾದ ಈ ಶಾಂತಿಯ ಸಂದೇಶವನ್ನು ಚೆನ್ನಾಗಿ ಗ್ರಹಿ ಸಲು ಮನುಷ್ಯರಿಗೆ ಸಾಧ್ಯವಾಯಿತೆಂದರೆ ಲೋಕವು ಶಾಂತಿಯ ನೆಲೆಬೀಡಾಗುವುದರಲ್ಲಿ ಸಂದೇಹವಿಲ್ಲ.

ಸಮುದಾಯ ಮೈತ್ರಿಗಾಗಿ ಇಸ್ಲಾಂ ಮತವು ಮುಂದಿಡುವ ಇನ್ನೊಂದು ಮಹತ್ವಾದ ಸಂದೇಶವು. ಎಲ್ಲಾ ಧರ್ಮಗಳ ಮತ್ತು ಧರ್ಮಸ್ಥಾಪಕರ ಮೂಲವು ಒಂದೇ ಆಗಿದೆಯೆಂಬ ತತ್ವವಾಗಿದೆ. ಪ್ರಪಂಚದಲ್ಲಿ ಅವತರಿಸಿದ ಎಲ್ಲಾ ಪ್ರವಾದಿಗಳ ಹಾಗೂ ಅವತಾರ ಪುರುಷರ ಮೂಲವು ಸತ್ಯದೇವನಾದ ಪರಮಾತ್ಮನಾಗಿ ಗಿರುವುದರಿಂದ ಅಂತಹ ಮಹಾ ಪುರುಷರೆಲ್ಲರನ್ನೂ ಅಂಗೀಕರಿಸುವಂತೆಯೂ ಅವರನ್ನು ಆದರಿಸುವಂತೆಯೂ ಪವಿತ್ರ ಖುರ್‌ಆನ್ ನಿರ್ದೇಶಿಸುತ್ತದೆ. ಸರ್ವ ಜಗತ್ತಿನ ಪಾಲಕನಾದ ಪರಮಾತ್ಮನು ಜಗತ್ತಿನ ಎಲ್ಲಾ ಮೂಲೆ ಮೂಲೆಗಳಲ್ಲೂ ಜೀವಿಸುವವರಿಗೂ ಅಗತ್ಯವಾಗಿರುವ ಎಲ್ಲಾ ಭೌತಿಕ ಸಾಮಗ್ರಿಗಳನ್ನೂ ಒದಗಿಸಿ ಕೊಟ್ಟಿರು ವನು. ಸೂರ್ಯ, ಭೂಮಿ, ವಾಯು, ನೀರು ಮೊದ ಲಾದ ಎಲ್ಲಾ ಅನುಗ್ರಹಗಳನ್ನೂ ದೇವನು ತನ್ನ ಎಲ್ಲಾ ಸೃಷ್ಟಿಗಳಿಗೂ ಏನೊಂದು ಬೇಧ ಭಾವನೆಯೂ ಇಲ್ಲದೆ ಅನುಗ್ರಹಿಸಿರುವುದನ್ನು ನಾವು ಕಾಣುತ್ತೇವೆ. ಹೀಗಿರು ವಾಗ ಆಧ್ಯಾತ್ಮಿಕ ಅಭಿವೃದ್ಧಿಗಾಗಿ ಅವನು ಕೆಲವು ಸಮು ದಾಯಗಳಲ್ಲಿ ಮಾತ್ರವೇ ಪ್ರವಾದಿಗಳನ್ನೂ ಅವತಾರ ಪುರುಷರನ್ನೂ ಕಳುಹಿಸಿದನು ಎಂದು ಹೇಳುವುದು ಹೇಗೆ? ಈ ವಿಷಯದಲ್ಲಿ ಇಸ್ಲಾಂ ಧರ್ಮವು ಅತ್ಯಂತ ಮಹತ್ವವಾದ ಒಂದು ತತ್ವವನ್ನು ನಮಗೆ ಕಲಿಸಿ ಕೊಟ್ಟಿದೆ. ಲೋಕದ ವಿವಿಧ ಭಾಗಗಳಲ್ಲಿ ಜನಿಸಿದ

ಜನರನ್ನು ಧಾರ್ಮಿಕ ತತ್ವಗಳೆಡೆಗೆ ಆಹ್ವಾನಿಸಿದ ಎಲ್ಲಾ ಪ್ರವಾದಿಗಳೂ ಅವತಾರ ಪುರುಷರೂ ಪರಮಾತ್ಮನ ಸತ್ಯದೂತರೆಂದು ಪವಿತ್ರ ಖುರ್‌ಆನ್ ಘೋಷಿಸುತ್ತದೆ. ನೋಡಿರಿ: "ವ ಇನ್ ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನದೀರ್" ಅಂದರೆ "ಪ್ರವಾದಿಗಳು ಕಳುಹಿಸಲ್ಪಡದ ಜನ ಸಮೂಹವೇ ಇಲ್ಲ" ಎಂದೂ "ವಲಿ ಕುಲ್ಲಿ ಖೌಮಿನ್ ಹಾದ್"— "ಎಲ್ಲಾ ಸಮುದಾಯಗಳಲ್ಲೂ ಮಾರ್ಗದರ್ಶಕರು ಅವತರಿಸಿರುವರು" ಎಂದೂ ಪವಿತ್ರ ಖುರ್‌ಆನ್ ಹೇಳುತ್ತದೆ. ನಿಜವಾಗಿಯೂ ಇದು ಇಸ್ಲಾಂ ಧರ್ಮದ ಮಹತ್ವಗಳಲ್ಲೊಂದಾಗಿದೆ. ಇತರ ಮತಸ್ಥರ ಪ್ರವಾದಿಗಳನ್ನೂ ಮಹಾಪುರುಷರನ್ನೂ ಆದರಿಸಿ ಅವರ ಸತ್ಯತೆಯನ್ನು ಅಂಗೀಕರಿಸಬೇಕೆಂಬ ತತ್ವವನ್ನು ಹೇಳುತ್ತಾ ಸಮುದಾಯಗಳೆಡೆಯಲ್ಲಿ ಮೈತ್ರಿಯನ್ನೂ ಸೌಹಾರ್ದವನ್ನೂ ಬೆಳೆಸಲು ಇಸ್ಲಾಂ ಧರ್ಮವು ಕಲಿಸಿದೆ. ಪವಿತ್ರ ಖುರ್‌ಆನ್ ಕಲಿಸುವ ಈ ತತ್ವದ ಆಧಾರದ ಮೇಲೆ ಅಹ್ಮದಿಯೂ ಪಂಗಡದ ಮುಸ್ಲಿಮರಾದ ನಾವು ಯಾವ ರೀತಿಯಲ್ಲಿ ಮುಹಮ್ಮದ್ ಪೈಗಂಬರರನ್ನು ಒಬ್ಬ ದೇವದೂತರೆಂದು ನಂಬುತ್ತೇವೋ ಅದೇ ರೀತಿ ಇಸ್ರಾಯೀಲ್ಯರ ಮೋಶೆಯನ್ನೂ ಕ್ರೈಸ್ತರ ಯೇಸುಕ್ರಿಸ್ತರನ್ನೂ ಭಾರತ ಭೂಮಿಯಲ್ಲಿ ಜನ್ಮವೆತ್ತಿದ ಶ್ರೀಕೃಷ್ಣ, ಶ್ರೀರಾಮಚಂದ್ರ, ಶ್ರೀಬುದ್ಧ ಮೊದಲಾದವರನ್ನೂ ಪರಮಾತ್ಮನ ಸಂದೇಶವಾಹಕರಾದ ಸತ್ಯದೂತರೆಂದು ನಂಬುತ್ತೇವೆ. ಅಹ್ಮದಿಯೂ ಮುಸ್ಲಿಂ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರು ಖುರ್‌ಆನಿನ ಈ ಪ್ರಬೋಧನೆಯ ಆಧಾರದಲ್ಲಿ ಈ ಕುರಿತು ಬಹಳವಾಗಿ ಹೇಳಿರುವರು. ಮಹಾತ್ಮ ಶ್ರೀಕೃಷ್ಣ ಒಬ್ಬ ದೈವನಿಯೋಜಿತ ಸಂದೇಶವಾಹಕರಾಗಿದ್ದರು ಎಂದು ತಿಳಿಸಿಕೊಡುವ ಅವರ ಹೇಳಿಕೆಗಳಲ್ಲಿ ಒಂದನ್ನು ನಾನಿಲ್ಲಿ ಹೇಳ ಬಯಸುತ್ತೇನೆ. ಅವರು ಹೇಳುತ್ತಾರೆ: "ನನಗೆ ಪರಮಾತ್ಮನು ತಿಳಿಸಿಕೊಟ್ಟಿರುವಂತೆ ಮಹಾರಾಜ್ ಕೃಷ್ಣ ಯಥಾರ್ಥದಲ್ಲಿ ಪರಿಪೂರ್ಣನಾದ ಒಬ್ಬ ಮಹಾತ್ಮರಾಗಿದ್ದರು. ಹಿಂದೂಗಳ ಋಷಿಗಳಲ್ಲೂ ಅವತಾರ ಪುರುಷರಲ್ಲೂ ಅವರಿಗೆ ತುಲ್ಯರಾದವರು ಬೇರಾರೂ ಇಲ್ಲ. ಅವರು ದೇವರಿಂದ ದಿವ್ಯವಾಣಿ ಲಭಿಸುತ್ತಿದ್ದ ಒಬ್ಬ ಅವತಾರ ಪುರುಷ ಅಥವಾ ಪ್ರವಾದಿ ಆಗಿದ್ದರು. ಅವರು ಆರ್ಯಾವರ್ತವನ್ನು ಪಾಪದಿಂದ ವಿಮೋಚಿಸಿದ ಒಬ್ಬ ಅನುಗ್ರಹೀತ ವ್ಯಕ್ತಿಯೂಗಿದ್ದರು. ನಿಜವಾಗಿಯೂ ಅವರು ತನ್ನ ಕಾಲದ ಒಬ್ಬ ಪ್ರವಾದಿಯೂಗಿದ್ದರು. ಆದರೆ, ಅವರ ಪ್ರಬೋಧನೆಗಳೆಲ್ಲವೂ ಕಾಲಾಂತರದಲ್ಲಿ ಬಹಳಷ್ಟು ಮಾರ್ಪಾಟಿಗೆ ಗುರಿಯೂದುವು. ಅವರಾದರೋ ದೇವಪ್ರೇಮದಲ್ಲಿ ಅನುರಕ್ತರೂ ಧರ್ಮವನ್ನು ಪ್ರೀತಿಸಿ ಅಧರ್ಮವನ್ನು ವಿರೋಧಿಸಿದ ಒಬ್ಬ ಪುಣ್ಯಾತ್ಮರೂ ಆಗಿದ್ದರು". (ಲೆಕ್ಚರ್ ಸಿಯೂಲ್ ಕೋಟ್: ಪುಟ-33,34).

ಮಹಾತ್ಮ ಶ್ರೀಕೃಷ್ಣರ ಕುರಿತು ಇಸ್ಲಾಂ ಮತ ಸ್ಥಾಪಕರಾದ ಹಝ್ರತ್ ಮುಹಮ್ಮದ್ ಪೈಗಂಬರರು ಹೇಳಿದುದನ್ನು ಕಾಣಿರಿ: "ಕಾನ ಫಿಲ್ ಹಿಂದಿ ನಬಿಯ್ಯುನ್ ಅಸ್‌ವದುಲ್ಲೌನಿ ಇಸ್‌ಮುಹು ಕಾಹಿನ" ಅಂದರೆ "ಭಾರತದಲ್ಲಿ ಕೃಷ್ಣವರ್ಣದ ಒಬ್ಬ ಪ್ರವಾದಿಯು ಅವತರಿಸಿದ್ದರು. ಅವರ ಹೆಸರು ಕಾಹಿನ ಎಂದಾಗಿತ್ತು". 'ಕಾಹಿನ' ಎಂಬುದು ಕೃಷ್ಣ ಎಂಬ ಹೆಸರಿನ ಅರಬ್ಬೀ ಭಾಷೆಯ ರೂಪಬೇಧವಾಗಿರಬಹುದೆಂದು ತಿಳಿಯಬೇಕಾಗಿದೆ. ಈ ರೀತಿ ಇಸ್ಲಾಂ ಧರ್ಮವು ಅನ್ಯಮತಸ್ಥರೆಡೆಯಲ್ಲಿ ಅವತರಿಸಿದ ಮಹಾಪುರುಷರ ಸತ್ಯತೆಯನ್ನು ಅಂಗೀಕರಿಸಬೇಕೆಂದೂ ಅವರನ್ನು ಗೌರವಾದರಗಳಿಂದ ಕಾಣಬೇಕೆಂದೂ ಆಜ್ಞಾಪಿಸುತ್ತಾ ಕೋಮು-ಸೌಹಾರ್ದಕ್ಕೆ ಅತಿ ಮಹತ್ವಾದ ಒಂದು ಬುನಾದಿಯನ್ನು ಹಾಕಿದೆ. ಎಲ್ಲಾ ಪ್ರವಾದಿಗಳಲ್ಲೂ ವಿಶ್ವಾಸವಿಡುವಂತೆ ಪವಿತ್ರ ಖುರ್‌ಆನ್ ಮುಸ್ಲಿಮರೊಡನೆ ಆಜ್ಞಾಪಿಸಿದೆ. ಮುಹಮ್ಮದ್ ಪೈಗಂಬರರನ್ನೂ ಇಸ್ರಾಯೀಲ್ಯ ಪ್ರವಾದಿಗಳನ್ನೂ ಮಾತ್ರವೇ ಅಂಗೀಕರಿಸಿಕೊಂಡು ಉಳಿದ ಪ್ರವಾದಿಗಳನ್ನು ತಿರಸ್ಕರಿಸುವುದಾದರೆ ಅಂತಹವರು ಇಸ್ಲಾಂ ಧರ್ಮದಲ್ಲಿ ಒಳಪಡುವುದಿಲ್ಲ. ಸೂಕ್ಷ್ಮವಾಗಿ ಪರಿಶೀಲಿಸುವುದಾದರೆ, ಕೋಮು ಸೌಹಾರ್ದಕ್ಕಾಗಿ ಇಸ್ಲಾಂ ಧರ್ಮವು ಎತ್ತಿ ಹಿಡಿದ ಮೂಲಭೂತವಾದ ಈ ತತ್ವಗಳು ಇತರ ಧರ್ಮಗ್ರಂಥಗಳಲ್ಲಿ ಕೂಡ ಪ್ರತಿಪಾದಿಸಲ್ಪಟ್ಟಿರುವುದು ಕಾಣಬಹುದು. ಮಾನವರನ್ನು ಆಧ್ಯಾತ್ಮಿಕ ಮೌಲ್ಯಗಳತ್ತ ಆಹ್ವಾನಿಸಿ ದೈವಜ್ಞಾನವನ್ನು ಜನರಿಗೆ ಬೋಧಿಸಿದ ಎಲ್ಲಾ ಪ್ರವಾದಿಗಳ ಮೂಲವೂ ಜಗತ್ಪಾಲಕನಾದ ಏಕ ಪರಮಾತ್ಮನು ಎಂದು ಹಿಂದೂ ಧರ್ಮದ ಅಧಿಕೃತ ಧರ್ಮಗ್ರಂಥವಾದ ಶ್ರೀಮದ್ಭಗವದ್ಗೀತೆಯಲ್ಲಿ ನಮಗೆ ಕಾಣಲು ಸಾಧ್ಯವಿದೆ. ಮಾನವ

ಕುಲದ ಆಧ್ಯಾತ್ಮಿಕ ಕೇಂದ್ರ ಬಿಂದುವು ಒಬ್ಬನೇ ಆದ ಪರಮಾತ್ಮನಾಗಿರುವನೆಂದೂ ಮನುಷ್ಯರು ತಮ್ಮ ಸರ್ವಸ್ವವನ್ನೂ ಆ ಏಕ ಪರಮಾತ್ಮನಲ್ಲಿಯೇ ಅರ್ಪಿಸಿ ಅವನನ್ನೇ ಧ್ಯಾನಿಸಬೇಕೆಂದೂ ಅವನಲ್ಲದೆ ಬೇರೆ ದೇವನಿಲ್ಲವೆಂದೂ ಭಗವದ್ಗೀತೆಯಲ್ಲಿ ಮಹಾತ್ಮ ಶ್ರೀಕೃಷ್ಣ ಹೇಳಿರುವರು. ಆ ಮಹಾಗ್ರಂಥದ 18ನೇ ಅಧ್ಯಾಯ 61 ಮತ್ತು 62ನೇ ಶ್ಲೋಕಗಳನ್ನು ನಾವು ಈ ರೀತಿ ಓದುತ್ತೇವೆ:

ಈಶ್ವರಃ ಸರ್ವಭೂತಾನಾಂ ಹೃದ್ದೇಶೇऽರ್ಜುನ ತಿಷ್ಠತಿ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥
ತಮೇವ ಶರಣಂ ಗಚ್ಛ ಸರ್ವ ಭಾವೇನ ಭಾರತ ।
ತತ್ಪ್ರಸಾದಾತ್ಪರಾಂ ಶಾಂತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್ ॥

"ಎಲೈ ಅರ್ಜುನ, ಸರ್ವ ಪ್ರಾಣಿಗಳನ್ನೂ ಯಂತ್ರಾರೂಢವಾದ ಬೊಂಬೆಗಳಂತೆ ಮಾಯೆಯಿಂದ ತಿರುಗಿಸುತ್ತಾ ಈಶ್ವರನು ಸರ್ವ ಜೀವರ ಹೃದಯ ಪ್ರದೇಶದಲ್ಲಿ ನೆಲೆಸಿರುತ್ತಾನೆ. ಎಲೈ ಅರ್ಜುನ, ಸರ್ವಾತ್ಮನಾ ಅವನನ್ನೇ ಶರಣು ಹೊಂದು. ಅವನ ಅನುಗ್ರಹದಿಂದ ಪರಮ ಶಾಂತಿಯನ್ನೂ ಶಾಶ್ವತವಾದ ಸ್ಥಾನವನ್ನೂ ಹೊಂದುವೆ" (ಭಗವದ್ಗೀತೆ 18 : 61, 62)

ಇಲ್ಲಿ ಧಾರ್ಮಿಕವಾದ ಎಲ್ಲಾ ಕಾರ್ಯಗಳ ಮೂಲಸ್ಥಾನವೂ ಪರಮಾತ್ಮನಾಗಿರುವನೆಂದೂ ಅವನನ್ನು ಮಾತ್ರವೇ ಮನುಷ್ಯನು ಆಶ್ರಯಿಸಿರಬೇಕೆಂದೂ ಹೇಳಿದೆ. ಇದೇ ರೀತಿ ಭಗವದ್ಗೀತೆಯನ್ನು ಬೋಧಿಸಿದ ಶ್ರೀ ಕೃಷ್ಣ ತನಗೆ ಮೊದಲು ಕೂಡ ದೇವರ ಅವತಾರ ಪುರುಷರು ಅವತರಿಸಿರುವರೆಂದು ಹೇಳಿದ್ದಾರೆ. ನಿಜವಾಗಿ ಹೇಳುವುದಾದರೆ, ಮನುಷ್ಯರು ಅಧರ್ಮದಲ್ಲಿ ಮುಳುಗಿ ಆಧ್ಯಾತ್ಮಿಕವಾಗಿ ಅಧಃಪತನ ಹೊಂದುವಾಗ ಅವರನ್ನು ಉದ್ಧರಿಸಲಿಕ್ಕೂ ಅವರಿಗೆ ದೈವಜ್ಞಾನವನ್ನು ತಿಳಿಸಿಕೊಡಲಿಕ್ಕೂ ಲೋಕದಲ್ಲಿ ಪ್ರವಾದಿಗಳು ಅವತರಿಸುತ್ತಾರೆ. ಆ ರೀತಿ ಆವಿರ್ಭವಿಸುವ ಎಲ್ಲಾ ಧರ್ಮ ಪುರುಷರ ಮೂಲವು ಒಂದೇ ಆಗಿರುತ್ತದೆ. ಅದೇ ಆ ಸರ್ವ ವಲ್ಲಭನಾದ ಆ ಪರಮಾತ್ಮ. ಮಹಾತ್ಮ ಶ್ರೀ ಕೃಷ್ಣ ತನಗೆ ಮೊದಲು ಬಂದ ಪ್ರವಾದಿಗಳನ್ನು ಅಂಗೀಕರಿಸುತ್ತಾ ದೈವವಾಣಿಯ ಕುರಿತು ಈ ರೀತಿ ಘೋಷಿಸುತ್ತಾರೆ:

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹ ಮವ್ಯಯಮ್ ।
ವಿವಸ್ವಾನ್ ಮನವೇ ಪ್ರಾಹ ಮನುರಿಕ್ಷ್ವಾ ಕವೇऽ ಬ್ರವೀತ್ ॥
ಏವಂ ಪರಂಪರಾ ಪ್ರಾಪ್ತ ಮಿಮಂ ರಾಜರ್ಷಯೋ ವಿದುಃ ।
ಸ ಕಾಲೇನೇಹ ಮಹತಾ ಯೋಗೋ ನಷ್ಟಃ ಪರಂತಪ ॥

"ಈ ಅವ್ಯಯವಾದ ಯೋಗವನ್ನು ನಾನು ವಿವಸ್ವಾನ್‌ಗೆ ಹೇಳಿದೆನು; ಅವನು ಮನುವಿಗೆ ಹೇಳಿದನು. ಮನುವು ಇಕ್ಷ್ವಾಕುವಿಗೆ ಹೇಳಿದನು. ಎಲೈ ಅರ್ಜುನ, ಹೀಗೆ ಪರಂಪರೆಯಿಂದ ಬಂದ ಇದನ್ನು ರಾಜರ್ಷಿಗಳು ತಿಳಿದಿದ್ದರು. ಆ ಯೋಗವು ದೀರ್ಘಕಾಲವಾದುದರಿಂದ ಇಲ್ಲಿ ನಷ್ಟವಾಯಿತು."
(ಭಗವದ್ಗೀತೆ ಅಧ್ಯಾಯ 4 : ಶ್ಲೋಕ 1, 2)

ಹೀಗೆ ದೈವಜ್ಞಾನವು ನಷ್ಟವಾಗಿದ್ದ ಕಾಲದಲ್ಲಿ ಅದನ್ನು ಪುನರುಜ್ಜೀವನಗೊಳಿಸಲು ತಾನು ಬಂದಿರುವೆನೆಂದು ಶ್ರೀ ಕೃಷ್ಣ ತನ್ನ ದೌತ್ಯವು ಯುಕ್ತ ಕಾಲದಲ್ಲಿಯೇ ಉಂಟಾಯಿತೆಂಬುದನ್ನು ವ್ಯಕ್ತಪಡಿಸಿದರು.

ಲೋಕದಲ್ಲಿ ದೈವವಾಣಿಯ ಅಗತ್ಯವಿರುವಾಗಲೆಲ್ಲಾ ಪರಮಾತ್ಮನು ಅದನ್ನು ಮನುಷ್ಯರಿಗೆ ಅನುಗ್ರಹಿಸುತ್ತಾನೆ. ಒಂದು ಲಕ್ಷದ ಇಪ್ಪತ್ತನಾಲ್ಕು ಸಾವಿರ ಪ್ರವಾದಿಗಳು ಲೋಕದಲ್ಲಿ ನಿಯೋಜಿತರಾಗಿರುವರೆಂದು ಮುಹಮ್ಮದ್ ಪೈಗಂಬರರು ಹೇಳಿದರು. ಅವರೆಲ್ಲರನ್ನೂ ಗೌರವಿಸಿ ಆದರಿಸಬೇಕಾದುದು ಮುಸ್ಲಿಮರ ಕರ್ತವ್ಯವಾಗಿರುತ್ತದೆ. ಅವರಲ್ಲಿ ಮೋಶೆ, ಯೇಸು, ಝರತುಷ್ಟ, ಕನ್‌ಫ್ಯೂಷಿಯಸ್, ಶ್ರೀ ಕೃಷ್ಣ, ಶ್ರೀರಾಮಚಂದ್ರ, ಶ್ರೀ ಬುದ್ಧ ಮೊದಲಾದ ಎಲ್ಲಾ ಮಹಾತ್ಮರೂ ಒಳಪಡುತ್ತಾರೆ. ಹೀಗಿರುವಾಗ ಇವರನ್ನು ಗೌರವ ಭಾವದಿಂದ ಕಾಣದ, ಇವರ ಸತ್ಯತೆಯನ್ನು ಅಂಗೀಕರಿಸದ ಓರ್ವನಿಗೆ ಮುಸ್ಲಿಮನಾಗಿರಲು ಸಾಧ್ಯವಿಲ್ಲ. ಆದುದರಿಂದ ಅಹ್ಮದಿಯರಾದ ನಮ್ಮ ವಿಶ್ವಾಸವು ಇವರೆಲ್ಲಾ ಸತ್ಯ ಪ್ರವಾದಿಗಳಾಗಿದ್ದಾರೆ ಎಂದಾಗಿದೆ. ಇವೆಲ್ಲರನ್ನೂ

ಅಂಗೀಕರಿಸಿದರೆ ಮಾತ್ರವೇ ನಾವು ಮುಸ್ಲಿಮರಾಗುತ್ತೇವೆ. ಇಲ್ಲವಾದರೆ ನಮಗೆ ಮುಸ್ಲಿಮರಾಗಲಿಕ್ಕೆ ಸಾಧ್ಯವಿಲ್ಲ. ನೋಡಿದಿರಾ, ಇದೇ ರೀತಿಯ ತತ್ವವನ್ನು ಲೋಕದ ಎಲ್ಲಾ ಮತಸ್ಥರೂ ಸ್ವೀಕರಿಸುವುದಾದರೆ, ಧರ್ಮದ ಹೆಸರಿನಲ್ಲಿ ನಡೆಯುವ ಅತ್ಯಾಚಾರಗಳು ಇಲ್ಲದಾಗುವುದರಲ್ಲಿ ಸಂದೇಹವಿಲ್ಲ. ಇಸ್ಲಾಂ ಧರ್ಮವು ಎಂದೂ ಅನ್ಯ ಮತಸ್ಥಾಪಕರನ್ನೂ ಮತಾಚಾರ್ಯರನ್ನೂ ದೂಷಿಸುವುದಿಲ್ಲ, ಹಿಯ್ಯಾಳಿಸುವುದಿಲ್ಲ. ಆದುದರಿಂದ ಇಲ್ಲಿ ನೆರೆದಿರುವ ನನ್ನ ಹಿಂದೂ ಬಾಂಧವರೊಡನೆ ನಾನು ಅಪೇಕ್ಷಿಸುವುದೇನೆಂದರೆ, ಅವರು ಎಂದೂ ಇಸ್ಲಾಂ ಧರ್ಮದ ಸ್ಥಾಪಕರನ್ನು ಅವಹೇಳಿಸದೆಯೂ ಆಕ್ಷೇಪಿಸದೆಯೂ ಇರಲಿ. ಸಹೋದರರೇ, ಚೆನ್ನಾಗಿ ಆಲೋಚಿಸಿ ನೋಡಿರಿ, ಮುಹಮ್ಮದ್ ಪೈಗಂಬರರನ್ನು ಹೀನವಾಗಿ ಕಾಣುವ ಒಂದು ಸಮುದಾಯದೊಡನೆ ಮುಸ್ಲಿಮರಿಗೆ ಮೈತ್ರಿಯಿಂದಿರಲು ಸಾಧ್ಯವೇ? ಅದೇ ರೀತಿ ಶ್ರೀ ಕೃಷ್ಣರನ್ನೂ ಶ್ರೀ ರಾಮಚಂದ್ರರನ್ನೂ ನಿಂದಿಸುವ ಒಂದು ಸಮುದಾಯದೊಡನೆ ಸೌಹಾರ್ದದಿಂದ ವರ್ತಿಸಲು ಹಿಂದುಗಳಿಗೆ ಸಾಧ್ಯವಿದೆಯೇ? ಖಂಡಿತವಾಗಿಯೂ ಇಲ್ಲ. ಆದುದರಿಂದ ನಾವು ಪರಸ್ಪರ ಸೌಹಾರ್ದದಿಂದಲೂ ಗೌರವದಿಂದಲೂ ಆದರ ಭಾವದಿಂದಲೂ ವರ್ತಿಸಲು ಕಲಿಯೋಣ. ಲೋಕದಲ್ಲಿ ಶಾಂತಿ ಶಾಶ್ವತ ನೆಲೆಸಬೇಕೆಂದಾದರೆ ಇದೊಂದೇ ಮಾರ್ಗ. ಅಲ್ಲದೆ ನಾವು ಪರಸ್ಪರ ಆಕ್ಷೇಪಿಸುತ್ತಲೂ ನಿಂದಿಸುತ್ತಲೂ ಇರುವುದಾದರೆ ಅದರಿಂದುಂಟಾಗುವ ಕೆಟ್ಟ ಫಲವು ನಮ್ಮ ರಾಷ್ಟ್ರವನ್ನೇ ಅಧಃಪತನಕ್ಕೆ ತಳ್ಳಿ ಬಿಡಬಹುದು. ಸಮುದಾಯಗಳು ಪರಸ್ಪರ ಶಾಂತಿ ಸೌಹಾರ್ದದಿಂದ ವರ್ತಿಸಲು ತೊಡಗಿ, ಕಲಹ ಗೊಂದಲಗಳನ್ನೂ ನಾಶ ನಷ್ಟಗಳನ್ನೂ ಉಂಟುಮಾಡುವ ದುಷ್ಕೃತ್ಯಗಳಿಂದ ವಿಮುಖರಾಗದೆ ಇರುವುದಾದರೆ ಮತ್ತು ಪರಮಾತ್ಮನ ಕರೆಯ ಕಡೆಗೆ ಗಮನ ಹರಿಸದೆ ಇರುವುದಾದರೆ ಲೋಕದಲ್ಲಿ ಅತಿ ಭಯಂಕರವಾದ ವಿಪತ್ತುಗಳು ಉಂಟಾಗಲಿರುವುವೆಂದು ಈ ಯುಗದ ಅವತಾರ ಪುರುಷರಾಗಿ ಜನ್ಮ ತಾಳಿದ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಅವರು ನಮಗೆ ಮುನ್ನೆಚ್ಚರಿಕೆ ನೀಡಿದ್ದಾರೆ. ಅವರು ತನ್ನ "ಮೈತ್ರಿ ಸಂದೇಶ" ಎಂಬ ಗ್ರಂಥದಲ್ಲಿ ಈ ರೀತಿ ಹೇಳಿರುವರು:

"ಪರಮಾತ್ಮನು ನನಗೆ ತಿಳಿಸಿರುವನು; ಮನುಷ್ಯರು ಅವರ ದುಷ್ಕೃತ್ಯಗಳನ್ನು ತ್ಯಜಿಸಿ ತಮ್ಮ ಕುಕೃತ್ಯಗಳ ಕುರಿತು ಪಶ್ಚಾತ್ತಾಪ ಪಟ್ಟು ಪರಮಾತ್ಮನೊಡನೆ ಕ್ಷಮೆ ಯಾಚಿಸದೆ ಇದ್ದರೆ ಲೋಕದಲ್ಲೆಲ್ಲಾ ಭಯಂಕರವಾದ ವಿಪತ್ತುಗಳೂ ನಾಶ ನಷ್ಟಗಳೂ ಸಂಭವಿಸುವುವು. ಒಂದು ಆಪತ್ತು ಮುಕ್ತಾಯವಾಗುವ ಮೊದಲೇ ಇನ್ನೊಂದು ಭಯಾನಕ ನಾಶವು ಸನ್ನಿಹಿತವಾಗುವುದು. ಈ ವಿಪತ್ತುಗಳಿಂದಾಗಿ ಮನುಷ್ಯರು ದಿಗ್ಭ್ರಾಂತರಾಗಿ, ಇನ್ನೇನು ಸಂಭವಿಸಲಿದೆ ಎಂದು ಕೇಳಲಾರಂಭಿಸುವರು. ಆದುದರಿಂದ ನನ್ನ ದೇಶ ಬಾಂಧವರೇ, ಆ ದಿನಗಳು ಬರುವ ಮೊದಲೇ ನೀವು ಜಾಗರೂಕರಾಗಿರಿ. ಹಿಂದೂಗಳೂ ಮುಸ್ಲಿಮರೂ ಪರಸ್ಪರ ಸಂಧಾನವನ್ನುಂಟುಮಾಡಲಿ. ಐಕ್ಯಭಂಗವಾಗುವ ರೀತಿಯಲ್ಲಿ ಅಕ್ರಮವಾಗಿ ವರ್ತಿಸಿದ ಸಮುದಾಯವು ಆ ಅನ್ಯಾಯವನ್ನು ತ್ಯಜಿಸಲಿ. ಇಲ್ಲವಾದರೆ, ಅನ್ಯೋನ್ಯ ಶತ್ರುತ್ವದ ಎಲ್ಲಾ ಪಾಪವು ಆ ಅನ್ಯಾಯವಾಗಿ ವರ್ತಿಸಿದ ಸಮುದಾಯದ ಕೊರಳಿಗೆ ಉರುಳಾಗಿ ಪರಿಣಮಿಸುವುದು."

ವಿಭಿನ್ನ ಮತಸ್ಥರ ಧಾರ್ಮಿಕ ವಿಶ್ವಾಸಗಳು ಬೇರೆ ಬೇರೆಯಾಗಿರುವಾಗ ಅವರು ಪರಸ್ಪರ ಮೈತ್ರಿಯಿಂದಿರುವುದು ಹೇಗೆ? ಎಂಬ ಒಂದು ಪ್ರಶ್ನೆಯು ಇಲ್ಲಿ ಉದ್ಭವವಾಗಬಹುದು. ಅದಕ್ಕೆ ಹಝ್ರತ್ ಅಹ್ಮದ್ ಅವರು ನಿರ್ದೇಶಿಸುವ ಪರಿಹಾರವು, ವಿಶ್ವಾಸಾದರ್ಶಗಳಲ್ಲಿ ಎಷ್ಟೇ ವ್ಯತ್ಯಾಸಗಳಿದ್ದರೂ ಒಂದು ಸಮುದಾಯವು ಗೌರವಿಸಿ ಆದರಿಸುವ ಮಹಾಪುರುಷರನ್ನೋ ಮತ ಸ್ಥಾಪಕರನ್ನೋ ಇನ್ನೊಂದು ಸಮುದಾಯದ ಜನರು ಹೀನೈಸಬಾರದೆಂಬ ತತ್ವವಾಗಿದೆ. ಅನ್ಯ ಮತ ಸ್ಥಾಪಕರನ್ನೂ ಮಹಾಪುರುಷರನ್ನೂ ಪ್ರಾಮಾಣಿಕವಾಗಿ ಗೌರವಿಸಬೇಕೆಂಬ ತತ್ವವಾಗಿದೆ. ಯಾವ ಧರ್ಮದಲ್ಲಿ ವಿಶ್ವಾಸವಿಡುವವರೇ ಆದರೂ ಪರಸ್ಪರ ಸ್ನೇಹಭಾವದಿಂದ ಬಾಳಬೇಕಾಗಿದೆ. ಆದುದರಿಂದ ನಾವು ಪರಸ್ಪರ ಅಭಿಪ್ರಾಯ ವಿನಿಮಯ ಮಾಡಿಕೊಂಡು ಅನ್ಯೋನ್ಯ ಸೌಹಾರ್ದದಿಂದಲೂ ಸಹಾನುಭೂತಿಯಿಂದಲೂ ಬಂಧು ಮಿತ್ರರಂತೆ ಜೀವಿಸಲು ಕಲಿಯಬೇಕಾಗಿದೆ. ಈ ನಿಟ್ಟಿನಲ್ಲಿ ಇಂತಹ ಧರ್ಮ ಸಮ್ಮೇಳನಗಳು ಬಹಳಷ್ಟು ಪ್ರಯೋಜನಕಾರಿಯಾಗಿವೆ ಎಂಬುದು ನನ್ನ ಅಭಿಪ್ರಾಯ. ಬೇರೆ ಬೇರೆ ಧರ್ಮದ ಅನುಯಾಯಿಗಳು

# ಈಸ್ಟರ್ ಅಥವಾ ಪುನರುತ್ಥಾನ ಹಬ್ಬ

★ ಮೌಲಾನ ಬಿ. ಅಬ್ದುಲ್ಲಾ ಎಚ್. ಎ.

ಕ್ರೈಸ್ತರು ಹಲವು ದಿನಗಳನ್ನು ಹಬ್ಬಗಳಾಗಿ ಆಚರಿಸುತ್ತಾರಾದರೂ ಅವುಗಳ ಪೈಕಿ ಎರಡು ಹಬ್ಬಗಳು ಪ್ರಧಾನವಾಗಿವೆ. ಒಂದು ಕ್ರಿಸ್‌ಮಸ್, ಮತ್ತೊಂದು ಈಸ್ಟರ್ ಅಥವಾ ಪುನರುತ್ಥಾನ ಹಬ್ಬ. ಕ್ರಿಸ್‌ಮಸ್ ಹಬ್ಬ ಯೇಸು ಕ್ರಿಸ್ತರ ಜನನವನ್ನೂ ಈಸ್ಟರ್ ಹಬ್ಬ ಅವರ ಶಿಲುಬಾಮರಣದಿಂದ ಪುನರುತ್ಥಾನವನ್ನೂ ನೆನಪಿಸಿಕೊಡುತ್ತವೆ.

ದೇವ ಪುತ್ರನಾದ ಯೇಸು ಪಾಪಿಗಳಾದ ಮನುಷ್ಯರ ಪಾಪ ಪರಿಹಾರಕ್ಕಾಗಿ ಶಿಲುಬೆಯ ಮೇಲೆ ಮಡಿದು ಮೂರನೇ ದಿವಸ ಪುನರುತ್ಥಾನಗೊಂಡು ಪಿತನಾದ ದೇವರ ಬಳಿಗೆ ಸ್ವರ್ಗಕ್ಕೇರಿ ಹೋದರೆಂದೂ ಅವರು ಈಗಲೂ ಅಲ್ಲಿ ದೇವರ ಬಲಗಡೆ ಕುಳಿತಿರುತ್ತಾರೆಂದೂ ಕ್ರೈಸ್ತ ಬಾಂಧವರು ನಂಬುತ್ತಾರೆ. ಈ ವಿಶ್ವಾಸವನ್ನು ಆಧಾರವಾಗಿರಿಸಿಕೊಂಡು ಅವರು ಪುನರುತ್ಥಾನ ಹಬ್ಬವನ್ನು ಆಚರಿಸುತ್ತಾರೆ. ಈ ಸಂಭವದ ಕುರಿತು ಮುಸ್ಲಿಮರು ಸಾಮಾನ್ಯವಾಗಿ ನಂಬುವುದು ಯೇಸುಕ್ರಿಸ್ತರನ್ನು ಶಿಲುಬೆಗೆ ಜಡಿಯಲಾಗಿಲ್ಲವೆಂದೂ ಯೆಹೂದ್ಯರು ಅವರನ್ನು ಶಿಲುಬೆಗೇರಿಸಲಿಕ್ಕೆ ಹಿಡಿಯಲು ಸುತ್ತುವರಿದಾಗ ದೇವರು ಅವರನ್ನು ಆಕಾಶಕ್ಕೆತ್ತಿ ರಕ್ಷಿಸಿದನೆಂದೂ ಅವರ ಬದಲಿಗೆ ಶತ್ರುಗಳ ಪೈಕಿ ಒಬ್ಬನಿಗೆ ಯೇಸುಕ್ರಿಸ್ತರ ರೂಪವನ್ನು ಕೊಟ್ಟದ್ದನ್ನನುಸರಿಸಿ ಅವನನ್ನು ಯೆಹೂದ್ಯರು ಯೇಸುವೆಂದು ಬಗೆದು ಹಿಡಿದು ಶಿಲುಬೆಗೆ ಹಾಕಿ ಕೊಂದರೆಂದೂ ಯೇಸುಕ್ರಿಸ್ತರಾದರೋ ಈಗಲೂ ಸ್ಥೂಲದೇಹದಿಂದೊಡಗೂಡಿ ಆಕಾಶದಲ್ಲಿ ಜೀವಿಸುತ್ತಿದ್ದಾರೆಂದಾಗಿದೆ. ಯೇಸು ಒಬ್ಬ ಮಿಥ್ಯಾವಾದಿಯಾದುದರಿಂದ ತಾವು ಆತನನ್ನು ಶಿಲುಬೆಗೆ ಜಡಿದು ಕೊಂದುಬಿಟ್ಟೆವೆಂದೂ ಆತನು ಶಿಲುಬೆಯ ಮರಣದಿಂದ ಕ್ರೈಸ್ತರು ಹೇಳುವಂತೆ ಪುನರುತ್ಥಾನಗೊಂಡಿಲ್ಲವೆಂದೂ ಯೆಹೂದ್ಯರು ನಂಬುತ್ತಾರೆ. ಹೀಗೆ ಈ ಪುನರುತ್ಥಾನ ಹಬ್ಬ ಒಂದು ಕಡೆಯಲ್ಲಿ

---

( 11ನೇ ಪುಟದಿಂದ )

ತಮ್ಮ ತಮ್ಮ ಧರ್ಮದ ವೀಕ್ಷಣೆಯಂತೆ ಲೋಕ ಕಲ್ಯಾಣಕ್ಕೆ ಪೂರಕವಾಗುವ ವಿಷಯಗಳನ್ನೂ ಕೋಮು ಸೌಹಾರ್ದಕ್ಕೆ ಉಪಯುಕ್ತವಾಗುವ ಕಾರ್ಯಗಳನ್ನೂ ಜನರಲ್ಲಿ ಹಂಚಿಕೊಳ್ಳುವುದರಿಂದ ನಮ್ಮಲ್ಲಿ ಅನ್ಯೋನ್ಯ ಐಕ್ಯವೂ ಸ್ನೇಹವೂ ಗೌರವವೂ ಹೆಚ್ಚುವುದು. ನಮ್ಮ ನಮ್ಮೊಳಗೆ ದ್ವೇಷವೂ ವೈರಾಗ್ಯವೂ ಇಲ್ಲದಾಗುವುದು. ಇಂತಹ ಒಂದು ಮಹತ್ಕಾರ್ಯವೆಂಬಂತೆ ಈ ಸಮಾರಂಭವನ್ನು ಏರ್ಪಡಿಸಿದ್ದಕ್ಕಾಗಿ ಇದರ ಸಂಘಟಕರನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಈ ಸಮ್ಮೇಳನದಲ್ಲಿ ಇಸ್ಲಾಂ ಧರ್ಮದ ಪ್ರತಿನಿಧಿಯೂಗಿ ಭಾಗವಹಿಸಿ ಒಂದೆರಡು ಮಾತುಗಳನ್ನು ಆಡಲು ಸಂದರ್ಭ ನೀಡಿದ್ದಕ್ಕೂ ನಾನು ಇದರ ಸಂಘಟಕರಿಗೆ ಕೃತಜ್ಞತೆಗಳನ್ನರ್ಪಿಸಿಕೊಳ್ಳುತ್ತೇನೆ.

ಹೇ ಸರ್ವೇಶ್ವರನಾದ ಪರಮಾತ್ಮನೇ. ನಮ್ಮಲ್ಲಿ ಪರಸ್ಪರ ಸ್ನೇಹವನ್ನೂ ಐಕ್ಯ ಭಾವನೆಯನ್ನೂ ಉಂಟು ಮಾಡು. ನಮ್ಮ ಹೃದಯಗಳಲ್ಲಿ ಉಂಟಾಗಬಹುದಾದಂತಹ ಜಾತೀಯತೆಯ ಕಲ್ಮಶಗಳನ್ನು ಹೋಗಲಾಡಿಸಿ ನಾವು ಪರಸ್ಪರ ಸ್ನೇಹಭಾವದಿಂದ ಬಾಳುವಂತೆ ನಮ್ಮನ್ನು ಕಾಪಾಡು. ಲೋಕದಲ್ಲಿ ಧರ್ಮದ ಹೆಸರಿನಲ್ಲಿ ನಡೆಯುವ ಅತ್ಯಾಚಾರಗಳೂ ಅಕ್ರಮಗಳೂ ಕೊನೆಗೊಳ್ಳಲಿ. ಭಗವಂತಾ, ನಮ್ಮನ್ನು ನೀನು ಸದಾ ಅನುಗ್ರಹಿಸಿ ಆಶೀರ್ವದಿಸು – ಎಂಬ ಪ್ರಾರ್ಥನೆಯೊಂದಿಗೆ ನನ್ನೀ ಮಾತುಗಳನ್ನು ಮುಗಿಸುತ್ತೇನೆ.

ಇನ್‌ಸಾನಿಯತ್ ಝಿಂದಾಬಾದ್

ಜೈಹಿಂದ್ – ಜೈಜಗತ್.

ಕ್ರೈಸ್ತರ ಪ್ರಧಾನವಾದ ಮತ ವಿಶ್ವಾಸಗಳನ್ನು ಸ್ಪರ್ಶಿಸುವಂಥದ್ದೂ ಇನ್ನೊಂದು ಕಡೆಯಲ್ಲಿ ಧಾರ್ಮಿಕವಾದ ಹಲವು ಭಿನ್ನಾಭಿಪ್ರಾಯಗಳಿಗೆ ಹೇತುವೂ ಆಗಿರುವುದರಿಂದ, ಧಾರ್ಮಿಕ ವಿಚಾರಗಳ ಬಗ್ಗೆ ಚಿಂತಿಸಿ ಸತ್ಯವನ್ನು ಗ್ರಹಿಸಿ ಅದನ್ನು ಸ್ವೀಕರಿಸುವುದು ಅಗತ್ಯವೆಂದು ಭಾವಿಸುವವರಿಗೆಲ್ಲ ಪ್ರಸ್ತುತ ಸಂಗತಿಯ ನಿಜಾಂಶವನ್ನು ತಿಳಿಯಬೇಕಾದುದು ಅತ್ಯಾವಶ್ಯಕವಾಗಿದೆ.

ಸತ್ಯಾತ್ಮ ಹಾಗೂ ಆದರ್ಶ ಪುರುಷರಾದ ಯೇಸುಕ್ರಿಸ್ತರಂತಹ ಓರ್ವ ಮಹಾತ್ಮರನ್ನು ಸುಳ್ಳುವಾದಿಯೆಂದು ಹೇಳುವುದು ಮತಲೋಕದಲ್ಲಿ ಗೈಯುವ ಒಂದು ಅನೀತಿಯೂ ಸತ್ಯದೆದುರಿಗೆ ಮಾಡುವ ಒಂದು ಅಪರಾಧವೆಂಬುದೂ ನಿಸ್ಸಂದೇಹ. ಆ ಮಹಾಪುರುಷರ ಜೀವನ ಚರ್ಯೆಗಳ ಕುರಿತು ನಿಷ್ಪಕ್ಷವಾಗಿ ಚಿಂತಿಸಿ ನೋಡುವಾಗ ಯಾರಿಗೂ ಅವರು ಒಬ್ಬ ಮಿಥ್ಯಾವಾದಿಯೆಂದು ಹೇಳಲು ಎಂದಿಗೂ ಸಾಧ್ಯವಿಲ್ಲ. ಆದ್ದರಿಂದ ಯೆಹೂದ್ಯರ ವಾದ ಖಂಡಿತವಾಗಿಯೂ ಅನ್ಯಾಯವಾದುದು.

ಅದೇ ಪ್ರಕಾರ, ಯೇಸುಕ್ರಿಸ್ತರನ್ನು ಶಿಲುಬೆಗೆ ಹಾಕಲಾಗಿಲ್ಲವೆಂದು ಮುಸ್ಲಿಮರು ನಂಬುವುದು ಕೂಡ ಸ್ವೀಕಾರಾರ್ಹವಲ್ಲ. ಯೇಸುಕ್ರಿಸ್ತರ ಅನುಯಾಯಿಗಳಾದ ಕ್ರೈಸ್ತರೂ ಶತ್ರುಗಳಾದ ಯೆಹೂದ್ಯರೂ ಅವರನ್ನು ಶಿಲುಬೆಗೆ ಹಾಕಲಾಗಿದೆಯೆಂದು ಹೇಳುತ್ತಾರೆ ಮಾತ್ರವಲ್ಲ. ಅದು ಇತಿಹಾಸ ಪ್ರಸಿದ್ಧವಾದೊಂದು ಸಂಭವ ಕೂಡ ಆಗಿದೆ. ಅಲ್ಲದೆ. ಅವರು ಸ್ಥೂಲ ದೇಹ ಸಹಿತ ಆಕಾಶದಲ್ಲಿ ಜೀವಿಸುತ್ತಿಲ್ಲವೆಂದು ಪವಿತ್ರ ಖುರ್‌ಆನಿನಿಂದಲೂ ಪೈಗಂಬರರ ವಚನಗಳಿಂದಲೂ ಸ್ಪಷ್ಟವಾಗುವುದರಿಂದ, ದೇವರು ಅವರನ್ನು ಶರೀರ ಸಹಿತ ಆಕಾಶಕ್ಕೆ ಎತ್ತಿಕೊಂಡು ಹೋದನೆಂದು ಹೇಳುವುದು ಇಸ್ಲಾಮಿನ ಉಪದೇಶಗಳಿಗೆ ವಿರುದ್ಧವಾಗಿದೆ. ಅಷ್ಟೇ ಅಲ್ಲ, ತಾನು ಅತಿಯಾಗಿ ಪ್ರೀತಿಸುವ ತನ್ನ ಪ್ರಿಯ ದಾಸನಾದ ಯೇಸುಕ್ರಿಸ್ತರ ರೂಪಾಕೃತಿಯನ್ನು ಒಬ್ಬ ವೈರಿಗೆ ದೇವರು ನೀಡಿದನೆಂದು ಭಾವಿಸುವುದು ಮತ್ತು ಆ ಮನುಷ್ಯನನ್ನು ಶಿಲುಬೆಗೆ ಜಡಿಯುವಾಗ ತಾನು ಯೇಸು ಅಲ್ಲವೆಂದು ಕೂಗಿ ಹೇಳಿ ಅವನು ಪಾರಾಗಲು ಪ್ರಯತ್ನಿಸದೆ ತನ್ನ ಪ್ರಾಣವನ್ನು ಬಿಟ್ಟನೆಂದು ಭಾವಿಸುವುದು ಎಂದಿಗೂ ಸ್ವೀಕಾರಾರ್ಹವಲ್ಲ. ಪುನರುತ್ಥಾನ ಹಬ್ಬವು ಕ್ರೈಸ್ತರು ತಮ್ಮ ಧಾರ್ಮಿಕವಾದ ಕೆಲವು ಪ್ರಧಾನ ನಂಬಿಕೆಗಳನ್ನು ಆಧಾರವಾಗಿಟ್ಟು ಆಚರಿಸುವ ಶುಭದಿನವಾದುದರಿಂದ ಮುಸ್ಲಿಂ ಮತ್ತು ಯೆಹೂದ್ಯರ ನಂಬಿಕೆಗಳ ಬಗ್ಗೆ ಕೂಲಂಕಷವಾಗಿ ವಿವರಿಸುವುದರ ಬದಲು ಕ್ರೈಸ್ತರ ಆ ವಿಶ್ವಾಸಗಳ ಕುರಿತು ಇಲ್ಲಿ ಪ್ರತಿಪಾದಿಸಬೇಕಾಗಿದೆ. ಆದ್ದರಿಂದ ಅವರು ನಂಬುವುದು ಮತ್ತು ವಾದಿಸುವುದು ಏನೆಂದೂ ಅದು ಎಷ್ಟರ ಮಟ್ಟಿಗೆ ಸರಿಯೆಂದೂ ನಾವಿಲ್ಲಿ ಪರಿಶೋಧಿಸೋಣ.

ಆದಿಪಿತ ಆದಂ ಪಾಪಮಾಡಿದುದರ ಫಲವಾಗಿ ಅವರ ಸಂತತಿಗಳಾದ ಮನುಷ್ಯ ವಂಶಗಳೆಲ್ಲ ಜನ್ಮತಃ ಪಾಪಿಗಳಾದರೆಂದೂ ನೀತಿವಂತನಾದ ದೇವರಿಗೆ ಅವರ ಪಾಪ ನಿಮಿತ್ತ ಅವರಿಗೆ ತಕ್ಕ ಶಿಕ್ಷೆ ಕೊಡದಿರಲಿಕ್ಕೆ ನಿರ್ವಾಹವಿಲ್ಲವೆಂದೂ ಆದರೆ ಅವರನ್ನು ಶಿಕ್ಷಿಸುವುದು ದೇವರ ಕಾರುಣ್ಯಕ್ಕೆ ವಿರುದ್ಧವಾದುದರಿಂದ, ದೇವ ಪುತ್ರನಾದ್ದರಿಂದ ಪಾಪರಹಿತನೂ ಸಕಲ ಮಾನವ ಕುಲದ ಪಾಪವನ್ನು ಹೊರಲು ಪ್ರಾಪ್ತನೂ ಆದ ಯೇಸು ಅವರ ಪಾಪ ಪರಿಹಾರಕ್ಕಾಗಿ ಶಾಪಗ್ರಸ್ತವಾದ ಶಿಲುಬೆಯ ಮರಣವನ್ನು ಸ್ವಯಂ ಪಡೆದು. ಹಾಗೆ ಲೋಕದ ಪಾಪಹೊರೆಯನ್ನು ಹೊತ್ತ ನಿಮಿತ್ತ ಮೂರು ದಿನ ನರಕ ಶಿಕ್ಷೆ ಅನುಭವಿಸಿ. ಅನಂತರ ಪುನರುತ್ಥಾನಗೊಂಡು ದೇವರ ಬಳಿಗೆ ಏರಿ ಹೋದರೆಂದು ಕ್ರೈಸ್ತ ಬಾಂಧವರು ನಂಬುತ್ತಾರೆ. ಈ ನಂಬಿಕೆಯನ್ನು ಆಧಾರವಾಗಿಟ್ಟು ಅವರು ಈಸ್ಟರ್ ಹಬ್ಬವನ್ನು ಆಚರಿಸುತ್ತಾರೆ. ಕೆಲವರು ಯೇಸುವಿನ ಪ್ರತಿಮೆಯನ್ನು ಮಾಡಿ ಶಿಲುಬೆಗೆ ಜಡಿದು ಯೇಸುವಿಗೆ ಉಂಟಾದ ಸಂಭವಗಳನ್ನು ಆ ಪ್ರತಿಮೆಯ ಮೇಲೆ ಅದೇ ರೀತಿಯಲ್ಲಿ ಮಾಡುತ್ತಾರೆ.

ಯೇಸುಕ್ರಿಸ್ತರ ಶಿಲುಬಾ ಸಂಭವದ ಕುರಿತು ಯೆಹೂದ್ಯರು ಮತ್ತು ಹೆಚ್ಚಿನ ಮುಸ್ಲಿಮರು ನಂಬುವುದನ್ನು ಅಂಗೀಕರಿಸಲು ನಿರ್ವಾಹವಿಲ್ಲವೆಂದು ಮೊದಲು ಹೇಳಿದನಷ್ಟೇ. ಆದರೆ ಆ ಬಗ್ಗೆ ಕ್ರೈಸ್ತರ ನಂಬುಗೆ ಮತ್ತು ಈ ಶುಭಾಚರಣೆಗೆ ಅವರು ಆಧಾರವಾಗಿ ಭಾವಿಸುವ ಸಂಗತಿಗಳು ಎಷ್ಟರ ಮಟ್ಟಿಗೆ ಅಂಗೀಕಾರಾರ್ಹವೆಂದು ನೋಡೋಣ.

1. ಆದಿಪಿತ ಆದಂ ಪಾಪಮಾಡಿದುದರಿಂದ ಮನುಷ್ಯರೆಲ್ಲರೂ ಜನ್ಮತಃ ಪಾಪಿಗಳೆಂದೂ ಪಾಪ ತಟ್ಟದ

ಒಬ್ಬನೇ ಒಬ್ಬ ಮನುಷ್ಯ ಯೇಸು ಮಾತ್ರವೆಂದೂ ಕ್ರೈಸ್ತ ಸಹೋದರರು ನಂಬುತ್ತಾರೆ. ಈ ನಂಬಿಕೆ ವಿಚಾರವಿರುದ್ಧವೂ ಬೈಬಲ್ ಪ್ರಮಾಣಕ್ಕೆ ವಿಪರೀತವೂ ಆಗಿದೆ. ಅನೇಕ ಸಾವಿರ ವರ್ಷಗಳಿಗೆ ಮುಂಚೆ ಓರ್ವ ವ್ಯಕ್ತಿ ಮಾಡಿದ ಪಾಪದ ಫಲವಾಗಿ ಇಂದು ಸಹ ಜನಿಸುವ ಮಕ್ಕಳು ಪಾಪಿಗಳಾಗಿ ಹುಟ್ಟುತ್ತವೆಂಬ ಹೇಳಿಕೆ ಖಂಡಿತವಾಗಿಯೂ ಅನ್ಯಾಯವೂ ಮನುಷ್ಯತ್ವಕ್ಕೆ ಕಳಂಕರವೂ ಆಗಿವೆ. ತಿಳುವಳಿಕೆಯಿಂದಲೂ ಸ್ವಪ್ರಜ್ಞೆಯಿಂದಲೂ ದೈವಾಜ್ಞೆಯನ್ನು ಉಲ್ಲಂಘಿಸುವುದಕ್ಕೆ ಪಾಪವೆಂದು ಹೇಳಲಾಗುತ್ತದೆ. ಆದುದರಿಂದ. ಆದಂ ಯಾರೆಂದೂ ಅವರು ಏನು ಮಾಡಿದರೆಂದೂ ತಿಳಿಯದ. ಪಾಪ ಮತ್ತು ಪುಣ್ಯ ಏನೆಂದು ತಿಳಿಯದ ಶಿಶುಗಳು ಪಾಪಿಗಳಾಗಿ ಜನ್ಮತಾಳುತ್ತವೆಂದು ಹೇಳುವುದು ಖಂಡಿತವಾಗಿಯೂ ದೇವರ ಹೆಸರಿನಲ್ಲಿ ಮಾಡುವ ಒಂದು ಅನೀತಿಯಾಗಿದೆ. ಕ್ರೈಸ್ತ ಧರ್ಮ ಗ್ರಂಥ ಇದನ್ನು ನ್ಯಾಯಿಕರಿಸುವುದಿಲ್ಲ. ಅದು ಹೇಳುವುದನ್ನು ನೋಡಿರಿ:

"ಮಕ್ಕಳ ಪಾಪದ ದೆಸೆಯಿಂದ ತಂದೆಗೂ ತಂದೆಯ ಪಾಪದ ದೆಸೆಯಿಂದ ಮಕ್ಕಳಿಗೂ ಮರಣ ಶಿಕ್ಷೆಯಾಗಬಾರದು. ಪ್ರತಿಯೊಬ್ಬನೂ ತನ್ನ ಪಾಪ ಫಲವನ್ನು ತಾನೇ ಅನುಭವಿಸಬೇಕು"

(ಧರ್ಮೋಪದೇಶ ಕಾಂಡ 24 : 16)

"ತಂದೆಗಳು ಹುಳಿ ದ್ರಾಕ್ಷೆಯನ್ನು ತಿಂದರು, ಮಕ್ಕಳ ಹಲ್ಲುಗಳು ಜಳಿತು ಹೋಗಿವೆ ಎಂದು ಆ ಕಾಲದಲ್ಲಿ ಜನರು ಮತ್ತೆ ಅನ್ನರು. ಸಾಯತಕ್ಕವನು ತನ್ನ ದೋಷದಿಂದ ಸಾಯುವನು. ಹುಳಿ ದ್ರಾಕ್ಷೆಯನ್ನು ತಿನ್ನುವವನ ಹಲ್ಲುಗಳೇ ಜಳಿತು ಹೋಗುವವು" (ಯೆರೆಮೀಯ 31 : 29, 30)

"ಪಾಪ ಮಾಡುವವನೇ ಸಾಯುವನು; ಮಗನು ತಂದೆಯ ದೋಷ ಫಲವನ್ನು ಅನುಭವಿಸನು; ಶಿಷ್ಟನ ಶಿಷ್ಟತನದ ಫಲವು ಶಿಷ್ಟನದೇ, ದುಷ್ಟನ ದುಷ್ಟತನದ ಫಲವು ದುಷ್ಟನದೇ" (ಯೆಹೆಜ್ಕೇಲನು 18 : 20).

ಈ ವಾಕ್ಯಗಳಿಂದ, ಆದಂ ಮಾಡಿದ ಪಾಪ ಅವರ ಸಂತತಿಗಳಲ್ಲಿ ಸಂಕ್ರಮಿಸಿತೆಂದು ಭಾವಿಸುವುದು ಸರಿಯಲ್ಲವೆಂದು ಮನಗಾಣಬಹುದು. ಹೀಗೆ ಈ ಸಿದ್ಧಾಂತ ವಿವೇಕಕ್ಕೂ ಬೈಬಲ್ ಪ್ರಮಾಣಗಳಿಗೂ ವಿರುದ್ಧವೆಂದಾಗುವಾಗ ಅಂತಹ ಒಂದು ಪಾಪ ಪರಿಹಾರಕ್ಕಾಗಿ ಯೇಸು ಶಿಲುಬೆಯ ಮೇಲೆ ತೂಗಿ ಮಡಿದರೆಂದು ಭಾವಿಸುವುದನ್ನು ನ್ಯಾಯಿಕರಿಸಲಾಗದು.

ಇದೇ ಪ್ರಕಾರ, ಯೇಸು ಮಾತ್ರ ಪಾಪರಹಿತರೆಂದೂ ಆದ್ದರಿಂದ ಮನುಷ್ಯರ ಪಾಪವನ್ನು ಹೊರಲು ಅವರು ಮಾತ್ರ ಅರ್ಹರಾಗಿದ್ದರೆಂದೂ ಕ್ರೈಸ್ತ ಭಾಂಧವರು ನಂಬುವುದನ್ನು ಸಹ ಅಂಗೀಕರಿಸಲು ನಿರ್ವಾಹವಿಲ್ಲ. ಲೋಕಾರಂಭ ಮೊದಲ್ಗೊಂಡು ಇದುವರೆಗೆ ಜನ್ಮವೆತ್ತ ಮನುಷ್ಯರಲ್ಲಿ ಯೇಸು ಹೊರತು ಪಾಪರಹಿತನಾಗಿ ಬೇರ್‍ಯಾರು ಇರಲಿಲ್ಲವೆಂದೂ ಹಲವು ಕಾಲ ಘಟ್ಟಗಳಲ್ಲಿ ಲೋಕದ ನಾನಾ ಕಡೆಗಳಲ್ಲಿ ಅವತರಿಸಿದ ಪ್ರವಾದಿಗಳೂ ಆಧ್ಯಾತ್ಮಿಕ ಗುರುಗಳೂ ಪಾಪಿಗಳಾಗಿದ್ದರೆಂದೂ ಹೇಳುವುದು ಖಂಡಿತವಾಗಿಯೂ ಸತ್ಯಾತ್ಮರುಗಳಾದ ಮಹಾ ಪುರುಷರ ಮೇಲೆ ಆರೋಪಿಸಲ್ಪಡುವ ದೊಡ್ಡದಾದೊಂದು ಅಪರಾಧವಾಗಿದೆ. ಮಾತ್ರವಲ್ಲ, ಯೇಸು ಕ್ರಿಸ್ತರಲ್ಲದೆ ಪಾಪರಹಿತರಾದ ಅನೇಕ ಪುಣ್ಯ ಪುರುಷರು ಲೋಕದಲ್ಲಿ ಆಗಮಿಸಿದ್ದರೆಂದು ಬೈಬಲ್‌ನಿಂದಲೇ ಮನವರಿಕೆಯಾಗುತ್ತದೆ. ಯೋಹಾನ[1], ಜಕರೀಯ ಮತ್ತು ಅವರ ಪತ್ನಿ[2], ಮರಿಯಳ ಪತಿ ಯೋಸೇಫ[3], ದಾನಿಯೇಲ[4], ಹಿಜ್ಕೀಯನು[5], ಯೋಷೀಯೆನು[6] ಸಮುವೇಲನು[7], ಸಂಸೋನ[8], ಹೇಬೆಲ[9] ಮೊದಲಾದವರು ಪಾಪರಹಿತರಾಗಿದ್ದರೆಂದು ಬೈಬಲ್ ಸಾಕ್ಷೀಕರಿಸುತ್ತದೆ. ಇವರ ಪೈಕಿ ಹೇಬೆಲ ಆದಂ ಪ್ರವಾದಿಯ ಸ್ವಂತ ಪುತ್ರನಾಗಿದ್ದು ಸಹ ಅವರು ಪಾಪರಹಿತರಾಗಿದ್ದರೆಂದು ಬೈಬಲ್ ಹೇಳುತ್ತದೆ. ಹಾಗೆ ಆದಂ ಪ್ರವಾದಿಯ ಪಾಪ ಅವರ ಸ್ವಂತ ಪುತ್ರನಿಗೆ ಹರಡುವುದಾಗಲಿ, ಆ ಪುತ್ರನ ಪಾಪ ಪರಿಹಾರಕ್ಕಾಗಿ ಒಂದು ನರಬಲಿಯ ಆವಶ್ಯಕತೆ ಉಂಟಾಗದಿರುವ ಸ್ಥಿತಿಯಲ್ಲಿ, ಮನುಷ್ಯರೆಲ್ಲಾ ಪಾಪಿಗಳೆಂದೂ ಪಾಪರಹಿತ ಯೇಸು ಮಾತ್ರವೆಂದೂ ಆದ್ದರಿಂದ ಅವರು ಪಾಪಿಗಳಿಗಾಗಿ ಬಲಿಯಾದರೆಂದೂ ಹೇಳುವುದು ಸ್ವೀಕಾರಾರ್ಹವಾಗುವುದು ಹೇಗೆ? ಮಾತ್ರವಲ್ಲ, ಆದಂ ಪಾಪ ಮಾಡಿದ ಕಾರಣ ಮನುಷ್ಯರೆಲ್ಲರೂ ಪಾಪಿಗಳಾಗಿ ಬಿಟ್ಟರೆ ಯೇಸು

1. ಲೂಕ 1:15
2. ಲೂಕ 1:6
3. ಮತ್ತಾಯ 1:19
4. ದಾನಿಯೇಲ 6:4
5. ೨ ಅರಸುಗಳು 18:5–7
6. ೨ ಅರಸುಗಳು 22:2
7. ೧ ಸಮುವೇಲನು 12:3–5
8. ನ್ಯಾಯಸ್ಥಾಪಕರು 13:5
9. ಮತ್ತಾಯ 23:35

ಸಹ ಪಾಪಿಯಾಗಿದ್ದರೆಂದು ಒಪ್ಪಬೇಕಾದೀತು. ಏಕೆಂದರೆ, ಆದಂ ಪ್ರವಾದಿಯ ಪುತ್ರಿಯಾದ ಮರಿಯಳಿಂದ ಯೇಸು ಹುಟ್ಟಿದ್ದು. ಆಗ, ಕ್ರೈಸ್ತ ಸಿದ್ಧಾಂತವನುಸರಿಸಿ ಪಾಪಿಯಾದ ಮರಿಯಳಿಂದ ಜನಿಸಿದ ಯೇಸು ಸಹ ಪಾಪಿಯಾಗಬೇಕಾಗಿದೆ. ಅಷ್ಟೇ ಅಲ್ಲ, ತಂದೆಯಿಲ್ಲದೆ ಹುಟ್ಟಿದ ಕಾರಣ ಜನ್ಮತಃ ಇರುವ ಪಾಪ ಇತರರಿಗಿಂತ ಹೆಚ್ಚು ಯೇಸುಕ್ರಿಸ್ತರಿಗೆ ಇರಬೇಕಾಗಿದೆ ಎಂದು ಬೈಬಲಿನಿಂದ ಮನವರಿಕೆಯಾಗುತ್ತದೆ. ಏಕೆಂದರೆ, ಆದಂ ಪ್ರವಾದಿಯನ್ನು ಪಾಪಕ್ಕೆ ಪ್ರೇರೇಪಿಸಿದ್ದು ಹವ್ವ ಆಗಿರುವುದರಿಂದ (ಆದಿಕಾಂಡ 3 : 6) ಪುರುಷನ ಪಾಪಕ್ಕಿಂತ ಮಿಗಿಲಾದುದು ಸ್ತ್ರೀಯ ಪಾಪವಾಗಿದೆ. ಆದ್ದರಿಂದ, ಮರಿಯಳಿಂದ ಮಾತ್ರ ಜನಿಸಿದ ಯೇಸುವಿನ ಪಾಪ ಇತರರದಕ್ಕಿಂತ ಹೆಚ್ಚು ಘೋರವಾದುದೆಂದು ಒಪ್ಪಬೇಕಾದೀತು. "ಅಶುದ್ಧದಿಂದ ಶುದ್ಧವು ಉಂಟಾದೀತೇ? ಎಂದಿಗೂ ಇಲ್ಲ" (ಯೋಬನು 14 : 4) ಮತ್ತು ಮನುಷ್ಯನು ದೇವರ ಎಣಿಕೆಯಲ್ಲಿ ನೀತಿವಂತನಾಗಿರುವದು ಹೇಗೆ ? ಸ್ತ್ರೀಯಲ್ಲಿ ಹುಟ್ಟಿದವನು ಪರಿಶುದ್ಧನಾಗಿರುವದು ಸಾಧ್ಯವೋ?" (ಯೋಬನು 25:4) ಎಂಬ ವಾಕ್ಯಗಳು ಈ ಸಂಗತಿಯನ್ನು ವಿಶದ ಮಾಡಿ ಕೊಡುತ್ತವೆ. ಒಟ್ಟಾರೆ, ಮನುಷ್ಯರೆಲ್ಲರೂ ಜನ್ಮತಃ ಪಾಪಿಗಳೆಂದೂ ಯೇಸು ಮಾತ್ರ ಪಾಪರಹಿತರೆಂದೂ ಹೇಳುವುದೂ ಎಂದಿಗೂ ಸ್ವೀಕಾರಾರ್ಹವಲ್ಲ.

2. ಯೇಸು ದೇವಪುತ್ರ ಹಾಗೂ ದೇವರೆಂದೂ ಆದ್ದರಿಂದ ಅವರಿಗೆ ಮನುಷ್ಯರ ಪಾಪಕ್ಕಾಗಿ ಬಲಿಯಾಗಲಿಕ್ಕೆ ಸಾಧ್ಯವಾಯಿತೆಂದೂ ಕ್ರೈಸ್ತ ಬಾಂಧವರು ನಂಬುತ್ತಾರೆ. ಈ ನಂಬಿಕೆ ಸಹ ಬುದ್ಧಿಗೂ ಕ್ರೈಸ್ತ ಧರ್ಮ ಗ್ರಂಥಕ್ಕೂ ವಿರುದ್ಧವಾದುದಾಗಿದೆ. ಯೇಸು ದೇವರಲ್ಲವೆಂದೂ ಬದಲು, ದೇವರಿಂದ ನಿಯೋಜಿಸಲ್ಪಟ್ಟ ಒಬ್ಬ ಪ್ರವಾದಿ ಮಾತ್ರವಾಗಿದ್ದರೆಂದೂ ದೇವರ ಲಕ್ಷಣಗಳು ಅವರಿಗೆ ಇರಲಿಲ್ಲವೆಂದೂ ಅವರ ಕುರಿತು ದೇವಪುತ್ರನೆಂದು ಹೇಳಲ್ಪಟ್ಟಂತೆಯೇ ಬೇರೆ ಅನೇಕರ ಕುರಿತು ಸಹ ದೇವಪುತ್ರರೆಂದು ಹೇಳಲಾಗಿದೆಂದೂ ಬೈಬಲ್‌ನಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಯೇಸು ಹೀಗೆ ಹೇಳಿದ್ದರು :

"ನಿಮ್ಮನ್ನು ಸೇರಿಸಿಕೊಳ್ಳುವವನು ನನ್ನನ್ನು ಸೇರಿಸಿಕೊಳ್ಳುವವನಾಗಿದ್ದಾನೆ: ನನ್ನನ್ನು ಸೇರಿಸಿಕೊಳ್ಳುವವನು ನನ್ನನ್ನು ಕಳುಹಿಸಿಕೊಟ್ಟಾತನನ್ನೇ ಸೇರಿಸಿಕೊಳ್ಳುವವನಾಗಿದ್ದಾನೆ." (ಮತ್ತಾಯ 10 : 40).

"ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ" (ಮತ್ತಾಯ 15 : 24)

"ದೇವರಿಂದ ಕೇಳಿದ ಸತ್ಯವನ್ನು ನಿಮಗೆ ಹೇಳಿದವನಾದ ನನ್ನನ್ನು ಕೊಲ್ಲುವುದಕ್ಕೆ ನೋಡುತ್ತೀರಿ" (ಯೋಹಾನ 8 : 40).

"ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವೆ..." (ಯೋಹಾನ 15 : 10).

ಈ ವಾಕ್ಯಗಳಿಂದ, ಯೇಸುಕ್ರಿಸ್ತರು ದೇವರು ನಿಯೋಜಿಸಿದ ಒಬ್ಬ ದೂತನೂ ಅವನ ಆಜ್ಞೆ ಪ್ರಕಾರ ವರ್ತಿಸುತ್ತಲೂ ಅವನಿಂದ ಕೇಳಿದ್ದನ್ನು ಉಪದೇಶಿಸುತ್ತಲೂ ಇದ್ದ ಓರ್ವ ಪ್ರವಾದಿಯೂ ಆಗಿದ್ದರೆಂದು ಸ್ಪಷ್ಟವಾಗುತ್ತದೆ. ಈ ರೀತಿಯ ಎಷ್ಟೋ ವಚನಗಳು ಸುವಾರ್ತೆಗಳಲ್ಲಿ ಕಾಣಬಹುದು.

ದೇವರು ಸರ್ವಶಕ್ತನೂ ರಹಸ್ಯಗಳನ್ನು ತಿಳಿಯುವವನೂ ಅಮರ್ತ್ಯನೂ ಅಭೇದ್ಯನೂ ಸರ್ವಾಧಿಕಾರಿಯೂ ನಿದ್ರಾಶನಾದಿಗಳ ಅವಶ್ಯವಿಲ್ಲದವನೂ ಆಗಿದ್ದಾನೆ. ಆದರೆ ಇಂತಹ ಯಾವ ದಿವ್ಯಗುಣವಾಗಲಿ ಯೇಸುಕ್ರಿಸ್ತರಿಗೆ ಇರಲಿಲ್ಲವೆಂದು ಸುವಾರ್ತೆಯ ವಾಕ್ಯಗಳು ಸಾರುತ್ತವೆ. ಸುವಾರ್ತೆಗಳನ್ನು ಓದಿನೋಡುವ ಯಾರಿಗೂ ಈ ಸಂಗತಿ ಪ್ರಯಾಸವಿಲ್ಲದೆ ಮನಗಾಣಲು ಸಾಧ್ಯವಿದೆ. ಅಷ್ಟೇ ಅಲ್ಲ, ಯೇಸುಕ್ರಿಸ್ತರು ದೇವರನ್ನು ಆರಾಧಿಸುತ್ತಾ ಅವನೊಡನೆ ಪ್ರಾರ್ಥಿಸುತ್ತಾ ತಾನು ದೇವರ ಒಬ್ಬ ದಾಸನು ಮಾತ್ರವೆಂದು ಸ್ಪಷ್ಟಪಡಿಸಿಯೂ ಇದ್ದರು. ಮತ್ತಾಯ 26 : 36, ಲೂಕ 5 : 16, 22 : 44 ಮೊದಲಾದ ವಾಕ್ಯಗಳನ್ನು ಓದಿ ನೋಡಿದರೆ ಈ ನಿಜಾಂಶವನ್ನು ಮನಗಾಣಬಹುದು.

ಇನ್ನು, ಯೇಸುಕ್ರಿಸ್ತರ ಕುರಿತು ದೇವ ಪುತ್ರ ಎಂದು ಹೇಳಿದುದರಿಂದ ಅವರು ದೇವರೋ ದೇವರಿಗೆ ತುಲ್ಯರೋ ಆಗುವುದಿಲ್ಲ. ಏಕೆಂದರೆ ದೇವಪುತ್ರನೆಂದು ಅವರ ಕುರಿತು ಮಾತ್ರವಲ್ಲ ಹೇಳಿದ್ದು. ಬೇರೆಯೂ ಅನೇಕರ ಕುರಿತು ಸಹ ಸತ್ಯವೇದದಲ್ಲಿ ಹಾಗೆ ಹೇಳಲಾ

ಲಾಗಿದೆ. ಅಷ್ಟೇ ಅಲ್ಲ. ದೇವಪುತ್ರ ಎಂದು ಹೇಳುವುದರ ತಾತ್ಪರ್ಯ ದೇವರಿಂದ ನಿಯೋಜಿಸಲ್ಪಡುವ ಪ್ರವಾದಿ ಎಂದು ಮಾತ್ರವೆಂದು ಯೇಸುಕ್ರಿಸ್ತರೇ ವ್ಯಕ್ತಪಡಿಸಿದ್ದಾರೆ. (ಯೋಹಾನ 10 : 30–36). ಆದ್ದರಿಂದ, ದೇವಪುತ್ರನೆಂದು ಹೇಳಲ್ಪಡುವುದರಿಂದ ಯೇಸುಕ್ರಿಸ್ತರು ದೇವರೋ ದೇವತುಲ್ಯರೋ ಆಗಿದ್ದಾರೆಂದು ಭಾವಿಸುವುದು ಅವರ ಸ್ವಂತ ವ್ಯಾಖ್ಯಾನಕ್ಕೆ ಸಹ ವಿರುದ್ಧವಾಗಿದೆ. ಮಾತ್ರವಲ್ಲ, ಅವರ ಕುರಿತು ಹೆಚ್ಚಾಗಿ ದೇವಪುತ್ರನೆಂದು ಹೇಳುವುದಕ್ಕೆ ಬದಲು ಮನುಷ್ಯಪುತ್ರನೆಂದು ಪ್ರಸ್ತಾಪಿಸುತ್ತಾ ಅವರು ಒಬ್ಬ ಮನುಷ್ಯ ಮಾತ್ರ ಆಗಿದ್ದರೆಂದು ಸುವಾರ್ತೆಗಳು ಕಲಿಸುತ್ತವೆ. ಅವರು ಒಬ್ಬ ಪ್ರವಾದಿ ಮಾತ್ರ ಆಗಿದ್ದರೆಂದು ಸುವಾರ್ತೆಗಳ ಇತರ ಅನೇಕ ಆಧಾರಗಳಿಂದ ಸಹ ಸಾಬೀತಾಗುವುದಾದರೂ ಸ್ಥಳಾಭಾವದಿಂದ ಅವುಗಳ ಕುರಿತು ನಾನಿಲ್ಲಿ ಪ್ರತಿಪಾದಿಸಲು ಬಯಸುವುದಿಲ್ಲ. ಅವರು ದೇವರಿಂದ ಕಳುಹಿಸಲ್ಪಟ್ಟ ಒಬ್ಬ ದೂತ ಮಾತ್ರವಲ್ಲದೆ, ದೇವರಲ್ಲವೆಂದಾಗುವಾಗ, ಮನುಷ್ಯರ ಪಾಪವನ್ನು ಹೊರಲು ದೇವಪುತ್ರನಿಗಲ್ಲದೆ ಮನುಷ್ಯನಿಗೆ ಸಾಧ್ಯವಿಲ್ಲವೆಂದೂ ಆದ್ದರಿಂದ ಅವರು ಎಲ್ಲರ ಪಾಪವನ್ನು ಹೊತ್ತು ಅವರ ಪಾಪ ವಿಮುಕ್ತಿಗಾಗಿ ಶಿಲುಬೆಯ ಮೇಲೆ ತೂಗಿ ಮಡಿದರೆಂದೂ ಹೇಳುವುದು ಆಧಾರ ರಹಿತವಾದೊಂದು ವಿಚಾರವೆಂದು ಸಿದ್ಧಿಸುತ್ತದೆ. ಅಷ್ಟೇ ಅಲ್ಲ, ಈ ನ್ಯಾಯ ಪ್ರಕಾರ ಶಿಲುಬೆಯ ಮೇಲೆ ತೂಗಿ ಮಡಿದದ್ದು ದೇವರೆಂದು ಸಮ್ಮತಿಸಬೇಕಾದೀತು. ಆದರೆ ದೇವರು ಮಡಿಯಬಾರದವನೆಂದಾದರೆ ಮತ್ತೆ ಯೇಸು ಮನುಷ್ಯರ ಪಾಪಕ್ಕಾಗಿ ಬಲಿಯಾದರೆಂದು ಹೇಳುವುದು ಸ್ವೀಕಾರಾರ್ಹವಾಗುವುದು ಹೇಗೆ? ಶಿಲುಬೆಯ ಮೇಲೆ ಮಡಿದುದು ದೇವರೋ ದೇವಪುತ್ರನೋ ಅಲ್ಲ, ಮನುಷ್ಯನಾದ ಯೇಸುಕ್ರಿಸ್ತರೇ ಎಂದು ಹೇಳುವುದಾದರೆ, 'ಒಬ್ಬ ಮನುಷ್ಯನಿಗೆ ಎಲ್ಲಾ ಜನರ ಪಾಪವನ್ನು ವಹಿಸುವುದಾಗಲಿ ಅವರಿಗಾಗಿ ಬಲಿಯಾಗುವುದಾಗಲಿ ಸಾಧ್ಯವಿಲ್ಲ; ಆ ಕಾರಣ ದೇವಪುತ್ರನು ಅವರಿಗಾಗಿ ಮಡಿದರು' ಎಂದು ಹೇಳುವುದು ಅರ್ಥಶೂನ್ಯವಾಗುತ್ತದೆ. ಒಟ್ಟಿನಲ್ಲಿ, ಒಂದೋ ಶಿಲುಬೆಯ ಮೇಲೆ ತೂಗಿ ಮಡಿದುದು ದೇವರೆಂದು ಒಪ್ಪಿಕೊಂಡು ದೇವರು ಮಡಿಯುವವನೂ ತನ್ನ ಶತ್ರುಗಳ ಕೈಗಳಿಂದ ಸ್ವಯಂ ಪಾರಾಗಲು ಅಶಕ್ತನೂ ಮೂರು ದಿವಸ ಸಮಾಧಿಯೊಳಗೆ ಮಡಿದು ಮಲಗಿದವನೂ ಎಂದು ನಂಬಬೇಕಾದೀತು. ಸರ್ವ ಶಕ್ತನೂ ಆದ್ಯಂತರಹಿತನೂ ಅಮರ್ತ್ಯನೂ ಆದ ದೇವರ ಕುರಿತು ಹೀಗೆ ನಂಬುವುದು ದೊಡ್ಡದಾದ ದೇವನಿಂದನೆಯೆಂಬ ಸಂಗತಿ ಕ್ರೈಸ್ತ ಬಾಂಧವರು ಗಮನಿಸದಿರುವುದು ಬಹಳ ವ್ಯಸನಕರವಾಗಿದೆ. ದೇವರ ಕುರಿತು ಹಾಗೆ ನಂಬಬಾರದೆಂದಾದರೆ ಮತ್ತೆ ಶಿಲುಬೆಯಲ್ಲಿ ಮಡಿದದ್ದು ಸಾಮಾನ್ಯ ಮನುಷ್ಯನ ಹಾಗೆ ಆದಮರ ಪಾಪ ನಿಮಿತ್ತ ಜನ್ಮತಃ ಪಾಪಿಯಾದ ಒಬ್ಬ ಮನುಷ್ಯ ಆಗಿದ್ದರೆಂದು ಒಪ್ಪಬೇಕಾದೀತು. ಆಗ, ಎಲ್ಲಾ ಮನುಷ್ಯರ ಪಾಪವನ್ನು ಅವರ ಹಾಗೆಯೇ ಮನುಷ್ಯನಾದ ಒಬ್ಬನು ಹೊರಲು ಸಾಧ್ಯವಿದೆಯೆಂದೂ ಆದ್ದರಿಂದ ಅದಕ್ಕಾಗಿ ಒಬ್ಬ ಪ್ರತ್ಯೇಕ ವ್ಯಕ್ತಿ ಬಲಿಯಾಗಬೇಕಾಗಿಲ್ಲವೆಂದೂ ಪ್ರತಿಯೊಬ್ಬ ಮನುಷ್ಯ ತನ್ನ ಪಾಪದ ಶಿಕ್ಷೆಯನ್ನು ಮೂರು ದಿವಸ ಅನುಭವಿಸಿದ ನಂತರ ಮುಕ್ತಿ ಪಡೆಯಬಹುದೆಂದೂ ಒಪ್ಪಬೇಕಾದೀತು. ಮಾತ್ರವಲ್ಲ, ಲೋಕದ ಸರ್ವ ಜನರ ಪಾಪ ಹೊತ್ತ ಒಬ್ಬ ಮನುಷ್ಯನಿಗೆ ಮೂರು ದಿನಗಳ ಶಿಕ್ಷೆ ಸಾಕೆಂದಾದರೆ, ತನ್ನ ಸ್ವಂತ ಪಾಪಕ್ಕಾಗಿ ಪ್ರತಿಯೊಬ್ಬನಿಗೆ ಮೂರು ನಿಮಿಷಗಳ ಕಾಲದ ಶಿಕ್ಷೆ ಕೂಡ ಬೇಕಾಗಲಿಕ್ಕಿಲ್ಲವೆಂದೂ ಒಪ್ಪಬೇಕಾದೀತು.

3. ಮನುಷ್ಯರೆಲ್ಲ ಜನ್ಮತಃ ಪಾಪಿಗಳಾದುದರಿಂದ ಅವರನ್ನು ಶಿಕ್ಷಿಸದಿರುವುದು ದೇವನೀತಿಗೆ ವಿರುದ್ಧವೂ ಅವರನ್ನು ಶಿಕ್ಷಿಸುವುದು ದೇವ ಕಾರುಣ್ಯಕ್ಕೆ ವಿರುದ್ಧವೂ ಆದುದರಿಂದ, ದೇವಪುತ್ರನು ಅವರ ಪಾಪ ವಿಮುಕ್ತಿಗಾಗಿ ಶಿಲುಬೆಯಲ್ಲಿ ತೂಗಿ ಮಡಿದರೆಂದೂ ಹಾಗೆ ಮನುಷ್ಯರ ಪಾಪಕ್ಕಾಗಿ ಯೇಸುಕ್ರಿಸ್ತರು ಶಿಕ್ಷಿಸಲ್ಪಟ್ಟದುದರಿಂದ ಪಾಪಿಗಳನ್ನು ಶಿಕ್ಷಿಸಬೇಕೆಂಬ ದೇವ ನೀತಿ ಪಾಲಿಸಲ್ಪಟ್ಟಿತೆಂದೂ ಹೀಗೆ ಯೇಸುಕ್ರಿಸ್ತರ ಬಲಿ ನಿಮಿತ್ತ ಮನುಷ್ಯರಿಗೆ ಶಿಕ್ಷೆಯಿಂದ ವಿಮುಕ್ತರಾಗಲು ಸಾಧ್ಯವಾದುದರಿಂದ ದೇವರ ಕೃಪೆ ಪೂರ್ತಿಯಾಯಿತೆಂದೂ ಕ್ರೈಸ್ತ ಬಾಂಧವರು ನಂಬುತ್ತಾರೆ. ಈ ನಂಬಿಕೆ ಪ್ರಕಾರ ಪಾಪಿಗಳಾದ ಮನುಷ್ಯರನ್ನು ಶಿಕ್ಷಿಸಲಿಕ್ಕಾಗಲಿ ಶಿಕ್ಷಿಸದೆ ಇರಲಿಕ್ಕಾಗಲಿ ದೇವರಿಗೆ ನಿರ್ವಾಹವಿರಲಿಲ್ಲವೆಂದೂ ಆದರೆ ದೇವಪುತ್ರನಾದ ಯೇಸು ಮನುಷ್ಯರಿಗೋಸ್ಕರ ಬಲಿಯಾದ ಕಾರಣ ಆ ಸಮಸ್ಯೆಗೆ ಪರಿಹಾರ ಉಂಟಾಯಿತೆಂದೂ ತಿಳಿದುಕೊಳ್ಳಬೇಕಾಗಿದೆ. ಆದರೆ ಪಾಪಿಗಳಾದ ಮನುಷ್ಯರನ್ನು ಶಿಕ್ಷಿಸುವುದು ನೀತಿ

ವಿರುದ್ಧವೆಂದಾದರೆ ಅವರಿಗೋಸ್ಕರ ಪಾಪರಹಿತನಾದ ಒಬ್ಬನನ್ನು ಶಿಕ್ಷಿಸುವುದು ಎಷ್ಟರ ಮಟ್ಟಿಗೆ ಅನೀತಿಯಾಗಿರಬಹುದೆಂದೂ ಅದೇ ಪ್ರಕಾರ ಪಾಪಿಗಳಾದ ಮನುಷ್ಯರನ್ನು ಶಿಕ್ಷಿಸುವುದು ದೇವಕಾರುಣ್ಯಕ್ಕೆ ಹೊಂದಾಣೆಗೆ ಇಲ್ಲದ್ದೆಂದಾದರೆ ಯಾವುದೇ ಪಾಪವೂ ತಟ್ಟದ ಒಬ್ಬ ಪುಣ್ಯಪುರುಷನನ್ನು ಶಿಕ್ಷಿಸುವುದು ಎಷ್ಟರ ಮಟ್ಟಿಗೆ ನಿಷ್ಠುರವಾದುದೆಂದೂ ಯಾರಿಗೂ ಪ್ರಯಾಸವಿಲ್ಲದೆ ಮನಗಾಣಬಹುದು. ಪಾಪಿಗಳಾದ ಮನುಷ್ಯರನ್ನು ಶಿಕ್ಷಿಸುವುದು ದೇವರ ನೀತಿ ಮತ್ತು ಕೃಪೆಗೆ ವಿರುದ್ಧವೆಂದಾದರೆ, ಅವರನ್ನು ಶಿಕ್ಷಿಸುವುದರ ಬದಲು ಪಾಪರಹಿತನಾದ ಯೇಸುಕ್ರಿಸ್ತರನ್ನು ಶಿಕ್ಷಿಸುವುದು ಆ ನೀತಿಗೂ ಕೃಪೆಗೂ ಅದಕ್ಕಿಂತ ಎಷ್ಟೋ ಹೆಚ್ಚು ಭಂಗಕರವಾದುದೆಂದು ಒಪ್ಪದಿರಲಿಕ್ಕೆ ನಿರ್ವಾಹವಿಲ್ಲ. ಹೀಗೆ ಈ ಸಿದ್ಧಾಂತ ದೇವ ನೀತಿಗೂ ಅವನ ಕೃಪೆಗೂ ಭಂಗಕರವಾದುದು ಮಾತ್ರವಲ್ಲ, ಅದು ಮಹಾತ್ಮ ಯೇಸುಕ್ರಿಸ್ತರ ಧರ್ಮಬೋಧನೆಗೂ ಕಳಂಕಕರವಾದುದು. ಮನುಷ್ಯರಿಗೆ ಪಾಪ ವಿಮುಕ್ತಿ ಗಳಿಸಿಕೊಡಲಿಕ್ಕಾಗಿ ಅವರು ನಿಯೋಜಿತರಾಗಿದ್ದರೆ, ಶಿಲುಬೆಯ ಮೇಲೆ ತೂಗಿ ಸಾಯಲು ಅವರು ತಾನೇ ಬೇಕಾದ ಏರ್ಪಾಡುಗಳನ್ನೆಲ್ಲಾ ಮಾಡಿ, ತನ್ನ ಅವತಾರೋದ್ದೇಶ ಈಡೇರಲು ಸ್ವಯಂ ಪರಿಶ್ರಮಿಸುತ್ತಿದ್ದರು. ಆದರೆ, ಅವರೊಡನಿದ್ದ ವಿರೋಧದಿಂದ ನಿಷ್ಠುರರಾದ ಯೆಹೂದ್ಯರು ಅವರನ್ನು ಬಲಾತ್ಕಾರದಿಂದ ಹಿಡಿದು ಬಡಿದು ಕೊನೆಗೆ ಶಿಲುಬೆಗೆ ಜಡಿದರೆಂದೂ ಯೇಸುಕ್ರಿಸ್ತರಾದರೋ ಆ ಶಿಲುಬೆಯ ಮರಣದಿಂದ ಪಾರಾಗಲಿಕ್ಕಾಗಿ ಆ ಸಂಭವಕ್ಕೆ ಮುಂಚಿನ ರಾತ್ರೆಯಿಡೀ ನಿದ್ರೆಗೆಟ್ಟು ಬಹಳ ನೊಂದುಕೊಂಡು ಅಳುತ್ತಾ ಪ್ರಾರ್ಥಿಸುತ್ತಲೂ ಶಿಷ್ಯರೊಡನೆ ಪ್ರಾರ್ಥಿಸಲಿಕ್ಕೆ ಹೇಳುತ್ತಲೂ ಇದ್ದರೆಂದೂ ಕೊನೆಗೆ ಶಿಲುಬೆಗೆ ಜಡಿಯಲ್ಪಟ್ಟಾಗ ಮರ್ಮ ಬೇಧಕವಾಗಿ "ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ?" ಎಂಬ ಆಲಾಪದೊಂದಿಗೆ ತನ್ನನ್ನು ರಕ್ಷಿಸಲಿಕ್ಕೆ ಸಾಮರ್ಥವುಳ್ಳ ಸರ್ವಶಕ್ತನಿಗೆ ಅವರು ಮೊರೆಯಿಡುತ್ತಿದ್ದರೆಂದೂ "ಸುವಾರ್ತೆ"ಗಳಿಂದ ಸ್ಪಷ್ಟವಾಗುತ್ತದೆ. ಈ ಸಂಭವಗಳನ್ನು ವಿವರಿಸುವ ಸುವಾರ್ತೆಗಳ ಪ್ರತಿಯೊಂದು ವಾಕ್ಯವೂ ಮನಗಾಣಿಸಿ ಕೊಡುವುದೇನೆಂದರೆ ಯೇಸು ಪಾಪ ಪರಿಹಾರಾರ್ಥ ಶಿಲುಬೆಯ ಮರಣವನ್ನು ಪಡೆಯಲಿಲ್ಲ; ಬದಲು ಅವರ ಇಚ್ಛೆಗೆ ವಿರುದ್ಧವಾಗಿ ನಿಷ್ಕರುಣರೂ ಅಕ್ರಮಿಗಳೂ ಆದ ಯೆಹೂದ್ಯರು ಅವರನ್ನು ಬಲಾತ್ಕಾರದಿಂದ ಹಿಡಿದು ಶಿಲುಬೆಗೆ ಜಡಿದಿದ್ದರು. ಈ ನಿಜಾಂಶವನ್ನು ಅಪೋಸ್ತಲರೇ ಒಪ್ಪಿಕೊಂಡಿದ್ದಾರೆ (ಅಪೋಸ್ತಲರ ಕೃತ್ಯಗಳು 5:30). ಇದರಿಂದ, ಪಾಪ ವಿಮುಕ್ತಿ ಸಿದ್ಧಾಂತ ಮತ್ತು ಯೇಸು ಮನುಷ್ಯರ ಪಾಪಬಲಿಯಾಗಿ ಶಿಲುಬೆಯ ಮೇಲೆ ತೂಗಿ ಮಡಿದರೆಂಬ ವಿಶ್ವಾಸ ಆಧಾರ ರಹಿತವೆಂದು ಸೂರ್ಯ ಪ್ರಕಾಶದಂತೆ ಸ್ಪಷ್ಟವಾಗುತ್ತದೆ.

ಇದು ಮಾತ್ರವಲ್ಲ, ಯೇಸು ಶಿಲುಬೆಯ ಮೇಲೆ ಮಡಿದುದು ಮನುಷ್ಯರ ಪಾಪಗಳನ್ನು ಹೊತ್ತು ಒಬ್ಬ ಪಾಪಿಯಾದುದರಿಂದೆಂದಾದರೆ ಅವರು ಓರ್ವ ಮಹಾ ಪಾಪಿಯೆಂದು ಒಪ್ಪಬೇಕಾದಿತು. ಹಾಗೆ ಪಾಪಿಯಾದ ಅವರ ಪಾಪವಿಮುಕ್ತಿಗೋಸ್ಕರ ಬೇರೊಬ್ಬ ವ್ಯಕ್ತಿ ಬಲಿಯಾಗದೆ ಅವರೇ ಮೂರು ದಿವಸದ ಮರಣ ಶಿಕ್ಷೆ ಅನುಭವಿಸಿದರೆ ಸಾಕೆಂದಾದರೆ, ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಪಾಪವನ್ನು ಬೇರೊಬ್ಬನ ಬಲಿಯ ಹೊರತು ಒಂದು ನಿಮಿಷ ಹೊತ್ತಿನ ಶಿಕ್ಷಾನುಭವದಿಂದ ಪರಿಹರಿಸಲು ಸಾಧ್ಯವಿದೆಯೆಂದು ಒಪ್ಪಬೇಕಾದೀತು. ಮಾತ್ರವಲ್ಲ, ಮನುಷ್ಯರ ಪಾಪವೆಲ್ಲಾ ಯೇಸು ಹೊತ್ತು ಅದಕ್ಕಿರುವ ಶಿಕ್ಷೆಯನ್ನು ಅವರು ಅನುಭವಿಸಿ ಆಗಿದೆಯೆಂದಾದರೆ ಮತ್ತೆ ಮನುಷ್ಯರು ಈ ಸಿದ್ಧಾಂತದ ಕುರಿತು ಅರಿತರೂ ಅರಿಯದಿದ್ದರೂ ಅವರನ್ನು ಪಾಪಕ್ಕಾಗಿ ಶಿಕ್ಷಿಸುವುದು ನ್ಯಾಯರಹಿತವಾದುದಾಗಿದೆ. ಒಬ್ಬನು ಮತ್ತೊಬ್ಬನ ಪಾಪಕ್ಕಾಗಿ ಶಿಕ್ಷೆ ಅನುಭವಿಸುವುದೆಂಬುದು ಒಬ್ಬನ ಸಾಲವನ್ನು ಇನ್ನೊಬ್ಬನು ತೀರಿಸುವಂತೆ ಆಗಿದೆಯೆಂದು ಕ್ರೈಸ್ತ ಬಾಂಧವರು ಹೇಳುತ್ತಾರೆ. ಹಾಗಿದ್ದರೆ, ಪ್ರತಿಯೊಬ್ಬ ಮನುಷ್ಯನ ಪಾಪವೆಂಬ ಸಾಲವನ್ನು ಯೇಸುಕ್ರಿಸ್ತರು ತೀರಿಸಿರುವುದರಿಂದ ನಂಬಿಕೆಯೂ ನಡೆವಳಿಕೆಯೂ ಏನೇ ಆಗಿದ್ದರೂ ಯಾವೊಬ್ಬನೂ ಪಾಪ ನಿಮಿತ್ತ ಶಿಕ್ಷಿಸಲ್ಪಡಬಾರದಾಗಿದೆ. ಇದು ನ್ಯಾಯವಲ್ಲವೆಂದೂ ಪ್ರತಿಯೊಬ್ಬನು ಸಹ ಶಿಲುಬೆಯ ಮರಣದ ಬಗ್ಗೆ ನಂಬಿ ಯೇಸುಕ್ರಿಸ್ತರ ಉಪದೇಶ ಪ್ರಕಾರ ಜೀವನ ನಡೆಸಿದರೆ ಮಾತ್ರ ಪಾಪವಿಮುಕ್ತಿ ಉಂಟಾದೀತೆಂದೂ ಹೇಳುವುದಾದರೆ, ಯೇಸು ಎಲ್ಲರ ಪಾಪದ ಶಿಕ್ಷೆಯನ್ನು ಅನುಭವಿಸಿಯಾಗಿದೆಯೆಂದು ಹೇಳುವುದನ್ನು ಸ್ವೀಕರಿಸಲು ನಿರ್ವಾಹವಿಲ್ಲ. ಮಾತ್ರವಲ್ಲ ಹಾಗೆ ಒಪ್ಪುವಾಗ ಯೇಸುಕ್ರಿಸ್ತರಿಗಿಂತ ಮುಂಚೆ ಗತಿಸಿದ ಯಾರಿಗೂ ಪಾಪ

ವಿಮುಕ್ತಿ ಉಂಟಾಗಿಲ್ಲವೆಂದು ಸಹ ಹೇಳಬೇಕಾದೀತು. ಅದು ಕೂಡ ದೇವನೀತಿಗೆ. ವಿರುದ್ಧವಾದುದು. ಯೇಸುಕ್ರಿಸ್ತರ ಬಲಿಯನ್ನು ನಂಬಿದರೆ ಮಾತ್ರ ಪಾಪ ವಿಮುಕ್ತಿ ಉಂಟಾದೀತೆಂದಾದರೆ, ಆ ಬಲಿ ಲೋಕಾರಂಭದಲ್ಲೇ ನಡೆದಿದ್ದರೆ ಮಾತ್ರವೇ ಎಲ್ಲರಿಗೂ ನಂಬಲಿಕ್ಕೆ ಸಾಧ್ಯ. ಹಾಗೆ ಆ ಬಲಿ ಆರಂಭ ಕಾಲದಲ್ಲೇ ಉಂಟಾಗದೆ, ಸುಮಾರು ಎರಡು ಸಾವಿರ ವರ್ಷಗಳಿಗೆ ಮುಂಚೆ ಮಾತ್ರ ನಡೆದುದರಿಂದ ಅದಕ್ಕಿಂತ ಮೊದಲು ಪ್ರಪಂಚದಲ್ಲಿ ಗತಿಸಿದ ಸಹಸ್ರ ಕೋಟಿ ಪಾಪಿಗಳಿಗೆ ಪಾಪ ವಿಮುಕ್ತಿಗೆ ಯಾವುದೇ ಮಾರ್ಗ ಇಲ್ಲದೇ ಹೋಯಿತೆಂದು ಒಪ್ಪಬೇಕಾದೀತು. ಅಥವಾ, ಅವರ ಪಾಪಗಳು ಸತ್ಕರ್ಮ, ಪಶ್ಚಾತ್ತಾಪ, ಪ್ರಾರ್ಥನೆ ಇತ್ಯಾದಿಗಳಿಂದ ಪರಿಹರಿಸಲ್ಪಟ್ಟಿದ್ದರೆ ಮತ್ತೆ ಯೇಸುಕ್ರಿಸ್ತರ ನಂತರ ಹಾಗೆ ಪಾಪ ವಿಮುಕ್ತಿ ಉಂಟಾಗಲಾರದೆಂದು ಹೇಳುವುದು ನ್ಯಾಯಪೂರ್ಣವಾಗುವುದು ಹೇಗೆ? ಪಾಪ ವಿಮುಕ್ತಿಗಿರುವ ದಾರಿ ಪಾಪಿಗಳಿಗೋಸ್ಕರ ಇನ್ನೊಬ್ಬ ವ್ಯಕ್ತಿ ಶಿಲುಬೆಯ ಮೇಲೆ ಮಡಿಯುವುದಲ್ಲ; ಸತ್ಯ ವಿಶ್ವಾಸ, ಸತ್ಕರ್ಮ, ನೈತಿಕ ಜೀವಿತ, ಪ್ರಾರ್ಥನೆ ಮೊದಲಾದ ಒಳಿತುಗಳನ್ನು ಕೈಗೊಳ್ಳುವುದಾಗಿದೆ ಎಂದು ವೇದ ಗ್ರಂಥ ಹೇಳುತ್ತದೆ. ಬೈಬಲಿನ ಅನೇಕ ವಾಕ್ಯಗಳಿಂದ ಈ ಸಂಗತಿಯನ್ನು ಸಾಬೀತು ಪಡಿಸಬಹುದು. ಆದರೆ ಇಷ್ಟು ವಿವರಣೆಯಿಂದಲೇ ಪಾಪ ಪರಿಹಾರ ಸಿದ್ಧಾಂತ ಸ್ವೀಕಾರಾರ್ಹವಲ್ಲವೆಂದು ನಿಷ್ಪಕ್ಷ ಚಿಂತಕರಿಗೆ ಮನಗಾಣಲು ಸಾಧ್ಯವಿರುವುದರಿಂದ, ಅಂತಹ ಬೈಬಲ್ ವಾಕ್ಯಗಳನ್ನು ಇಲ್ಲಿ ಉದ್ಧರಿಸಿ ಲೇಖನವನ್ನು ದೀರ್ಘಗೊಳಿಸುವುದಿಲ್ಲ.

4. ಯೇಸು ಶಿಲುಬೆಯ ಮೇಲೆ ಮಡಿದು ಮೂರನೇ ದಿನ ಪುನರುತ್ಥಾನಗೊಂಡು ನಂತರ ಸ್ವರ್ಗಾರೋಹಣ ಮಾಡಿದರೆಂದು ಕ್ರೈಸ್ತ ಬಾಂಧವರು ನಂಬುತ್ತಾರೆ. ಈ ನಂಬಿಕೆ ಬುದ್ಧಿ ಮತ್ತು ವೇದಪ್ರಮಾಣಕ್ಕೆ ವಿರುದ್ಧವಾದುದೂ ದೇವರ ಮಹಾತ್ಮೆ ಹಾಗೂ ಯೇಸುಕ್ರಿಸ್ತರಿಗೆ ದೇವರೊಡನಿದ್ದ ಅಪಾರವಾದ ಪ್ರೇಮ ಬಂಧಕ್ಕೆ ಕಳಂಕರವಾದುದೂ ಆಗಿದೆ. ಶಿಲುಬೆಯ ಮೇಲೆ ಮಡಿಯುವುದು ಸುಳ್ಳುವಾದಿ ಮತ್ತು ಶಾಪಗ್ರಸ್ತನ ಲಕ್ಷಣವೆಂದು ವೇದ ಗ್ರಂಥ ಹೇಳುತ್ತದೆ (ಧರ್ಮೋಪದೇಶ ಕಾಂಡ 13:5, 21:23). ಯೇಸು ಶಿಲುಬೆಗೆ ತೂಗ ಹಾಕಲ್ಪಟ್ಟು ದೇವಶಾಪಕ್ಕೆ ಪಾತ್ರರಾದರೆಂದು ಅಪೋಸ್ತಲ ಪೌಲನೇ ಒಪ್ಪಿರುವನು (ಗಲಾತ್ಯದವರಿಗೆ 3:13). ಒಟ್ಟಾರೆ, ಯೇಸು ಶಿಲುಬೆಯ ಮೇಲೆ ಮಡಿದರೆಂದು ನಂಬುವ ಪಕ್ಷದಲ್ಲಿ, ಅವರಿಗೆ ದೇವರೊಡನೆ ಒಂದು ವಿಶೇಷ ಸಂಬಂಧವಿರಲಿಲ್ಲವೆಂದು ಸಹ ಒಪ್ಪಬೇಕಾದೀತು. ಏಕೆಂದರೆ, ಅವರು ಒಂದು ರಾತ್ರಿಯಿಡೀ ರೋದಿಸುತ್ತಾ ಆ ಮರಣದಿಂದ ತನ್ನನ್ನು ರಕ್ಷಿಸಲಿಕ್ಕಾಗಿ ದೇವರೊಡನೆ ಪ್ರಾರ್ಥಿಸಿದ್ದರು. ಅವರು ಇಷ್ಟು ಮನೋವೇದನೆಯಿಂದಲೂ ಆತ್ಮಾಶೆಯಿಂದಲೂ ಮಾಡಿದ ಪ್ರಾರ್ಥನೆಯನ್ನು ದೇವರು ಸ್ವೀಕರಿಸಲಿಲ್ಲವೆಂದು ಹೇಳಲಾಗದು. ಏಕೆಂದರೆ ಹಾಗೆ ಆದ ಪಕ್ಷದಲ್ಲಿ, "ಕರ್ತನು ದುಷ್ಟರಿಗೆ ದೂರ, ಶಿಷ್ಟರ ಬಿನ್ನಹಕ್ಕೆ ಹತ್ತಿರ" (ಜ್ಞಾನೋಕ್ತಿಗಳು 15:29) ಎಂಬ ವೇದವಾಕ್ಯಾನುಸಾರ ಯೇಸು ಒಬ್ಬ ದುಷ್ಟ ಎಂದು ಹೇಳಬೇಕಾದೀತು. ಅವರು ದುಷ್ಟರಲ್ಲ, ಶಿಷ್ಟರೇ ಎಂದಾದರೆ ಅವರ ಈ ಪ್ರಾರ್ಥನೆ ಮತ್ತು ಶಿಲುಬೆಯ ಮೇಲಿಂದ "ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ?" ಎಂಬ ಅವರ ಆಲಾಪವನ್ನು ಖಂಡಿತವಾಗಿಯೂ ದೇವರು ಸ್ವೀಕರಿಸಬೇಕಾಗಿದೆ. ವಾಸ್ತವದಲ್ಲಿ ಅವರೊಬ್ಬ ಶಿಷ್ಟ ಮಾತ್ರವಲ್ಲ, ದೇವರ ಓರ್ವ ವರಿಷ್ಠ ದಾಸ ಸಹ ಆಗಿರುವುದರಿಂದ ಮನೋವೇದನೆಯಿಂದ ಕೂಡಿದ ಅವರ ಈ ಪ್ರಾರ್ಥನೆಗಳನ್ನೆಲ್ಲಾ ದೇವರು ಸ್ವೀಕರಿಸಿದನು. ವೇದಗ್ರಂಥ ಹೀಗೆ ಹೇಳುತ್ತದೆ: "ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡ ಶಕ್ತನಾಗಿರವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು" (ಇಬ್ರಿಯರಿಗೆ 5:7). ಹೀಗೆ ಯೇಸು ಪ್ರಾರ್ಥಿಸಿದ್ದು ಶಿಲುಬೆಯ ಮರಣದಿಂದ ಪಾರಾಗಲಿಕ್ಕಾಗಿತ್ತೆಂದೂ ಅವರ ಆ ಪ್ರಾರ್ಥನೆ ಸ್ವೀಕರಿಸಲ್ಪಟ್ಟಿತೆಂದೂ ವೇದ ಪುಸ್ತಕದಿಂದ ತಿಳಿದುಬರುವಾಗ ಅವರು ಶಿಲುಬೆಯ ಮೇಲೆ ಮಡಿದಿರಲಿಲ್ಲವೆಂದು ಒಪ್ಪಬೇಕಾದೀತು. ಅವರು ಶಿಲುಬೆಯ ಮೇಲೆ ಮೂರ್ಛೆ ಹೊಂದಿದ್ದರಿಂದ ಮೃತಪಟ್ಟಂತೆ ಗೋಚರಿಸಲ್ಪಟ್ಟರು ಹೊರತು ಅವರು ವಾಸ್ತವದಲ್ಲಿ ಅದರ ಮೇಲೆ ಮಡಿದಿರಲಿಲ್ಲವೆಂದು ಇಷ್ಟರಿಂದಲೇ ಮನವರಿಕೆಯೂಗುತ್ತದೆ. ಆದರೆ ಅವರು

ಶಿಲುಬೆಯ ಮೇಲೆ ಮಡಿದಿರಲಿಲ್ಲವೆಂದು ಸಾಬೀತು ಪಡಿಸುವ ಇನ್ನೂ ಅನೇಕ ಸಾಕ್ಷ್ಯಗಳು ವೇದ ಗ್ರಂಥದಲ್ಲಿ ಕಂಡು ಬರುತ್ತವೆ. ಅವರು ಶಿಲುಬೆ ಮೇಲಿದ್ದ ಕಾಲ, ಅವರನ್ನು ರಕ್ಷಿಸಲಿಕ್ಕೆ ಮಾಡಲ್ಪಟ್ಟ ಏರ್ಪಾಡು. ಶತ್ರುಗಳ ಕೈಗಳಿಂದ ತಾನು ಕಷ್ಟವನ್ನನುಭವಿಸುವೆನೆಂದು ಅವರು ಹೇಳಿದ ಭವಿಷ್ಯ ನುಡಿ. ಯೋನ ಪ್ರವಾದಿಯ ಲಕ್ಷಣ ತನ್ನ ಮೂಲಕ ಗೋಚರವಾಗುವುದೆಂದು ಅವರು ಹೇಳಿದ್ದು. ಇಸ್ರಾಯೇಲ್ ಮನೆತನದ ತಪ್ಪಿಸಿಕೊಂಡ ಇತರ ಜನರ ಬಳಿಗೆ ಸಹ ತನಗೆ ಹೋಗಲಿಕ್ಕುಂಟೆಂದು ಅವರು ಹೇಳಿದುದೆಲ್ಲಾ ಅವರು ಶಿಲುಬೆಯ ಮೇಲೆ ಮಡಿದಿರಲಿಲ್ಲವೆಂದೂ ಅವರು ಆ ಮರಣದಿಂದ ಪಾರಾಗಿದ್ದರೆಂದೂ ರುಜುಪಡಿಸುತ್ತವೆ. ಆಗ, 'ಸುವಾರ್ತೆಗಳ'ಲ್ಲಿ ಅವರು ಶಿಲುಬೆಯ ಮೇಲೆ ಮಡಿದಿರುವರೆಂದು ಪ್ರಸ್ತಾಪಿಸಿದ್ದು ಅವರು ಮೃತಪಟ್ಟಂತೆ ಕಂಡು ಬಂದಿದ್ದ ಕಾರಣದಿಂದ ಎಂದು ಒಪ್ಪಬೇಕಾಗಿದೆ. ಅವರು ಶಿಲುಬೆಯ ಮೇಲೆ ಮಡಿದಿಲ್ಲವೆಂದಾದರೆ ಮೂರನೇ ದಿವಸ ಅವರು ಪುನರುತ್ಥಾನಗೊಂಡರೆಂಬುದರ ತಾತ್ಪರ್ಯ, ಅವರು ಮೂರ್ಛಿತರಾಗಿ ಮಲಗಿದ ನಂತರ ಅವರಿಗೆ ಪ್ರಜ್ಞೆಯುಂಟಾಯಿತು ಎಂದು ಮಾತ್ರವಾಗಿದೆ. ಅವರನ್ನು ಶಿಲುಬೆಯಿಂದ ಇಳಿಸಿ ಕೊಂಡುಹೋಗಿ ಒಂದು ಸಮಾಧಿಯೊಳಗಿರಿಸಿ ಕೆಲವು ಔಷಧಿಗಳನ್ನು ಪ್ರಯೋಗಿಸಲಾಯಿತೆಂದೂ ಸುಗಂಧ ದ್ರವ್ಯಗಳನ್ನು ಸವರಲಾಯಿತೆಂದೂ 'ಸುವಾರ್ತೆಗಳ'ಲ್ಲಿ ಹೇಳಲಾದುದು, ಅವರು ಶಿಲುಬೆಯ ಮೇಲೆ ಮಡಿದಿರಲಿಲ್ಲ; ಕೇವಲ ಪ್ರಜ್ಞಾಹೀನರಾಗಿದ್ದರೆಂದೂ ಆದ್ದರಿಂದ ಅವರಿಗೆ ಪ್ರಜ್ಞೆ ಬರುವಂತೆ ಮಾಡಲಿಕ್ಕಾಗಿ ಈ ಔಷಧ ಪ್ರಯೋಗ ಮಾಡಲಾಗಿತ್ತೆಂದೂ ಮನಗಾಣಿಸಿಕೊಡುತ್ತದೆ. ಪ್ರಜ್ಞೆ ಬಂದ ನಂತರ ಅವರು ಗಲಿಲಾಯಕ್ಕೆ ಹೊರಟು ಹೋಗಿ ಅಲ್ಲಿ ಶಿಷ್ಯರೊಂದಿಗೆ ಉಂಡು ಅವರಿಗೆ ತನ್ನ ಶರೀರದಲ್ಲಿ ಶಿಲುಬೆಗೆ ಜಡಿಯಲ್ಪಟ್ಟಾಗ ಉಂಟಾದ ಗಾಯಗಳನ್ನು ತೋರಿಸಿ ಕೊಟ್ಟದ್ದು ಅವರು ಆತ್ಮ ರೂಪದಲ್ಲಿ ಪುನರುತ್ಥಾನಗೊಂಡದ್ದಲ್ಲ. ಬದಲು ಮೂರ್ಛಿತಾವಸ್ಥೆಯಿಂದ ಎಚ್ಚರಗೊಂಡು ತನ್ನ ಸ್ಥೂಲ ದೇಹ ಸಹಿತ ಅವರೆಡೆಗೆ ಬಂದಿದ್ದರೆಂಬುದಕ್ಕೆ ತಕ್ಕ ಸಾಕ್ಷ್ಯವಾಗಿದೆ. ಈ ಸ್ಥೂಲ ದೇಹ ಸಹಿತ ಯಾರಿಗೂ ಸ್ವರ್ಗಾರೋಹಣ ಮಾಡಲು ಸಾಧ್ಯವಿಲ್ಲವೆಂದು ಯೇಸು ಕ್ರಿಸ್ತರೇ ಹೇಳಿದುದರಿಂದ ಅವರು ಗಲಿಲಾಯದಿಂದ ಆಕಾಶಕ್ಕೆ ಏರಿಹೋದರೆಂದು ಹೇಳುವುದು ಸ್ವೀಕಾರಾರ್ಹವಲ್ಲ. ಮಾತ್ರವಲ್ಲ, ಹಾಗೆ ಅವರು ಅಲ್ಲಿಂದ ಆಕಾಶಕ್ಕೆ ಹೋಗಿ ಬಿಟ್ಟರೆಂದು ನಂಬುವುದಾದರೆ ಅವರ ಆಗಮನೋದ್ದೇಶ ವಿಫಲವಾಯಿತೆಂದಾಗುತ್ತದೆ. ಇಸ್ರಾಯೇಲ್ ಮನೆತನದ ತಪ್ಪಿಸಿಕೊಂಡ ಕುರಿಗಳ ಬಳಿಗಲ್ಲವೇ ಅವರು ಕಳುಹಿಸಲ್ಪಟ್ಟದ್ದು. ಆ ಸ್ಥಿತಿಯಲ್ಲಿ ಆ ಕುರಿಗಳನ್ನು ಹುಡುಕುವುದರ ಬದಲು ಅವರು ಆಕಾಶಕ್ಕೇರಿ ಹೋಗಬಾರದಾಗಿದೆ. ಒಟ್ಟಿನಲ್ಲಿ, ವೇದಗ್ರಂಥವನ್ನು ಶ್ರದ್ಧೆಯಿಟ್ಟು ಓದುವವರಿಗೆ ಯೇಸು ಶಿಲುಬೆಯ ಮೇಲೆ ಮಡಿಯಲಿಲ್ಲವೆಂದು ತಿಳಿದುಕೊಳ್ಳಲು ಸಾಧ್ಯವಿದೆ.

ಇಷ್ಟು ವಿವರಣೆಯಿಂದ ಕ್ರೈಸ್ತ ಬಾಂಧವರು ಆಚರಿಸಿಕೊಂಡು ಬರುತ್ತಿರುವ ಈ ಪುನರುತ್ಥಾನ ಹಬ್ಬಕ್ಕೆ ಆಧಾರವಾಗಿ ಭಾವಿಸುವ ಸಂಭವದ ವಸ್ತುಸ್ಥಿತಿಯೇನೆಂದು ಅರಿಯಬಹುದಾಗಿದೆ. ವೇದಪುಸ್ತಕದಿಂದ ತಿಳಿದು ಬರುವ ಈ ವಾಸ್ತವಾಂಶವನ್ನು ಪವಿತ್ರ ಖುರ್‌ಆನ್ ಬಹಳ ಸಂಕ್ಷಿಪ್ತವಾದ ಒಂದು ವಚನದಲ್ಲಿ ಹೀಗೆ ಹೇಳಿದೆ: "ಯೆಹೂದ್ಯರು ಅವರನ್ನು ವಧಿಸಲಿಲ್ಲ; ಶಿಲುಬೆಗೆ ಹಾಕಿ ಕೊಲ್ಲಲೂ ಇಲ್ಲ; ಆದರೆ ಅವರು ಕೊಲ್ಲಲ್ಪಟ್ಟ ರೀತಿಯಲ್ಲಿ ಅವರಿಗೆ ಕಾಣಲ್ಪಟ್ಟರು." (4:158). ಯೇಸು ಪಾಪ ವಿಮುಕ್ತಿಗಾಗಿ ಸ್ವಯಂ ಶಿಲುಬೆಯ ಮೇಲೆ ತೂಗಿ ಮಡಿದದ್ದಲ್ಲ. ಬದಲು ಯೆಹೂದ್ಯರು ಅವರನ್ನು ಹಿಡಿದು ಶಿಲುಬೆಗೆ ಜಡಿದರೆಂದೂ ಆದರೆ ಅವರು ಒಬ್ಬ ಸತ್ಯವಾದಿಯಾದುದರಿಂದ ದೇವರು ಅವರ ಪ್ರಾರ್ಥನೆಗಳನ್ನು ಕೇಳಿ ಅವರನ್ನು ಶಿಲುಬೆಯ ಮರಣದಿಂದ ರಕ್ಷಿಸಿದನೆಂದೂ ಅವರು ದುಃಖಭಾರದಿಂದಲೂ ಬಳಲಿಕೆಯ ಆಧಿಕ್ಯದಿಂದಲೂ ಶಿಲುಬೆಯ ಮೇಲೆ ಕೂಡಲೇ ಮೂರ್ಛಿತರಾದ ಕಾರಣ ಅವರು ಮಡಿದಂತೆ ಗೋಚರಿಸಲ್ಪಟ್ಟರೆಂದೂ ಬೈಬಲಿನಿಂದ ತಿಳಿದು ಬರುವ ಸಂಗತಿಗಳನ್ನು ಪವಿತ್ರ ಖುರ್‌ಆನ್ ಈ ಚಿಕ್ಕ ವಾಕ್ಯದಲ್ಲಿ ತಿಳಿಸಿ ಕೊಟ್ಟಿರುವುದು ಆ ಪವಿತ್ರ ಗ್ರಂಥದ ಮಹಾತ್ಮೆಗೂ ಮುಹಮ್ಮದ್ ಪೈಗಂಬರರ ಸತ್ಯತೆಗೂ ತಕ್ಕುದಾದ ಒಂದು ಸಾಕ್ಷ್ಯವಾಗಿದೆ. ಈ ವಾಸ್ತವಾಂಶವನ್ನು ಇಂದು ಲೋಕಕ್ಕೆ ಸ್ಪಷ್ಟಪಡಿಸಿ ತೋರಿಸಿದ ಪೈಗಂಬರರ ಆತ್ಮಶಿಷ್ಯನೂ ಪ್ರತಿಪುರುಷನೂ ಆದ ಹಝ್ರತ್ ಅಹ್ಮದ್ (ಅ) ಅನುಗ್ರಹಿಸಲ್ಪಡಲಿ.

## ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ - ೩

# ** ಮದೀನದಲ್ಲಿ ಇಸ್ಲಾಂ **

★ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ಮಕ್ಕಾ ನಿವಾಸಿಗಳು ಪುನಃ ತಮ್ಮ ಹಳೆಯ ವೈರತ್ವವನ್ನೇ ತೋರಿಸ ತೊಡಗಿದರು. ಅತ್ಯಾಚಾರ ಮತ್ತು ಅಪಹಾಸ್ಯಗಳು ಮೊದಲಿಗಿಂತಲೂ ಕಠಿಣ ರೂಪದಲ್ಲಿ ಮುಂದುವರಿದುವು. ಮುಹಮ್ಮದ್ ಪೈಗಂಬರರಿಗೆ ತನ್ನ ಸ್ವದೇಶವು ನರಕ ಸದೃಶವಾಗಿ ಮಾರ್ಪಟ್ಟಿತು. ಆದರೂ ಅವರು ತನ್ನ ಸತ್ಯಸಂದೇಶವನ್ನು ಜನರಿಗೆ ಬೋಧಿಸುತ್ತಲೇ ಇದ್ದರು. "ಅಲ್ಲಾಹು ಅಹದ್" (ದೇವರು ಒಬ್ಬನೇ) ಎಂಬ ಧ್ವನಿಯು ಮಕ್ಕಾ ನಗರದ ಅಲ್ಲಿ–ಇಲ್ಲಿ ಧ್ವನಿಸತೊಡಗಿತು. ಸ್ನೇಹ ಸೌಹಾರ್ದದಿಂದಲೂ ಸಹಾನುಭೂತಿಯಿಂದಲೂ ತನ್ನ ಸಹಜಸಿದ್ಧವಾದ ಸೌಮ್ಯ ಸ್ವಭಾವದೊಂದಿಗೆ ಪೈಗಂಬರರು ಜನರಿಗೆ ಬಹುದೈವಾರಾಧನೆಯ ವಿರುದ್ಧ ಉಪದೇಶ ನೀಡುತ್ತಲೇ ಇದ್ದರು. ಜನರು ಅದನ್ನು ಕೇಳಲು ಬಯಸದೆ ತಿರಸ್ಕರಿಸಿ ಓಡಿ ಹೋಗುತ್ತಿದ್ದರು. ಅವರಿಂದ ಮುಖ ತಿರುಗಿಸುತ್ತಿದ್ದರು. ಆದರೆ, ಪೈಗಂಬರರು ಅವರ ಹಿಂದೆ ಹಿಂದೆ ನಡೆದು ದೃಢಚಿತ್ತರಾಗಿ ಮತ್ತೂ ಮತ್ತೂ ಉಪದೇಶಿಸಿದರು. ಜನರು ಕೇಳಲಿ ಕೇಳದೆ ಇರಲಿ, ಪೈಗಂಬರರು ಅವರ ಕರ್ತವ್ಯವನ್ನು ಅತ್ಯಂತ ಶ್ರದ್ಧೆಯಿಂದಲೂ ಸಹನೆಯಿಂದಲೂ ನೆರವೇರಿಸುತ್ತಿದ್ದರು. ಕೊನೆಗೂ ಆ ಸ್ಥಿರಚಿತ್ತತೆಯ ಸತ್ಫಲಗಳು ಗೋಚರಿಸತೊಡಗಿದವು. ಸತ್ಯವು ಮೆಲ್ಲ ಮೆಲ್ಲನೆ ಪ್ರಕಾಶಿತವಾಗ ತೊಡಗಿತು. ಅಬಿಸ್ಸೀನಿಯಾ ವಲಸೆಯ ವೇಳೆ ಮಕ್ಕಾದಲ್ಲಿಯೇ ಉಳಿದಿದ್ದ ಅಲ್ಪ ಸ್ವಲ್ಪ ಮುಸ್ಲಿಂ ವಿಶ್ವಾಸಿಗಳು ಗುಪ್ತವಾಗಿ ತಮ್ಮ ಬಂಧುಮಿತ್ರರಿಗೂ ಪರಿಚಿತರಿಗೂ ಇಸ್ಲಾಂ ಧರ್ಮದ ಸಂದೇಶವನ್ನು ತಿಳಿಸುತ್ತಿದ್ದರು. ಈ ರೀತಿಯಾಗಿ ಸತ್ಯವನ್ನು ಗ್ರಹಿಸಿಕೊಂಡ ಅವರಲ್ಲಿ ಕೆಲವರು ತಮ್ಮ ವಿಶ್ವಾಸವನ್ನು ಬಹಿರಂಗವಾಗಿ ಘೋಷಿಸಿ ಪೀಡನೆಗೆ ಗುರಿಯಾಗುತ್ತಿದ್ದ ಇತರ ಮುಸ್ಲಿಮರೊಂದಿಗೆ ತಾವೂ ಭಾಗಿಗಳಾದರು. ಆದರೆ. ಅನೇಕರು ಸತ್ಯವನ್ನು ಗ್ರಹಿಸಿಕೊಂಡರೂ ನವ ವಿಶ್ವಾಸವನ್ನು ಬಹಿರಂಗಪಡಿಸಲು ಧೈರ್ಯವಿಲ್ಲದೆ ಅಂತರಂಗದಲ್ಲಿ ಮಾತ್ರ ಇಸ್ಲಾಂ ಸಂದೇಶವನ್ನು ಸ್ವೀಕರಿಸಿ ಸುಮ್ಮನಿದ್ದರು. ಅವರು ತಮ್ಮ ನವ ವಿಶ್ವಾಸವನ್ನು ಬಹಿರಂಗವಾಗಿ ಘೋಷಿಸಲು ಭೂಮಿಯ ಮೇಲೆ ದೇವಸಾಮ್ರಾಜ್ಯ ಸ್ಥಾಪನೆಯಾಗಲು ಕಾಯುತ್ತಿದ್ದರು.

ಇದೇ ವೇಳೆಯಲ್ಲಿ ಪೈಗಂಬರರಿಗೆ ಹಿಜ್ರತ್ (ದೇಶತ್ಯಾಗ) ಬಗ್ಗೆ ಅಲ್ಲಾಹನಿಂದ ಮೇಲಿಂದ ಮೇಲೆ ಸೂಚನೆಗಳು ಲಭಿಸುತ್ತಿದ್ದುವು. ಮಕ್ಕಾ ನಗರವನ್ನು ಬಿಟ್ಟು ತಾನು ಹೋಗಿ ನೆಲೆಸಬೇಕಾದ ಸ್ಥಳದ ಒಂದು ರೂಪರೇಷೆ ಕೂಡ ಅವರಿಗೆ ಲಭಿಸಿದ ದಿವ್ಯವಾಣಿಗಳಲ್ಲಿ ಸೂಚಿತವಾಗಿತ್ತು. ಸಿಹಿನೀರಿನ ಬಾವಿಗಳೂ ಖರ್ಜೂರದ ತೋಟಗಳೂ ಧಾರಾಳವಾಗಿ ಕಾಣಲ್ಪಡುವ ಒಂದು ನಗರ. ತಾನು ಹೋಗಿ ನೆಲೆಸಬೇಕಾದ ಈ ಸ್ಥಳ ಯಮಾಮ ಆಗಿರಬಹುದೆಂದು ಪೈಗಂಬರರು ಊಹಿಸಿದರು*. ಆದರೆ. ಶೀಘ್ರದಲ್ಲೇ ಅವರ ಹೃದಯದಿಂದ ಈ ಅನುಮಾನವು ನೀಗಿಸಲ್ಪಟ್ಟಿತು. ದೇವ ನಿರ್ದೇಶದ ಪ್ರಕಾರ ಹೋಗಬೇಕಾಗುವ ಸ್ಥಳವು ಯಾವುದೇ ಆಗಿದ್ದರೂ ಅದು ಇಸ್ಲಾಂ ಧರ್ಮದ ಜಯಭೇರಿ ಮೊಳಗಿಸುವ ಕೇಂದ್ರ ಸ್ಥಾನವಾಗಿರುವುದೆಂಬ ಬಗ್ಗೆ ಅವರು ದೃಢ ನಂಬಿಕೆಯಿಂದಿದ್ದರು.

ಈ ಮಧ್ಯೆ ಹಜ್ ವೇಳೆ ಸಮೀಪಿಸಿತು. ಅರೇಬಿಯದ ನಾನಾ ಕಡೆಗಳಿಂದಲೂ ಹಜ್ ತೀರ್ಥ ಯಾತ್ರೆ

* ಬುಖಾರಿ

ಗಾಗಿ ಜನರು ಮಕ್ಕಾ ನಗರಕ್ಕೆ ಬರತೊಡಗಿದರು. ಮುಹಮ್ಮದ್ ಪೈಗಂಬರರು ವಾಡಿಕೆಯಂತೆ ಎಲ್ಲಿ ಜನರ ಗುಂಪು ಕಾಣುವುದೋ ಅಲ್ಲಿಗೆ ಧಾವಿಸಿ ಪರಮಾತ್ಮನ ಏಕತ್ವದ ಕುರಿತು ಬೋಧಿಸುತ್ತಿದ್ದರು. ದೇವ ಸಾಮ್ರಾಜ್ಯದ ಬಗ್ಗೆ ಅವರಿಗೆ ಶುಭವಾರ್ತೆ ನೀಡುತ್ತಿದ್ದರು. ಅಕ್ರಮ, ಅನೀತಿ, ಕಲಹ, ಗೊಂದಲ ಮೊದಲಾದ ಎಲ್ಲಾ ದುಷ್ಕೃತ್ಯಗಳನ್ನೂ ತ್ಯಜಿಸಲು ಅವರಿಗೆ ಉಪದೇಶಿಸುತ್ತಿದ್ದರು. ಪೈಗಂಬರರ ಮಾತನ್ನು ಕೇಳಿ ಕೆಲವರು ಅವರಲ್ಲಿ ಪ್ರಭಾವಿತರಾಗುತ್ತಿದ್ದರು. ಇನ್ನು ಕೆಲವರು ಕೇಳಲು ಅಭಿರುಚಿ ತೋರಿಸಿದರೂ ಮಕ್ಕಾ ಜನರು ಅವರನ್ನು ಏನೆಲ್ಲಾ ಹೇಳಿ ಚದರಿಸುತ್ತಿದ್ದರು. ಮತ್ತೆ ಕೆಲವರು ಆಗಲೇ ಮಕ್ಕಾ ನಿವಾಸಿಗಳಿಂದ ಕೇಳಿ ತಿಳಿದು ಪೈಗಂಬರರ ಮಾತುಗಳು ಸುಳ್ಳೆಂದು ಮೊದಲೇ ಮನಸ್ಸಿನಲ್ಲಿ ನಿರ್ಧರಿಸಿಟ್ಟಿರುವುದರಿಂದ ಅವರ ಮಾತುಗಳನ್ನು ಮತ್ತಷ್ಟು ಪರಿಹಾಸ್ಯ ಮಾಡಿ ಅವರಿಂದ ದೂರವಾಗುತ್ತಿದ್ದರು. ಹೀಗಿರುತ್ತಾ ಒಮ್ಮೆ ಅವರು ಮಿನಾ ಪರ್ವತದ ಸಮೀಪ ಆರೇಳು ಜನರನ್ನೊಳಗೊಂಡ ಒಂದು ಗುಂಪನ್ನು ಕಂಡರು. ಅವರು ಮದೀನದಿಂದ ಬಂದ ತೀರ್ಥಯಾತ್ರಿಗಳಾಗಿದ್ದರು. ಪೈಗಂಬರರು ಅವರನ್ನು ಸಮೀಪಿಸಿ ಪರಿಚಯ ಕೇಳಿದಾಗ ಅವರು ತಮ್ಮ ಕುರಿತು ಮದೀನದ ಖಸ್‌ರಜ್ ಗೋತ್ರದವರೆಂದೂ ಯೆಹೂದ್ಯರೊಡನೆ ಮೈತ್ರಿ ಒಪ್ಪಂದ ಮಾಡಿಕೊಂಡವರೆಂದೂ ತಿಳಿಸಿದರು. ಪೈಗಂಬರರು ಅವರೊಡನೆ: "ಸ್ವಲ್ಪ ಹೊತ್ತು ಇಲ್ಲಿ ಕುಳಿತುಕೊಂಡು ನಾನು ಹೇಳುವ ಕೆಲವು ಮಾತುಗಳನ್ನು ಕೇಳುವಷ್ಟು ದಯೆ ತೋರುವಿರಾ?" ಎಂಬುದಾಗಿ ಕೇಳಿದರು. ಪೈಗಂಬರರ ಬಗ್ಗೆ ಮೊದಲೇ ಅವರಿಗೆ ತಿಳಿದಿತ್ತು. ಅವರ ವಾದ ಮತ್ತು ಬೋಧನೆಗಳ ಕುರಿತು ಅವರಲ್ಲಿ ಒಳ್ಳೆಯ ಭಾವನೆಯಿತ್ತು. ಆದುದರಿಂದಲೇ ಅವರು ಪೈಗಂಬರರ ಅಪೇಕ್ಷೆಯನ್ನು ಮನ್ನಿಸಿ ಅವರ ಮಾತುಗಳನ್ನು ಕೇಳಲು ಒಪ್ಪಿದರು. ಪೈಗಂಬರರು ತನ್ನ ದೌತ್ಯದ ಸಾರಾಂಶವನ್ನು ಅವರಿಗೆ ತಿಳಿಸಿದ ಬಳಿಕ ಹೇಳಿದರು: "ದೇವ ಸಾಮ್ರಾಜ್ಯ ಸ್ಥಾಪಿಸಲ್ಪಡುವ ಕಾಲ ಸನ್ನಿಹಿತವಾಗಿದೆ. ವಿಗ್ರಹಾರಾಧನೆಯು ಇಲ್ಲದಾಗುವುದು. ಏಕದೇವ ವಿಶ್ವಾಸವು ಭೂಮಿಯಲ್ಲಿ ಶಾಶ್ವತವಾಗಿ ನೆಲೆಸಲಿದೆ. ಸಚ್ಚಾರಿತ್ರ್ಯ ಮತ್ತು ದೇವಭಕ್ತಿಯು ಪುನಃ ಒಮ್ಮೆ ಭೂಮಿಯಲ್ಲಿ ಪ್ರಚಲಿತವಾಗಲಿದೆ. ಅನುಗ್ರಹೀತವಾದ ಈ ಸಂದೇಶವನ್ನು ಸ್ವೀಕರಿಸಲು ಮದೀನದ ಜನರು ತಯಾರಿರುವರೇ ಎಂದು ನಾನು ತಿಳಿಯ ಬಯಸುತ್ತೇನೆ."

ಆ ಜನರು ಮುಹಮ್ಮದ್ ಪೈಗಂಬರರ ವ್ಯಕ್ತಿತ್ವದಲ್ಲೂ ಅವರ ಮಾತಿನಲ್ಲೂ ಬಹಳಷ್ಟು ಪ್ರಭಾವಿತರಾದರು. ಅವರು ಆ ಸಂದೇಶವನ್ನು ಸ್ವೀಕರಿಸಿದರು. "ತಮ್ಮ ಬೋಧನೆಗಳನ್ನು ಸ್ವೀಕರಿಸಲು ನಾವು ತಯಾರಿದ್ದೇವೆ. ಆದರೆ, ಮುಸ್ಲಿಂ ಶರಣಾರ್ಥಿಗಳನ್ನು ಮದೀನದ ಜನರು ಸ್ವಾಗತಿಸಲು ತಯಾರಿರುವರೇ ಎಂಬುದನ್ನು ಊರಿನ ಇತರ ಜನರೊಡನೆ ಸಮಾಲೋಚನೆ ನಡೆಸಿದ ಬಳಿಕ, ಮುಂದಿನ ವರ್ಷ ಹಜ್ ಯಾತ್ರೆಗೆ ಬರುವ ವೇಳೆ ತಮಗೆ ತಿಳಿಸುವೆವು" ಎಂದು ಹೇಳಿದರು.*

ಮದೀನದಿಂದ ಬಂದಿದ್ದ ಈ ಜನರು ಹಜ್ ಕಳೆದ ಬಳಿಕ ಸ್ವದೇಶಕ್ಕೆ ಹಿಂದಿರುಗಿ ತಮ್ಮ ಬಂಧು ಮಿತ್ರರೊಡನೆ ಇಸ್ಲಾಂ ಧರ್ಮದ ಸಂದೇಶದ ಕುರಿತು ಚರ್ಚಿಸಲು ತೊಡಗಿದರು. ಆಗ ಮದೀನದಲ್ಲಿ "ಔಸ್" ಮತ್ತು "ಖಸ್‌ರಜ್" ಎಂಬ ಎರಡು ಅರಬ್ಬೀ ಗೋತ್ರದವರೂ "ಬನೂ ಖುರೈಸ", "ಬನೂ ನಜೀರ್" ಮತ್ತು "ಬನೂ ಖೈನುಖಾ" ಎಂಬೀ ಮೂರು ಯೆಹೂದ್ಯ ಗೋತ್ರದವರೂ ನೆಲೆಸಿದ್ದರು. ಔಸ್ ಮತ್ತು ಖಸ್‌ರಜ್ ಗೋತ್ರಗಳು ಪರಸ್ಪರ ಯುದ್ಧದಲ್ಲಿ ತೊಡಗಿದ್ದರು. ಬನೂ ಖುರೈಸ ಮತ್ತು ಬನೂ ನಜೀರ್ ಗೋತ್ರ ವರ್ಗದವರು ಔಸ್ ಗೋತ್ರದೊಡನೆಯೂ ಬನೂ ಖೈನುಖಾ ಪಂಗಡದವರು ಖಸ್‌ರಜ್ ಗೋತ್ರದವರೊಡನೆಯೂ ಕೂಡಿಕೊಂಡು ಯುದ್ಧ ನಿರತರಾಗಿದ್ದರು. ದೀರ್ಘ ಕಾಲ ಸಮರದ ಪರಿಣಾಮವಾಗಿ ಇತ್ತಂಡದವರೂ ಬಳಲಿ ಬೇಸತ್ತಿದ್ದರು. ಇನ್ನು, ಒಂದು ಒಪ್ಪಂದ ಮಾಡಿಕೊಂಡು ಯುದ್ಧವನ್ನು ನಿಲ್ಲಿಸಲು ಅವರು ತೀರ್ಮಾನಿಸಿದರು. ಕೊನೆಗೆ ಪರಸ್ಪರ ಮಾತುಕತೆ ನಡೆಸಿದ ಬಳಿಕ ಖಸ್‌ರಜ್ ಗೋತ್ರದ ಮುಖಂಡ ಅಬ್ದುಲ್ಲಾ ಬಿನ್ ಸಲೂಲ್ ಎಂಬವರನ್ನು ಮದೀನದ ರಾಜನಾಗಿ ಎಲ್ಲರೂ ಒಪ್ಪಿಕೊಂಡು ಯುದ್ಧವನ್ನು ನಿಲ್ಲಿಸಲಾಯಿತು.

ಔಸ್ ಖಸ್‌ರಜ್ ಗೋತ್ರದವರು ಇತರ ಇಸ್ರಾಯೀಲ್ಯ ಗೋತ್ರದವರೊಡನೆ ಕಲೆತು ಜೀವಿಸು

* ಇಬ್ನು ಹಿಶಾಂ ಸಂಪುಟ 1, ಪುಟ 150–156

ತ್ತಿದ್ದುದರಿಂದ ಬೈಬಲಿನ ಕೆಲವು ಭವಿಷ್ಯ ನುಡಿಗಳ ಕುರಿತು ಅವರು ಮಾತನಾಡುವುದನ್ನು ಇವರು ಸಹ ಕೇಳುತ್ತಿದ್ದರು. ಯೆಹೂದ್ಯರು ತಮ್ಮ ಕಷ್ಟದ ವೇಳೆಯಲ್ಲಿ ಮೂಸಾ ಪ್ರವಾದಿಯವರಿಗೆ ಸದೃಶರಾದ ಒಬ್ಬ ಅವತಾರ ಪುರುಷನ ಬರುವಿಕೆಯ ಕುರಿತು ಪ್ರಸ್ತಾಪಿಸುತ್ತಿದ್ದರು. ಅವರ ಮೂಲಕ ಯೆಹೂದ್ಯರಿಗೆ ತಮ್ಮ ಕಳೆದು ಹೋದ ವೈಭವವೂ ಪ್ರತಾಪವೂ ಮರಳಿ ಲಭಿಸಲಿವೆಂದೂ ಆ ಮಹಾನ್ ಪ್ರವಾದಿಯ ಆಗಮನ ಕಾಲವು ಸನ್ನಿಹಿತವಾಗಿರುವುದೆಂದೂ ಅವರು ಬೈಬಲ್‌ನ ಭವಿಷ್ಯನುಡಿಯ ಆಧಾರದಲ್ಲಿ ಹೇಳುತ್ತಿದ್ದರು. ಹಜ್ ತೀರ್ಥಾಟನೆಗೆ ಹೋಗಿದ್ದ ಯಾತ್ರಿಕರಿಂದ ಮುಹಮ್ಮದ್ ಪೈಗಂಬರರ ಸಂದೇಶವನ್ನು ಕೇಳಿ ತಿಳಿದ ಅರಬ್ ಗೋತ್ರದವರು ತಾವು ಯೆಹೂದ್ಯರ ಬಾಯಿಯಿಂದ ಕೇಳುತ್ತಿದ್ದ 'ಆ ಪ್ರವಾದಿ' ಇವರೇ ಅಲ್ಲವೇ ಎಂದು ಯೋಚಿಸ ತೊಡಗಿದರು. ಅವರ ಹೃದಯಗಳು ಪೈಗಂಬರರ ಸತ್ಯತೆಯನ್ನು ಅಂಗೀಕರಿಸುತ್ತಿದ್ದವು. ಅನೇಕ ಯುವಕರು ಪೈಗಂಬರರ ಸಂದೇಶದಲ್ಲಿ ವಿಶ್ವಾಸ ಹೊಂದಿದರು. ಒಬ್ಬ ಪ್ರವಾದಿಯ ಅವತಾರ ಕಾಲವು ಸನ್ನಿಹಿತವಾಗಿದೆ ಎಂಬ ಬೈಬಲ್ ಪ್ರವಾದನವನ್ನು ಅವರು ಯೆಹೂದ್ಯರಿಂದ ಆಗಾಗ ಕೇಳುತ್ತಿದ್ದುದು ಅವರ ಮನಃಪರಿವರ್ತನೆಗೆ ಮುಖ್ಯ ಕಾರಣವಾಗಿತ್ತು.

ಮುಂದಿನ ವರ್ಷವೂ ಹಜ್ ವೇಳೆಯಲ್ಲಿ ಮದೀನದಿಂದ ಮಕ್ಕಾದ ಕಡೆ ಜನರ ಗುಂಪು ತೆರಳಿತು. ಇವರಲ್ಲಿ ಹನ್ನೆರಡು ಜನರು ಪೈಗಂಬರರ ಧರ್ಮವನ್ನು ಸ್ವೀಕರಿಸಲು ತಯಾರಾಗಿಯೇ ಮಕ್ಕಾಗೆ ಬಂದಿದ್ದರು. ಹತ್ತು ಜನ ಖಸ್‌ರಜ್ ಗೋತ್ರದವರು, ಉಳಿದ ಇಬ್ಬರು ಔಸ್ ಗೋತ್ರದವರು. ಮಿನಾ ಎಂಬಲ್ಲಿ ಅವರು ಪೈಗಂಬರರನ್ನು ಸಂಧಿಸಿದರು. ಪೈಗಂಬರರ ಕೈಹಿಡಿದುಕೊಂಡು ಅವರು ಈ ರೀತಿ ಪ್ರತಿಜ್ಞೆ ಮಾಡಿದರು: "ಏಕದೇವನ ಹೊರತು ಮತ್ತಾರನ್ನೂ ಆರಾಧಿಸುವುದಿಲ್ಲ. ಎಲ್ಲಾ ವಿಧದ ದುರಾಚಾರಗಳಿಂದಲೂ ದೂರವಿರುವೆವು; ಕಳ್ಳತನ ಮಾಡುವುದಿಲ್ಲ; ಪರಸ್ಪರ ದೋಷಾರೋಪಣೆ ಮಾಡುವುದಿಲ್ಲ; ತಮ್ಮ ಹೆಮ್ಮಕ್ಕಳನ್ನು ವಧಿಸುವುದಿಲ್ಲ. ದೇವರ ಪ್ರವಾದಿಯಿಂದ ನಿರ್ದೇಶಿಸಲ್ಪಡುವ ಎಲ್ಲಾ ಸತ್ಕರ್ಮಗಳನ್ನೂ ಸ್ವೀಕರಿಸಿ ಅದರಂತೆ ನಡೆಯುವೆವು." ಹಾಗೆ ಅವರು ಪ್ರತಿಜ್ಞೆ ಮಾಡಿ ತಮ್ಮ ಸ್ವದೇಶಕ್ಕೆ ಮರಳಿದರು. ಮದೀನ ತಲಪಿದ ನಂತರ ಈ ನವ ವಿಶ್ವಾಸಿಗಳು ಅಲ್ಲಿಯ ಜನರೆಡೆಯಲ್ಲಿ ಇಸ್ಲಾಂ ಧರ್ಮದ ಸಂದೇಶವನ್ನು ಮತ್ತೂ ಸ್ಫೂರ್ತಿಯುತವಾಗಿ ಪ್ರಚಾರ ಮಾಡತೊಡಗಿದರು. ಊರಿನಲ್ಲೆಲ್ಲಾ ಇದು ಒಂದು ಚರ್ಚಾ ವಿಷಯವಾಯಿತು. ಜನ ಹೃದಯಗಳು ಈ ಸತ್ಯ ಸಂದೇಶದ ಕಡೆಗೆ ಆಕರ್ಷಿತವಾದವು. ಮನೆಗಳಿಂದಲೂ ಪೂಜಾ ಸ್ಥಳಗಳಿಂದಲೂ ವಿಗ್ರಹಗಳು ಮಾಯವಾದವು. ಮೂರ್ತಿಗಳ ಮುಂದೆ ತಲೆಬಾಗಿ ನಮಿಸುತ್ತಿದ್ದವರು ಈಗ ತಲೆಯೆತ್ತಿ ನಡೆಯತೊಡಗಿದರು. ಸರ್ವಜಗತ್ತಿನ ಸೃಷ್ಟಿಕರ್ತನಾದ ಏಕ ಸತ್ಯ ಪರಮಾತ್ಮನ ಹೊರತು ಬೇರಾವ ಶಕ್ತಿಯ ಮುಂದೆಯೂ ಶಿರಬಾಗಲು ಅವರು ಈಗ ತಯಾರಿರಲಿಲ್ಲ.

ಯೆಹೂದ್ಯರು ಈ ಮಾರ್ಪಾಟನ್ನು ಕಂಡು ಆಶ್ಚರ್ಯಗೊಂಡರು. ಶತಮಾನಗಳಿಂದಲೂ ಈ ಅರಬ್ಬೀ ಗೋತ್ರದವರೊಂದಿಗೆ ಕಲೆತು ಬೆರೆತು ಜೀವಿಸಿ, ನೂರಾರು ವರ್ಷಗಳಿಂದ ಪ್ರಬೋಧಿಸಿಯೂ ಕೂಡ ನಮಗೆ ಇವರಲ್ಲಿ ಏನೊಂದು ಬದಲಾವಣೆಯನ್ನೂ ಉಂಟುಮಾಡಲು ಸಾಧ್ಯವಾಗಲಿಲ್ಲ. ಆದರೆ, ಮಕ್ಕಾದ ಈ ವ್ಯಕ್ತಿಯ ಬೋಧನೆಗಳು ಕೆಲವೇ ದಿನಗಳೊಳಗೆ ಇಂತಹ ಅದ್ಭುತ ಬದಲಾವಣೆಯನ್ನು ಮಾಡಿ ಬಿಟ್ಟಿದೆಯಲ್ಲಾ ಎಂದು ಅವರು ಚಕಿತರಾದರು.

ಏಕದೇವ ಸಿದ್ಧಾಂತದ ಕಡೆಗೆ ಮದೀನದ ಜನರು ಬಹಳಷ್ಟು ಆಕರ್ಷಿತರಾದರು. ಅವರು ಇಸ್ಲಾಂ ಧರ್ಮವನ್ನು ಅಷ್ಟರಲ್ಲೇ ಸ್ವೀಕರಿಸಿದ್ದ ನವ ವಿಶ್ವಾಸಿಗಳ ಬಳಿಗೆ ಹೋಗಿ ಈ ದಿವ್ಯ ಸಂದೇಶದ ಕುರಿತು ವಿವರವಾಗಿ ತಿಳಿಸುವಂತೆ ಅಪೇಕ್ಷಿಸುತ್ತಿದ್ದರು. ಆದರೆ, ಹೆಚ್ಚುತ್ತಲೇ ಇದ್ದ ಈ ಅನ್ವೇಷಣೆಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡಲು ಬೇಕಾದಷ್ಟು ತಿಳುವಳಿಕೆಯೂ ಅವಕಾಶವೂ ಬೆರಳೆಣಿಕೆಯ ನವವಿಶ್ವಾಸಿಗಳಿಗಿರಲಿಲ್ಲ. ಆದುದರಿಂದ ಅವರು ಪೈಗಂಬರರ ಬಳಿಗೆ ಓರ್ವ ದೂತನನ್ನು ಕಳುಹಿಸಿ, ಇಸ್ಲಾಂ ಧರ್ಮಪ್ರಚಾರಕ್ಕಾಗಿ ಯಾರನ್ನಾದರೂ ಮದೀನಕ್ಕೆ ಕಳುಹಿಸಿಕೊಡುವಂತೆ ಅಪೇಕ್ಷಿಸಿದರು. ಹಝ್ರತ್ ಮುಹಮ್ಮದ್ ಪೈಗಂಬರರು ಅಬಿಸೀನಿಯಾ ವಲಸೆಯಿಂದ ಹಿಂತಿರುಗಿ ಬಂದಿದ್ದ ತನ್ನ ಅನುಯಾಯಿಗಳಲ್ಲೊಬ್ಬರಾದ ಮುಸ್‌ಅಬ್ ಎಂಬವರನ್ನು ಇಸ್ಲಾಂ ಧರ್ಮ ಪ್ರಬೋಧನೆಗಾಗಿ ಮದೀನಕ್ಕೆ

ಕಳುಹಿಸಿಕೊಡಲು ಒಪ್ಪಿದರು. ಮಕ್ಕಾದಿಂದ ಹೊರ ನಾಡಿಗೆ ಧರ್ಮ ಪ್ರಚಾರಕ್ಕಾಗಿ ಕಳುಹಿಸಲಾದ ಮೊತ್ತ ಮೊದಲ ಮುಬಲ್ಲಿಗ್ (ಮಿಶನರಿ) ಮುಸ್ಅಬ್ ಆಗಿದ್ದರು.

### ಒಂದು ಆಧ್ಯಾತ್ಮಿಕ ಪಯಣ (ಇಸ್ರಾಅ್):

ಇದೇ ವೇಳೆಯಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರಿಗೆ ಅಲ್ಲಾಹನಿಂದ ಮಹತ್ವಪೂರ್ಣವಾದೊಂದು ಶುಭಸೂಚನೆಯು ಲಭಿಸಿತು. ತಾನು ಜೆರೂಸಲೇಮಿನಲ್ಲಿರುವುದಾಗಿಯೂ ಪ್ರವಾದಿಗಳೆಲ್ಲ ತನ್ನನ್ನು ಅನುಕರಿಸಿ ನಮಾಜು ಮಾಡುತ್ತಿರುವುದಾಗಿಯೂ ಒಂದು ದಿವ್ಯದರ್ಶನದಲ್ಲಿ ಪೈಗಂಬರರು ಕಂಡರು.* ಜೆರುಸಲೇಂ ಮದೀನದ ಸೂಚನೆಯಾಗಿತ್ತು. ಏಕದೇವ ವಿಶ್ವಾಸದ ದಿವ್ಯ ಕಹಳೆಯನ್ನೂದುವ ಒಂದು ಕೇಂದ್ರ ಸ್ಥಾನವಾಗಿ ಮದೀನವು ಮಾರ್ಪಡಲಿದೆಯೆಂಬ ಭವಿಷ್ಯವಾಣಿಯು ಅದರಲ್ಲಡಕವಾಗಿತ್ತು. ಇತರ ಪ್ರವಾದಿಗಳು ಅವರನ್ನು ಅನುಕರಿಸಿ ಪ್ರಾರ್ಥನೆ ನಡೆಸಿದುದರ ಅರ್ಥವು ಮುಹಮ್ಮದ್ ಪೈಗಂಬರರ ಸಂದೇಶವನ್ನು ಲೋಕದ ಎಲ್ಲಾ ಜಾತಿ ಮತಸ್ಥರೂ ಕುಲಗೋತ್ರದವರೂ ಎಲ್ಲಾ ದೇಶದವರೂ ಸ್ವೀಕರಿಸಲಿದ್ದಾರೆಂದೂ ಹಾಗೆ ಇಸ್ಲಾಂ ಧರ್ಮವು ಸಾರ್ವಲೌಕಿಕವಾದ ಒಂದು ವಿಶ್ವಧರ್ಮವಾಗಲಿದೆಯೆಂದೂ ಆಗಿತ್ತು.

ಮಕ್ಕಾದಲ್ಲಾಗ ಮುಸಲ್ಮಾನರು ಅತ್ಯಂತ ಕಠಿಣ ಸ್ಥಿತಿಯಲ್ಲಿದ್ದರು. ಅವರು ಸಹಿಸಬೇಕಾಗಿದ್ದ ಕಷ್ಟ ಕಾರ್ಪಣ್ಯಗಳು ಮೊದಲೆಂದಿಗಿಂತಲೂ ಹೆಚ್ಚಾಗಿದ್ದುವು. ಪೈಗಂಬರರ ಈ ಆತ್ಮಿಕ ದರ್ಶನವನ್ನು ಕೇಳಿ ಮಕ್ಕಾದ ಜನರು ನಗೆಯಾಡಿದರು. ಅವರ ಬಳಿ ಇವೆಲ್ಲಾ ಮಿಥ್ಯಾ ಮೋಹಗಳು ಮಾತ್ರ. ಅವರು ಈ ದರ್ಶನದ ಸಂಗತಿಯನ್ನು ಹೇಳಿ ಹೇಳಿ ತಮಾಷೆ ಮಾಡಲು ತೊಡಗಿದರು. ಹೊಸತೊಂದು ಜೆರೂಸಲೇಮಿನ ನಿರ್ಮಾಣಕ್ಕಾಗಿ ಬುನಾದಿ ಹಾಕಲಾಗಿದೆಯೆಂಬುದನ್ನು ಅವರು ಹೇಗೆ ತಾನೆ ತಿಳಿಯಬೇಕು? ಪೂರ್ವ ಪಶ್ಚಿಮ ದೇಶಗಳ ಜನರು ಪರಮಾತ್ಮನ ಈ ಅಂತಿಮ ಸಂದೇಶವನ್ನು ಆಲಿಸಲು ಅತ್ಯುತ್ಸಾಹದಿಂದ ಅಣಿಯಾಗಿದ್ದಾರೆಂಬುದನ್ನು ಆಗ ಯಾರು ತಾನೆ ತಿಳಿದಿದ್ದರು? ❋

* ಇಬ್ನು ಹಿಶಾಂ ಭಾಗ 1. ಪುಟ 138.
ದುರ್‌ಖಾನಿ ಭಾಗ 1. ಪುಟ 306.


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

**ಮೈತ್ರಿ ಸಂದೇಶ**

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದುಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ

ಪುಟಗಳು: **48** ಬೆಲೆ: **ಒಂದು ರೂಪಾಯಿ** ಅಂಚೆ ವೆಚ್ಚ: **ಉಚಿತ**

ಬರೆಯಿರಿ: Book Secretary, Ahmadiyya Muslim Mission,
10-23-1008, Ansari Road, Bunder, Mangalore-675 001.

# ವಿವಾಹ ವಿಚ್ಛೇದಿತೆ ಮುಸ್ಲಿಂ ಮಹಿಳೆಯ ಜೀವನಾಂಶ

## ಅಹ್ಮದಿಯಾ ಜಮಾಅತಿನ ನಿಲುವು

ಮುಸ್ಲಿಮ್ ಸಮಾಜದ ಇಂದಿನ ಸಾಮಾಜಿಕ ಮತ್ತು ಕೌಟುಂಬಿಕ ಪರಿಸ್ಥಿತಿಯ ಕುರಿತು ಅಧ್ಯಯನ ನಡೆಸುವಾಗ ಅವುಗಳಲ್ಲಿ ಹಲವಾರು ನ್ಯೂನತೆಗಳು ಕಂಡು ಬರುತ್ತಿದ್ದು ಅವುಗಳ ನಿವಾರಣೆ ಮುಸ್ಲಿಂ ಸಮಾಜದ ಕರ್ತವ್ಯವಾಗಿರುತ್ತದೆ. ವಿವಾಹ ವಿಚ್ಛೇದನ ಅಥವಾ ತಲಾಖ್ ನೀಡುವ ಅಧಿಕಾರವನ್ನು ಇಸ್ಲಾಂ ಪುರುಷನಿಗೆ ನೀಡಿರುವುದಾದರೂ ಈ ಸಂಬಂಧವಾಗಿ ಇಸ್ಲಾಮಿ ಶರೀಅತ್ (ಧಾರ್ಮಿಕ ನಿಯಮ ಶಾಸ್ತ್ರ) ವಿಧಿಸಿರುವ ಶರ್ತಗಳನ್ನೂ ಉಪದೇಶಗಳನ್ನು ಕಡೆಗಣಿಸಲಾಗುತ್ತಿದೆ. ತಲಾಖ್ ನೀಡುವ ಹಕ್ಕಿನ ದುರುಪಯೋಗದಿಂದ ಸಂಭವಿಸುವ ಅನ್ಯಾಯಗಳ ನಿವಾರಣೆಗಾಗಿ ಯಾವುದಾದರೂ ಪ್ರಯತ್ನ ಮಾಡಲೇ ಬೇಕಾದುದು ಮುಸ್ಲಿಂ ಸಮಾಜದ ಕರ್ತವ್ಯವಾಗಿದೆ. ಚಿಕ್ಕ ಪುಟ್ಟ ಕಾರಣಗಳಿಗಾಗಿ ಇಂದು ತಲಾಖ್ ನೀಡಲಾಗುತ್ತಿದೆ. ಇದರಿಂದಾಗಿ ಕೌಟುಂಬಿಕ ಶಾಂತಿ ನಾಶವಾಗುತ್ತಿದೆಯಲ್ಲದೆ ಮುಸ್ಲಿಂ ಸಮಾಜವೇ ಇತರರ ದೃಷ್ಟಿಯಲ್ಲಿ ನಿಂದಾರ್ಹವಾಗಿ ಪರಿಣಮಿಸುತ್ತದೆ. ಇಂತಹ ಅನ್ಯಾಯಗಳ ಕುರಿತು ಮುಸ್ಲಿಮ್ ಸಮಾಜ ತಪ್ಪಿತಸ್ಥರನ್ನು ಪ್ರಶ್ನಿಸಬೇಕಾಗಿದೆ. ಅಲ್ಲಾಹನು ಮುಸ್ಲಿಮರಿಗೆ ತಲಾಖ್ ನೀಡುವ ಹಕ್ಕನ್ನು ನೀಡಿರುವನಾದರೂ ಇದು ಬಹಳ ಅತೃಪ್ತಿಯಿಂದ ನೀಡಲಾದ ಒಂದು ಹಕ್ಕೆಂಬುದನ್ನು ಪೈಗಂಬರರು ವ್ಯಕ್ತಗೊಳಿಸಿರುವರು. ಇಂತಹ ಹಕ್ಕನ್ನು ಒಂದು ಸುಲಭದ ಆಟದ ರೀತಿಯಲ್ಲಿ ಉಪಯೋಗಿಸುವ ಪರಿಸ್ಥಿತಿ ಹೇಗುಂಟಾಯಿತು? ಇದರ ದುರುಪಯೋಗ ಕುಟುಂಬದ ಮಾತ್ರವಲ್ಲ ಸಮಾಜದ ನಾಶಕ್ಕೂ ಹೇತುವಾಗಬಲ್ಲುದು.

ಒಬ್ಬ ಸ್ತ್ರೀಗೆ ತಲಾಖ್ ನೀಡುವಾಗ ಪೂರ್ಣವಾದ ಅನುಕಂಪದಿಂದಲೂ ಸೌಜನ್ಯತೆಯಿಂದಲೂ ಆ ಸ್ತ್ರೀಯ ಎಲ್ಲಾ ಹಕ್ಕುಗಳನ್ನು ಧನ ಸಹಾಯ ಸಹಿತವಾಗಿ ನೀಡಬೇಕೆಂದು ಇಸ್ಲಾಮಿ ಶರೀಅತ್ ಸ್ಪಷ್ಟ ನಿರ್ದೇಶಗಳನ್ನು ನೀಡಿರುತ್ತದೆ. ಆದರೆ ಇಂದು ಈ ನಿರ್ದೇಶನಗಳನ್ನು ಪಾಲಿಸದೆ ಅನ್ಯಾಯಕರವಾಗಿ ವರ್ತಿಸುವವರ ವಿರುದ್ಧ ಮುಸ್ಲಿಂ ಸಮಾಜ ಕಾರ್ಯ. ಪ್ರವೃತ್ತವಾಗ ಬೇಕಾಗಿದೆ.

ಈ ರೀತಿಯ ಅನ್ಯಾಯಕರವಾದ ತಲಾಖ್ ನೀಡಿಕೆ ಮುಸ್ಲಿಂ ಸಮಾಜದ ಸಂಖ್ಯಾ ಬಲವನ್ನು ವೀಕ್ಷಿಸುವಾಗ ಬಹಳ ಕಮ್ಮಿ ಸಂಖ್ಯೆಯಲ್ಲಿದೆಯೆಂದೇ ಹೇಳಬಹುದು. ಮುಸ್ಲಿಂ ಸಮಾಜದ ಅಧಿಕ ಸಂಖ್ಯಾತ ಕುಟುಂಬಗಳು ಸುಖ ಸಂತೋಷದಿಂದ ಜೀವಿಸುತ್ತಿವೆ. ಆದರೆ ಅನ್ಯಾಯದ ವಿರುದ್ಧ ಧ್ವನಿಯೆತ್ತುವುದು ನ್ಯಾಯಪ್ರಿಯ ಸಮಾಜದ ಕರ್ತವ್ಯವಾಗಿದೆ. ಅನ್ಯಾಯದ ಒಂದೇ ಒಂದು ಸಂಭವ ನಡೆದರೂ ಅದನ್ನು ಸರಿಪಡಿಸುವುದು ಅತ್ಯಾವಶ್ಯಕವಾಗಿದೆ.

ವಿವಾಹ ವಿಚ್ಛೇದಿತೆಯಾದ ಮುಸ್ಲಿಂ ಮಹಿಳೆಯ ಜೀವನಾಂಶದ ಪ್ರಶ್ನೆಯು ಭಾರತದ ಸುಪ್ರೀಮ್ ಕೋರ್ಟಿನ ಒಂದು ತೀರ್ಮಾನದಿಂದಾಗಿ ಮುಸ್ಲಿಮರಲ್ಲಿ ಅತೃಪ್ತಿಗೆ ಕಾರಣವಾಗಿದೆ. ವಿವಾಹವಿಚ್ಛೇದಿತೆಯಾದ ಮುಸ್ಲಿಂ ಮಹಿಳೆಗೆ ಅವಳ ಪುನರ್ವಿವಾಹದ ವರೆಗೆ ಅಥವಾ ಪುನರ್ವಿವಾಹವಾಗದಿದ್ದರೆ ಆಕೆಯ ಮರಣದ ತನಕ ಆಕೆಯ ಮಾಜಿ ಪತಿ ಜೀವನಾಂಶವನ್ನು ಕೊಡಬೇಕೆಂಬುದು ಸುಪ್ರೀಮ್ ಕೋರ್ಟಿನ ತೀರ್ಮಾನವಾಗಿದೆ. ಸುಪ್ರೀಮ್ ಕೋರ್ಟಿನ ಈ ತೀರ್ಮಾನ ಇಸ್ಲಾಮಿ ಶರೀಅತ್‌ಗೆ ಸಂಪೂರ್ಣ ವಿರುದ್ಧವಾಗಿದೆಯೆಂದು ಅಹ್ಮದಿಯಾ ಜಮಾಅತ್ ಅಭಿಪ್ರಾಯ ಪಟ್ಟಿದೆ. ಸುಪ್ರೀಮ್ ಕೋರ್ಟಿನ ತೀರ್ಮಾನವನ್ನು ಬದಲಿಸುವುದು ಅತ್ಯಾವಶ್ಯಕವಾಗಿದೆ. ಇಸ್ಲಾಮಿ ಶರೀಅತ್‌ನಲ್ಲಿ ಒಂದೇ ಒಂದು ಉದಾಹರಣೆ ಸಹ ಈ ರೀತಿಯ ತೀರ್ಮಾನವಾದ ಕುರಿತು ದೊರೆಯುವುದಿಲ್ಲ. ವಿವಾಹ ವಿಚ್ಛೇ

ದಿತಳಾದ ಸ್ತ್ರೀಗೆ ಆಕೆಯ ಪುನರ್ವಿವಾಹದ ತನಕ ಅಥವಾ ಅವಳ ಮರಣದ ತನಕ ಆಕೆಯ ಮೊದಲಿನ ಗಂಡ ಖರ್ಚು ನೀಡಬೇಕೆಂದು ವಿಧಿಸಿದುದರ ಕುರಿತು ಒಂದೇ ಒಂದು ಉದಾಹರಣೆ ಸಹ ಇಸ್ಲಾಮಿ ಶರೀಅತನ್ನು ಆಧರಿಸಿ ನೀಡಿದ ತೀರ್ಮಾನಗಳಲ್ಲಿ ದೊರೆಯುವುದಿಲ್ಲ. ಇಸ್ಲಾಮಿನ ಶರೀಅತಿನ ಪಂಡಿತರು ಈ ವಿಷಯದಲ್ಲಿ ಏಕಾಭಿಪ್ರಾಯವನ್ನು ಹೊಂದಿರುವುದು ಈ ರೀತಿಯ ಜೀವನಾಂಶ ನೀಡಲು ಇಸ್ಲಾಮಿ ಶರೀಅತಿನಲ್ಲಿ ಯಾವುದೇ ಆಧಾರವಿಲ್ಲವೆಂಬುದಕ್ಕೆ ಸಾಕ್ಷಿಯಾಗಿದೆ. ಇಸ್ಲಾಮಿನ ಶರೀಅತಿನ ಮೂಲಾಧಾರಗಳಾದ ಪವಿತ್ರ ಖುರ್‌ಆನ್ ಮತ್ತು ಹದೀಸಿನಿಂದ ತಿಳಿದು ಬರುವುದೇನೆಂದರೆ ವಿವಾಹಿತ ಮಹಿಳೆಗೆ ಆಕೆಯ ವಿವಾಹ ಊರ್ಜಿತದಲ್ಲಿರುವವರೆಗೆ ಖರ್ಚಿಗೆ ಕೊಡುವುದು ಗಂಡನ ಕರ್ತವ್ಯವಾಗಿದೆ. ತಲಾಖ್ ಆದರೆ ಇದ್ದತ್ ಅವಧಿಯಲ್ಲಿ ಮಾತ್ರ ಖರ್ಚಿಗೆ ಕೊಡುವುದು ತಲಾಖ್ ಕೊಡುವ ಗಂಡನ ಕರ್ತವ್ಯವಾಗಿದೆ. ಅನಂತರ ಇಬ್ಬರೂ ಸ್ವತಂತ್ರರಾಗುತ್ತಾರೆ. ಇಸ್ಲಾಮಿ ಶರೀಅತಿನ ಪ್ರಕಾರ ಮದುವೆ ಎಂಬುದುಒಂದು ಒಪ್ಪಂದವಾಗಿರುತ್ತದೆ. ಈ ಒಪ್ಪಂದ ಜಾರಿಯಲ್ಲಿರುವ ವರೆಗೆ ಪರಸ್ಪರ ಕರ್ತವ್ಯಗಳಿರುತ್ತವೆ. ಈ ಒಪ್ಪಂದ ಪುರುಷನು ನೀಡುವ ತಲಾಖ್ ಮೂಲಕ ಅಥವಾ ಸ್ತ್ರೀ ಪಡೆಯುವ "ಖುಲ್‌ಅ" ಮೂಲಕ ರದ್ದಾದರೆ ಪರಸ್ಪರ ಕರ್ತವ್ಯಗಳೂ ರದ್ದಾಗುತ್ತವೆ. ಅನಂತರ ವಿವಾಹ ವಿಚ್ಛೇದಿತೆಯಾದ ಸ್ತ್ರೀಗೆ ಆಕೆಯ ಮಾಜಿ ಪತಿ ಇದ್ದತ್ ಅವಧಿಯ ಬಳಿಕ ಏನನ್ನೂ ನೀಡಬೇಕಾಗಿಲ್ಲ.

ಇಸ್ಲಾಮ್ ಸ್ತ್ರೀಯ ಜೀವನಕ್ಕಾಗಿ ಬೇರೆ ಬೇರೆ ಏರ್ಪಾಡು ಮಾಡಿದೆ. ವಿವಾಹಿತೆಯಾದ ಸ್ತ್ರೀಗೆ ಆಕೆಯ ಪತಿ ಖರ್ಚಿಗೆ ನೀಡಬೇಕು. ಅಲ್ಲದೆ ಆಕೆಗೆ ಆಕೆಯ ತಂದೆ ತಾಯಿಗಳ ಆಸ್ತಿಯಲ್ಲಿ ಪಾಲು ದೊರೆಯುತ್ತದೆ. ವಿವಾಹ ವಿಚ್ಛೇದಿತೆಯಾದ ಸ್ತ್ರೀ ತನ್ನ ಸ್ವಂತ ಕುಟುಂಬಕ್ಕೆ ಹಿಂತಿರುಗುತ್ತಾಳೆ. ಅವಳಿಗೆ ತಂದೆ ತಾಯಿಗಳಿಂದ ದೊರೆಯುವ ಸ್ವತ್ತಿನಿಂದ ತನ್ನ ಖರ್ಚು ನಿರ್ವಹಿಸುತ್ತಾಳೆ ಮತ್ತು ರಕ್ತ ಸಂಬಂಧಿಗಳೂ ಅವಳ ಖರ್ಚನ್ನು ವಹಿಸಿಕೊಳ್ಳುತ್ತಾರೆ. ಯಾವುದೇ ಆಸ್ತಿಯಿಲ್ಲದ ವಿವಾಹ ವಿಚ್ಛೇದಿತೆಯಾದ ಸ್ತ್ರೀಯ ಖರ್ಚಿನ ನಿರ್ವಹಣೆಯನ್ನು ಆಕೆಯ ರಕ್ತ ಸಂಬಂಧಿಗಳು ಯಾವ ರೀತಿ ನಿರ್ವಹಿಸಬೇಕೆಂಬುದನ್ನು ಇಸ್ಲಾಮಿ ಶರೀಅತನ್ನು ವಿವರಿಸುವ ನ್ಯಾಯ ಶಾಸ್ತ್ರ ಗ್ರಂಥಗಳಲ್ಲಿ ವಿಸ್ತಾರವಾಗಿ ವಿವರಿಸಲಾಗಿದೆ. ವಿವಾಹ ವಿಚ್ಛೇದಿತೆಯಾದ ಮಹಿಳೆಗೆ ಮಕ್ಕಳಿದ್ದರೆ ಮೊದಲನೆಯದಾಗಿ ಗಂಡು ಮಕ್ಕಳು ಅನಂತರ ಹೆಣ್ಣು ಮಕ್ಕಳು ಆಕೆಯ ಖರ್ಚು ನಿರ್ವಹಿಸಬೇಕಾಗಿದೆ. ವಿವಾಹ ವಿಚ್ಛೇದಿತೆಗೆ ಮಕ್ಕಳಿಲ್ಲದಿದ್ದರೆ ಅಥವಾ ಮಕ್ಕಳಿದ್ದರೂ ಅವರು ಆಕೆಯ ಖರ್ಚು ನಿರ್ವಹಿಸಲು ಅಸಮರ್ಥರಾಗಿದ್ದರೆ ಆಕೆಯ ಖರ್ಚನ್ನು ಇನ್ನಿತರ ಹತ್ತಿರದ ಸಂಬಂಧಿಗಳು ವಹಿಸಬೇಕಾಗಿದೆ. ಆ ಸಂಬಂಧಿಗಳಲ್ಲಿ ಇವರೆಲ್ಲಾ ಸೇರಿದ್ದಾರೆ: ತಂದೆ, ತಾಯಿ, ತಂದೆಯ ತಂದೆ, ತಂದೆಯ ತಾಯಿ, ತಾಯಿಯ ತಂದೆ, ತಾಯಿಯ ತಾಯಿ. ಮಗ. ಮಗಳು. ಮಗನ ಗಂಡು ಮತ್ತು ಹೆಣ್ಣು ಮಕ್ಕಳು. ಮಗಳ ಗಂಡು ಮತ್ತು ಹೆಣ್ಣು ಮಕ್ಕಳು. ಸಹೋದರ. ಸಹೋದರಿ. ತಂದೆಯ ತಮ್ಮ ಅಥವಾ ಅಣ್ಣ, ತಾಯಿಯ ಅಕ್ಕ ತಂಗಿಯರು. ತಾಯಿಯ ಸಹೋದರರು, ಅಣ್ಣ ತಮ್ಮಂದಿರ ಗಂಡು ಮತ್ತು ಹೆಮ್ಮಕ್ಕಳು, ಅಕ್ಕ ತಂಗಿಯಂದಿರ ಗಂಡು ಮತ್ತು ಹೆಣ್ಣು ಮಕ್ಕಳು. ಇಸ್ಲಾಮ್ ವಿವಾಹ ವಿಚ್ಛೇದಿತೆ ಮಹಿಳೆಯನ್ನು ನಿರಾಶ್ರಯಿತಳನ್ನಾಗಿ ಮಾಡಿಲ್ಲ. ವಿವಾಹ ವಿಚ್ಛೇದಿತೆ ಗೌರವದಿಂದ ಜೀವಿಸುವ ಏರ್ಪಾಡನ್ನು ಇಸ್ಲಾಮ್ ಮಾಡಿದೆ.

ಈ ಸಂದರ್ಭದಲ್ಲಿ ಒಂದು ಸಂಗತಿಯನ್ನು ಮರೆಯಬಾರದು: ಸ್ತ್ರೀ ಸಹಜವಾದ ಸಮಸ್ಯೆಗಳು ಕೇವಲ ವಿಚ್ಛೇದಿತ ಮಹಿಳೆಗೆ ಮಾತ್ರ ಸೀಮಿತವಾಗಿಲ್ಲ. ವಿಚ್ಛೇದಿತ ಮಹಿಳೆಯರ ಸ್ಥಿತಿಯಲ್ಲಿ ವಿಧವೆಯರೂ ಅವಿವಾಹಿತೆಯಾದ ಸ್ತ್ರೀಯರೂ ಸೇರುತ್ತಾರೆ. ನ್ಯಾಯ ನೀಡುವ ಬುದ್ಧಿಜೀವಿಗಳ ದೃಷ್ಟಿ ಕೇವಲ ವಿವಾಹ ವಿಚ್ಛೇದಿತೆಯಾದ ಸ್ತ್ರೀಯ ಖರ್ಚಿನ ಕುರಿತು ಮಾತ್ರ ಕೇಂದ್ರೀಕರಿಸಲು ಕಾರಣವೇನು? ಪತಿಯ ಮರಣದಿಂದ ವಿಧವೆಯಾಗುವ ಸ್ತ್ರೀ, ಯಾವುದಾದರೂ ಕಾಯಿಲೆ, ಅಂಗವಿಕಲತೆ ಅಥವಾ ಬಲಹೀನತೆಯ ಕಾರಣದಿಂದ ಮದುವೆಯಾಗಲಾರದ ಸ್ತ್ರೀಯ ಜೀವನಾಂಶದ ಏರ್ಪಾಡು ಸಹ ಆಗಬೇಕಾಗಿದೆ. ಇಷ್ಟರವರೆಗೆ ಸರಕಾರವಾಗಲೀ ಕೋರ್ಟು ಕಛೇರಿಗಳಾಗಲೀ ಇಂತಹ ಸ್ತ್ರೀಯರಿಗೆ ಜೀವನಾಂಶದ ಏರ್ಪಾಡು ಮಾಡಿಲ್ಲ. ವಿವಾಹ ವಿಚ್ಛೇದಿತೆಯಾದ ಸ್ತ್ರೀ, ವಿಧವೆ ಮತ್ತು ಅವಿವಾಹಿತೆಯಾದ ಸ್ತ್ರೀ ಯಾವುದೇ ಸ್ವತ್ತನ್ನು ಹೊಂದಿಲ್ಲವಾದರೆ

ಅಥವಾ ಯಾವುದೇ ಆದಾಯ ಗಳಿಸುವ ಮಾರ್ಗವನ್ನು ಪಡೆದಿಲ್ಲವಾದರೆ ಮುಸಲ್ಮಾನರಲ್ಲಿ ಆ ಸ್ತ್ರೀಯ ತಂದೆ-ತಾಯಿ, ಅಜ್ಜ-ಅಜ್ಜಿ, ಮಕ್ಕಳು ಅಥವಾ ಇತರ ಹತ್ತಿರದ ಮತ್ತು ದೂರದ ಸಂಬಂಧಿಗಳು ಆ ಸ್ತ್ರೀಯ ಖರ್ಚನ್ನು ವಹಿಸಿಕೊಳ್ಳುತ್ತಾರೆ. ಇಷ್ಟರ ವರೆಗೆ ಸರಕಾರವಾಗಲಿ ಕೋರ್ಟು ಕಛೇರಿಗಳಾಗಲಿ ಇಂತಹ ಸ್ತ್ರೀಯರ ಖರ್ಚಿನ ಏರ್ಪಾಡು ಮಾಡಿಲ್ಲ. ಆದರೆ ಇಸ್ಲಾಮ್ ಧರ್ಮವು ತನ್ನ ಕಾನೂನುಗಳ ಮೂಲಕ ವಿವಾಹ ವಿಚ್ಛೇಧಿತೆ ಮಹಿಳೆ, ವಿಧವೆ ಮತ್ತು ಅವಿವಾಹಿತೆಯನ್ನು ನಿರಾಶ್ರಿತೆಯನ್ನಾಗಿ ಮಾಡಿಲ್ಲ. ಇವರಿಗೆಲ್ಲಾ ಜೀವನ ಮಾರ್ಗದ ಏರ್ಪಾಡನ್ನು ಇಸ್ಲಾಮ್ ಮಾಡಿದೆ. ಇದೇ ಕಾರಣದಿಂದ ಮುಸ್ಲಿಮ್ ಸ್ತ್ರೀಯರು "ವಿಧವಾಶ್ರಮ"ಗಳಲ್ಲಿ ಅಭಯವನ್ನು ಅಪೇಕ್ಷಿಸುವುದಿಲ್ಲ. ಮುಸ್ಲಿಮ್ ಕುಟುಂಬಗಳು ತಮ್ಮ ಬಡ ಸ್ತ್ರೀಯರನ್ನು ಆದರದಿಂದ ತಮ್ಮ ಬಳಿಯೇ ನಿಲ್ಲಿಸಿಕೊಂಡು ಅವರ ಜೀವನ ಸುಗಮವಾಗಿ ಕಳೆಯುವ ಏರ್ಪಾಡು ಮಾಡುತ್ತವೆ.

ಪವಿತ್ರ ಖುರ್‌ಆನಿನಲ್ಲಿ ಪ್ರಯೋಗಿಸಲಾದ ಸಾಂಕೇತಿಕ ಶಬ್ದಗಳಲ್ಲಿ ಒಬ್ಬ ವ್ಯಕ್ತಿಯಿಂದ ಆ ವ್ಯಕ್ತಿಯ ಮರಣದ ನಂತರ ಆಸ್ತಿಯನ್ನು ಗಳಿಸಲು ಅರ್ಹತೆಯನ್ನು ಪಡೆಯುವವನನ್ನು ವಾರಿಸ್ ಎಂದು ಕರೆಯಲಾಗಿದೆ. ಪವಿತ್ರ ಖುರ್‌ಆನಿನ ಸೂರತುಲ್ ಬಖರದಲ್ಲಿ ವಿವಾಹ ವಿಚ್ಛೇದಿತ ಮಹಿಳೆ, ಆಕೆಗೆ ವಿಚ್ಛೇದನಕ್ಕೆ ಸ್ವಲ್ಪ ಮೊದಲು ಜನಿಸಿದ ಶಿಶುವಿಗೆ ಆಕೆಯೇ ಹಾಲನ್ನು ನೀಡುವುದಾದರೆ ಮಗುವಿಗೆ ಹಾಲು ನೀಡುವ ಅವಧಿಯಲ್ಲಿ ಆಕೆಯ ಖರ್ಚನ್ನು ವಿವಾಹ ವಿಚ್ಛೇದನೆ ನೀಡುವ ಪುರುಷನು ಕೊಡಬೇಕೆಂದು ಆಜ್ಞಾಪಿಸಲಾಗಿದೆ. ಆದರೆ ಆಕೆಯ ಮಾಜಿ ಗಂಡನಿಗೆ ಅದಕ್ಕೆ ಸಾಮರ್ಥ್ಯವಿಲ್ಲದಿದ್ದರೆ ಆಕೆಯ ವಾರೀಸುದಾರರು ಆಕೆಯ ಖರ್ಚನ್ನು ವಹಿಸಬೇಕೆಂದು ಪವಿತ್ರ ಖುರ್‌ಆನ್ ವಿವರಿಸಿದೆ. ಇದರಿಂದ ಒಂದು ಸಂಗತಿ ವ್ಯಕ್ತವಾಗುತ್ತಿದೆ: ಜೀವನ ನಿರ್ವಹಣೆ ಮಾಡಲು ಯೋಗ್ಯ ಸಂಪಾದನೆಯಿಲ್ಲದ ಸಂಬಂಧಿಕರ ಜೀವನಾಂಶದ ಹೊಣೆ ಅವರ ವಾರಿಸುದಾರರಾದ ಸಂಬಂಧಿಕರಿಗಿದೆ ಎಂಬುದು.

ವಿವಾಹ ವಿಚ್ಛೇದಿತ ಮುಸ್ಲಿಮ್ ಮಹಿಳೆಗೆ ಜೀವನಾಂಶದ ಏರ್ಪಾಡು ಆಗಬೇಕೆಂದು ಹೆಚ್ಚಾಗಿ ಒತ್ತಿ ಹೇಳುತ್ತಿರುವ ನಮ್ಮ ದೇಶ ವಾಸಿಗಳಾದ ಬಹುಸಂಖ್ಯಾಕರ ಕುರಿತು ಹೇಳುವುದಾದರೆ, ಅವರಲ್ಲಿ ವಿವಾಹ ವಿಚ್ಛೇದನದ ಸಂದರ್ಭವೇ ಉಂಟಾಗದಂತೆ ನೋಡಿಕೊಳ್ಳಲಾಗುತ್ತಿದೆ. ಆದುದರಿಂದ ವಿವಾಹ ವಿಚ್ಛೇದಿತೆಗೆ ಖರ್ಚಿಗೆ ಕೊಡುವ ಪ್ರಶ್ನೆಯೇ ಉದ್ಭವಿಸದಂತಾಗುತ್ತದೆ. ಅವರಲ್ಲಿ ಹೊಸದಾಗಿ ವಧುವೊಬ್ಬಳು ಬಂದರೆ ಆಕೆ ಎಷ್ಟೇ ವಿದ್ಯಾ ಬುದ್ಧಿ ಸಂಪನ್ನಳಾಗಿದ್ದರೂ ಎಷ್ಟೇ ಸೌಂದರ್ಯವತಿಯಾಗಿದ್ದರೂ ಆಕೆ, ಆಕೆಯ ಪತಿ ಮತ್ತು ಅವನ ಕುಟುಂಬದವರಿಗೆ ತೃಪ್ತಿಯಾಗುವಂತೆ ಸ್ತ್ರೀಧನ ತರದಿದ್ದರೆ ಅಥವಾ ಯಾವುದೇ ಕಾರಣದಿಂದ ಜಗಳವಾದರೆ ಆ ಮಹಿಳೆಯನ್ನು ಜೀವಂತ ಸುಡಲಾಗುವಂತಹ ಘಟನೆಗಳು ನಡೆಯುತ್ತವೆ. ಪತ್ರಿಕೆಗಳಲ್ಲಿ ನವ ವಧುಗಳ ದಹನದ ಹೃದಯ ವಿದ್ರಾವಕ ವಾರ್ತೆಗಳು ಬರುತ್ತಾ ಇರುತ್ತವೆ. ವಿವಾಹಿತ ಸ್ತ್ರೀಯರಿಂದ ವಿಮೋಚನೆ ಗಳಿಸಲು ಇಂತಹ ಮಾರ್ಗವನ್ನು ಕೈಗೊಳ್ಳುವ ಸಮಾಜದಲ್ಲಿ ವಿವಾಹ ವಿಚ್ಛೇದಿತೆ ಮಹಿಳೆಗೆ ಖರ್ಚಿಗೆ ನೀಡುವ ಸಮಸ್ಯೆಯೇ ಉದ್ಭವಿಸುವುದಿಲ್ಲ. ಆದರೆ ಮುಸಲ್ಮಾನರಲ್ಲಿ ಲಕ್ಷಾಂತರಗಳಲ್ಲಿ ಸಹ ಒಬ್ಬ ಮುಸಲ್ಮಾನ ತನ್ನ ಪತ್ನಿ ತಾನು ಅಪೇಕ್ಷೆ ಪಟ್ಟಷ್ಟು ವರದಕ್ಷಿಣೆ ತರಲಿಲ್ಲವೆಂದೋ ಅಥವಾ ಇನ್ನಾವುದೋ ಜಗಳದ ಕಾರಣದಿಂದ ತನ್ನ ಪತ್ನಿಯನ್ನು ಸುಟ್ಟು ಹಾಕಿದ ನಿದರ್ಶನ ದೊರೆಯುವುದಿಲ್ಲ. ಆದರೆ ಮುಸ್ಲಿಮ್ ಗಂಡ ಹೆಂಡತಿಯರು ಯಾವುದೇ ಕಾರಣದಿಂದ ತಮ್ಮ ವಿವಾಹ ಮುಂದುವರಿಸಲು ಇಚ್ಛಿಸದಿದ್ದರೆ ಗಂಡ ತಲಾಕ್ ನೀಡುತ್ತಾನೆ ಅಥವಾ ಸ್ತ್ರೀ "ಖುಲ್‌ಅ" ಅಪೇಕ್ಷಿಸುತ್ತಾಳೆ. ಈ ರೀತಿ ಒಬ್ಬರು ಇನ್ನೊಬ್ಬರ ದಾಂಪತ್ಯ ಬಂಧದಿಂದ ಸ್ವತಂತ್ರರಾಗುತ್ತಾರೆ. ವಿವಾಹ ವಿಚ್ಛೇದಿತ ಮಹಿಳೆ ತನ್ನ ಕುಟುಂಬಕ್ಕೆ ಹಿಂತಿರುಗುತ್ತಾಳೆ. ಅನಂತರ ಪುನರ್ ವಿವಾಹ ಆಗುವುದೂ ಆಗದೆ ಇರುವುದೂ ಸ್ತ್ರೀಯ ಇಚ್ಛೆಯ ಪ್ರಕಾರವಾಗಿರುತ್ತದೆ. ಆಕೆಗೆ ಮೊದಲಿನ ಗಂಡನ ಜೊತೆ ಯಾವುದೇ ಸಂಬಂಧವಿರುವುದಿಲ್ಲ. ಅವಳು ಅತ ನೀಡುವ ತುತ್ತನ್ನದಿಂದ ಜೀವಿಸಲು ಇಷ್ಟ ಪಡುವುದೂ ಇಲ್ಲ.

ಸ್ತ್ರೀಯ ವಿವಿಧ ಸ್ಥಾನಗಳಲ್ಲಿ ಆಕೆಯ ಖರ್ಚಿನ ಏರ್ಪಾಡಿನ ಕುರಿತು ಪವಿತ್ರ ಖುರ್‌ಆನ್ ಮಾಡಿದ ವ್ಯವಸ್ಥೆ ಈ ರೀತಿ ಇದೆ:

1. ವಿವಾಹಿತೆಯಾದ ಸ್ತ್ರೀಯ ಸಂಪೂರ್ಣ ಖರ್ಚಿನ ಜವಾಬ್ದಾರಿ ಆಕೆಯ ಪತಿಯದ್ದಾಗಿದೆ. ಆಕೆ

ಯೊಂದಿಗೆ ಜೀವನ ನಡೆಸುವಷ್ಟು ಕಾಲ ಅಥವಾ ಆಜೀವ ಪರ್ಯಂತ ಆಕೆಯ ಖರ್ಚನ್ನು ಗಂಡನು ವಹಿಸಿಕೊಳ್ಳಬೇಕಾಗಿದೆ. (ಸೂರತುನ್ನಿಸಾ)

2. ವಿವಾಹ ವಿಚ್ಛೇದಿತೆಯಾದ ಸ್ತ್ರೀಗೆ ಆಕೆಯ ಗಂಡ ಇದ್ದತ್ ಮುಗಿಯುವ ತನಕ ಖರ್ಚು ಕೊಡಬೇಕಾಗಿದೆ. ಋತು ಚಕ್ರವನ್ನು ಹೊಂದಿರುವ ಸ್ತ್ರೀಯರಲ್ಲಿ ಈ ಅವಧಿ ಮೂರು ಬಾರಿ ಋತುಮತಿಯರಾಗುವ ವರೆಗೆ ಇರುತ್ತದೆ. ಋತು ಚಕ್ರದ ಅವಧಿ ದಾಟಿರುವ ಪ್ರಾಯವನ್ನು ಹೊಂದಿರುವ ಸ್ತ್ರೀಯರಿಗೆ ಈ ಅವಧಿ 3 ತಿಂಗಳಾಗಿರುತ್ತದೆ. ಗರ್ಭಿಣಿ ಸ್ತ್ರೀಯರಿಗೆ ಈ ಅವಧಿ ಅವರು ಹೆರುವ ವರೆಗೆ ಇರುತ್ತದೆ. ಆದುದರಿಂದ ಗರ್ಭಿಣಿಯಾದ ಸ್ತ್ರೀಗೆ ಪರಮಾವಧಿ 9 ತಿಂಗಳು ಖರ್ಚು ದೊರೆಯಬಹುದು. ಹೆರಿಗೆಯಾದ ಕೂಡಲೇ ಒಬ್ಬ ಸ್ತ್ರೀಯ ವಿವಾಹ ವಿಚ್ಛೇದನವಾದರೆ ಆಕೆಯ ಮಗುವಿಗೆ ಹಾಲು ನೀಡಲು ಎರಡು ವರ್ಷದ ತನಕ ಖರ್ಚು ನೀಡಬೇಕಾಗುತ್ತದೆ. ಆ ಸಮಯದಲ್ಲಿ ಆಕೆಯ ಬಟ್ಟೆಬರೆ ಮತ್ತು ವಾಸದ ಏರ್ಪಾಡು ಸಹ ಗಂಡನೇ ಮಾಡಬೇಕಾಗುತ್ತದೆ. (ಸೂರತುಲ್ ಬಖರ ಮತ್ತು ಸೂರತುತ್ತಲಾಖ್)

ಮೇಲೆ ವಿವರಿಸಲಾದ ಸಂದರ್ಭಗಳ ಹೊರತು ಬೇರೆ ಯಾವುದೇ ಸಂದರ್ಭದಲ್ಲಿ ವಿವಾಹ ವಿಚ್ಛೇದಿತಳಾದ ಸ್ತ್ರೀಗೆ ಜೀವನಾಂಶ ಕೊಡುವ ಕುರಿತು ಇಸ್ಲಾಮಿ ಶರೀಅತಿನಲ್ಲಿ ಯಾವುದೇ ನಿಯಮವಿರುವುದಿಲ್ಲ.

ಸುಪ್ರೀಮ್ ಕೋರ್ಟು ತನ್ನ ತೀರ್ಪಿಗೆ ಆಧಾರವಾಗಿ ನೀಡಿರುವ ಪವಿತ್ರ ಖುರ್‌ಆನಿನ ವಚನಗಳ ಅರ್ಥವನ್ನು ಇತರ ವಚನಗಳೊಂದಿಗೆ ಸಮನ್ವಯಗೊಳಿಸಿ ಅರ್ಥವಿಸುವಾಗ ಮೇಲೆ ವಿವರಿಸಿದ ವಿಚಾರಗಳು ಮಾತ್ರ ಈ ವಚನಗಳಲ್ಲಿ ಸೂಚಿತವಾಗಿವೆಯೆಂದು ಗೊತ್ತಾಗುತ್ತದೆ.

ಸುಪ್ರೀಮ್ ಕೋರ್ಟು ತನ್ನ ತೀರ್ಪಿನಲ್ಲಿ ಸೂಚಿಸಿರುವ ಪವಿತ್ರ ಖುರ್‌ಆನಿನ

وللمطلقات متاعٌ بالمعروف حقاً على المتقين

كذلك يبين الله لكم آياته لعلكم تعقلون

ಎಂಬ ಎರಡು ವಚನಗಳನ್ನು (2:242, 243) ಅಹ್ಮದಿಯಾ ಜಮಾಅತಿನ ಎರಡನೆಯ ಖಲೀಫರಾದ ಹಜ್ರತ್ ಮಿರ್ಜಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹೇಬರು ತನ್ನ ತಫ್ಸೀರ್ ಕಬೀರ್ ಗ್ರಂಥದಲ್ಲಿ ಈ ರೀತಿ ಅರ್ಥವನ್ನು ಕೊಟ್ಟು ವ್ಯಾಖ್ಯಾನಿಸಿದ್ದಾರೆ:

“ಯಾವ ಸ್ತ್ರೀಯರಿಗೆ ತಲಾಖ್ ನೀಡಲಾಗಿದೆಯೋ ಆ ಸ್ತ್ರೀಯರಿಗೆ ಯೋಗ್ಯವಾದ ರೀತಿಯಲ್ಲಿ ಸೌಲಭ್ಯ ನೀಡುವುದು ಅತ್ಯಗತ್ಯವಾಗಿದೆ. ಇದು ದೈವಭಕ್ತರಿಗೆ ಕಡ್ಡಾಯವಾಗಿದೆ.

“ಈ ರೀತಿ ಅಲ್ಲಾಹನು ತನ್ನ ಆಜ್ಞೆಗಳನ್ನು ನಿಮ್ಮ ಒಳಿತಿಗಾಗಿ ಸ್ಪಷ್ಟವಾಗಿ ನೀವು ತಿಳಿಯುವಂತೆ ವ್ಯಕ್ತಪಡಿಸುತ್ತಿದ್ದಾನೆ.

“ಈ ಆಯತುಗಳಲ್ಲಿ ಅಲ್ಲಾಹನು, ವಿವಾಹ ವಿಚ್ಛೇದಿತೆಯಾದ ಸ್ತ್ರೀಯ ಜೊತೆ ಸಭ್ಯ ರೀತಿಯಲ್ಲಿ ವರ್ತಿಸಬೇಕೆಂಬ ಆಜ್ಞೆಯನ್ನು ಪುನರುಚ್ಚರಿಸಿದ್ದಾನೆ. ಸಾಧಾರಣ ಪರಿಸ್ಥಿತಿಗಳಲ್ಲಿ ತಲಾಖ್ ನೀಡಲ್ಪಟ್ಟ ಸ್ತ್ರೀಯೊಡನೆ ಕೋಪದಿಂದ ವರ್ತಿಸುವುದು ಸಾಮಾನ್ಯವಾಗಿರುತ್ತದೆ. ಆದುದರಿಂದ ವಿವಾಹ ವಿಚ್ಛೇದಿತಳಾದ ಸ್ತ್ರೀಯೊಂದಿಗೆ ಒಳ್ಳೆಯ ರೀತಿಯಲ್ಲಿ ವರ್ತಿಸಬೇಕೆಂದು ಒತ್ತಿ ಹೇಳಲಾಗಿದೆ. ಮೊದಲಿನ ವಚನಗಳ ಜೊತೆ ಈ ವಚನಗಳನ್ನು ಸೇರಿಸಿಕೊಂಡು ಹೇಳಿರುವುದೇನೆಂದರೆ, ವಿವಾಹ ವಿಚ್ಛೇದಿತೆಯಾದ ಸ್ತ್ರೀಗೆ ಇದ್ದತ್ ಅವಧಿಗಿಂತ ಹೆಚ್ಚು ಸಮಯ ಮನೆಯಲ್ಲಿ ನಿಲ್ಲಬೇಕಾದ ಪರಿಸ್ಥಿತಿ ಉಂಟಾದರೆ ಅದಕ್ಕೆ ಅನುಮತಿ ನೀಡಬೇಕು. ಅವರಿಗೆ ಅವರ ಸ್ಥಿತಿಯನ್ನನುಸರಿಸಿ ಉಪಕಾರ ಮಾಡಬೇಕೆಂದು ಸಹ ಆಜ್ಞಾಪಿಸಲಾಗಿದೆ. ಇದು ದೈವ ಭಕ್ತರು ಕಡ್ಡಾಯವಾಗಿ ಪಾಲಿಸಬೇಕೆಂದೂ ವಿಧಿಸಲಾಗಿದೆ. ಇದರಿಂದ ವ್ಯಕ್ತವಾಗುವುದೇನೆಂದರೆ, ವಿವಾಹ ವಿಚ್ಛೇದಿತಳಾದ ಸ್ತ್ರೀಯೊಂದಿಗೆ ಕ್ರೂರವಾಗಿ ವರ್ತಿಸಬಾರದು. ಇದ್ದತ್ ಅವಧಿ ಮುಗಿದ ಕೂಡಲೇ ಅವಳನ್ನು ಮನೆಯಿಂದ ಹೊರಗೆ ಹಾಕಬಾರದೆಂದೂ ಅವಳಿಗೆ ಮನೆಯಿಂದ ತೆರಳಲು ಬೇಕಾದ ಕಾಲಾವಕಾಶ ನೀಡಬೇಕೆಂದೂ ಇದರ ಅರ್ಥವಾಗಿದೆ. ಅವಳು ಸಮಾಧಾನದಿಂದ ಮನೆಬಿಟ್ಟು ಹೋಗುವಂತೆ ಅನುಕೂಲ ಮಾಡಿ ಕೊಡಬೇಕಾಗಿದೆ.........ಈ ಆಜ್ಞೆಗಳ ಪ್ರಕಾರ ನಡೆದರೆ ಕಲಹಗಳೂ ಜಗಳಗಳೂ ಇಲ್ಲದಂತೆ ಎಲ್ಲಾ ಸಮಸ್ಯೆಗಳು ಪರಿಹಾರವಾಗಬಲ್ಲವು........... ಅಲ್ಲಾಹನು ತನ್ನ ವಚನಗಳನ್ನು ಸ್ಪಷ್ಟವಾಗಿ ವಿವರಿಸುವ

ಉದ್ದೇಶ ನೀವು ತಪ್ಪುಗಳಿಂದಲೂ ಬಲಹೀನತೆಗಳಿಂದಲೂ ಸುರಕ್ಷಿತರಾಗಲಿಕ್ಕೆ ಬೇಕಾಗಿ ಆಗಿದೆ."

ಈ ಸಂದರ್ಭದಲ್ಲಿ ಒಂದು ಸಂಗತಿ ಬಹಳ ಖೇದಕರವಾಗಿ ವ್ಯಕ್ತಗೊಳಿಸಬೇಕಾಗಿದೆ: ಮುಸಲ್ಮಾನರಲ್ಲಿ ಈಗ ಖಿಲಾಫತ್ ವ್ಯವಸ್ಥೆ ಇಲ್ಲ. ಬೈತುಲ್‌ಮಾಲ್ ಅಥವಾ ಸಾಮೂಹಿಕ ನಿಧಿಯ ವ್ಯವಸ್ಥೆ ಸಹ ಇಲ್ಲ. ಝಕಾತ್ ವಸೂಲಾತಿಯ ವ್ಯವಸ್ಥೆ ಕೂಡ ಇಲ್ಲ. ಈ ಎಲ್ಲಾ ಏರ್ಪಾಡುಗಳು ಇರುತ್ತಿದ್ದರೆ ಮುಸ್ಲಿಮರಿಂದ ಹಣವನ್ನು ವ್ಯವಸ್ಥಿತವಾಗಿ ವಸೂಲು ಮಾಡಿ ಬಡವರಿಗೂ ಅನಾಥರಿಗೂ ವಿಧವೆಯರಿಗೂ ವಿವಾಹ ವಿಚ್ಛೇದಿತ ಬಡ ಸ್ತ್ರೀಯರಿಗೂ ವ್ಯವಸ್ಥಿತವಾಗಿ ನೀಡಿ ನಿರಾಶ್ರಿತರಾದವರಿಗೆ ಆಶ್ರಯ ನೀಡಲು ಸಾಧ್ಯವಾಗುತ್ತಿತ್ತು. ಈ ಸಂರ್ಧದಲ್ಲಿ ಅಲ್ಲಾಹುವಿನ ಸ್ತುತಿಯೊಂದಿಗೆ ಒಂದು ಸಂಗತಿಯನ್ನು ನಾವು ಬಹಿರಂಗಗೊಳಿಸಲು ಇಚ್ಛಿಸುತ್ತೇವೆ. ಅಹ್ಮದಿಯಾ ಜಮಾಅತಿನಲ್ಲಿ ಖಿಲಾಫತ್ ವ್ಯವಸ್ಥೆ, ಬೈತುಲ್ ಮಾಲ್ ವ್ಯವಸ್ಥೆ ಇವೆ. ಬೈತುಲ್ ಮಾಲ್ ವ್ಯವಸ್ಥೆಯಲ್ಲಿ ಹಲವು ವಿಧದ ದೇಣಿಗೆಗಳನ್ನು ಅಹ್ಮದಿಯರಿಂದ ಸ್ವೀಕರಿಸಿ ಜಮಾಅತಿನ ಸಾಧಾರಣ ದೈನಂದಿನ ಉದ್ದೇಶಗಳಿಗಾಗಿಯೂ ಅನಾಥರಿಗೂ ವಿಧವೆಯರಿಗೂ ನಿರಾಶ್ರಿತರಾದ ವಿಚ್ಛೇದಿತ ಸ್ತ್ರೀಯರಿಗಾಗಿಯೂ ಜಮಾಅತಿನ ಪರಿಧಿಯೊಳಗೆ ಖರ್ಚು ಮಾಡಲಾಗುತ್ತಿದೆ.

ಸುಪ್ರೀಂ ಕೋರ್ಟಿನ ತೀರ್ಮಾನದ ಕುರಿತು ಭಾರತದ ಮುಸ್ಲಿಮರು ವ್ಯಕ್ತಗೊಳಿಸಿದ ಪ್ರತಿಕ್ರಿಯೆ ಸರಿಯಾದುದಾಗಿದೆ. ಇಸ್ಲಾಮಿನ ಶರೀಅತಿನಲ್ಲಿ ನಡೆಸಿದ ಈ ರೀತಿಯ ಹಸ್ತಕ್ಷೇಪ ಬಹಳ ಭಯಾನಕವೂ ದೀರ್ಘಕಾಲೀನ ಪರಿಣಾಮ ಉಂಟು ಮಾಡುವುದೂ ಆಗಿದೆ. ಇದು ಸಮಾನ ಪೌರ ಸಂಹಿತೆಯನ್ನು ಜಾರಿಗೊಳಿಸುವ ದಾರಿಯನ್ನು ಸುಗಮಗೊಳಿಸುವ ರೂಪದಲ್ಲಿದೆ. ಇದರಿಂದ ಮುಸ್ಲಿಮ್ ಸಮಾಜದ ಅಚ್ಚುಕಟ್ಟುತನ ವಿನಾಶಗೊಳ್ಳುವುದು.

ಮುಸ್ಲಿಮ್ ಸಮಾಜ ತನ್ನ ಸ್ಥಿರತೆಯನ್ನು ಇಚ್ಛಿಸುವುದಾದರೆ ಅದರ ನಾಯಕತ್ವ ಎಚ್ಚರಿಕೆಯಿಂದಲೂ ಕಾರ್ಯ ತತ್ಪರರಾಗಿಯೂ ವರ್ತಿಸುವಂಥದ್ದಾಗಬೇಕಾಗಿದೆ. ಬೇರೆಯವರು ತಮ್ಮ ವ್ಯವಹಾರದಲ್ಲಿ ಕೈ ಹಾಕಬಾರದೆಂದು ಮುಸ್ಲಿಮ್ ಸಮಾಜ ಇಚ್ಛಿಸುವುದಾದರೆ ಅದು ತನ್ನ ಸಮಸ್ಯೆಗಳನ್ನು ಅರಿತುಕೊಂಡು ಆ ಸಮಸ್ಯೆಗಳನ್ನು ನ್ಯಾಯಯುತವಾಗಿ ಪರಿಹರಿಸುವ ಮಾರ್ಗಗಳನ್ನು ಕಂಡುಕೊಳ್ಳಬೇಕಾಗಿದೆ. ಹೀಗೆ ಮಾಡದಿದ್ದರೆ ಬಾಹ್ಯ ಶಕ್ತಿಗಳು ಮುಸ್ಲಿಮ್ ಸಮಸ್ಯೆಗಳ ಕುರಿತು ಇಂದಲ್ಲವಾದರೆ ನಾಳೆ ಹಸ್ತಕ್ಷೇಪ ಮಾಡಲು ಖಂಡಿತವಾಗಿಯೂ ಪ್ರಯತ್ನ ನಡೆಸುವುವು. ಆದುದರಿಂದ ಮುಸ್ಲಿಮ್ ಸಮಾಜ ಎಚ್ಚರಿಕೆಯಿಂದ ವರ್ತಿಸುವುದು ಅತ್ಯಾವಶ್ಯಕವಾಗಿದೆ.

(6-2-86 ರ "ಬದ್ರ್" ಉರ್ದು ವಾರ ಪತ್ರಿಕೆಯಿಂದ ಸಂಗ್ರಹಿತ. ಸಂಗ್ರಹ ಮತ್ತು ಅನುವಾದ: ಎಂ. ಉಬೈದುಲ್ಲಾ)


# ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಗ್ರಂಥಕರ್ತ : **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

ಪುಟ : 60 ಬೆಲೆ : **ಒಂದು ರೂಪಾಯಿ** ಅಂಚೆ ವೆಚ್ಚ : **ಉಚಿತ**

ಬರೆಯಿರಿ : Book Secretary, Ahmadiyya Muslim Mission,
10-23-1008, Ansari Road, Bunder, Mangalore-575 001.

# ವ್ರತಾನುಷ್ಠಾನ

ವ್ರತಾನುಷ್ಠಾನವು ಹೆಚ್ಚಿನ ಎಲ್ಲಾ ಧರ್ಮಗಳಲ್ಲೂ ವಿಧಿಸಲಾಗಿದೆ. ಆದರೆ ವ್ರತಾನುಷ್ಠಾನದ ಬಗ್ಗೆ ಇಸ್ಲಾಂ ನಿರ್ದೇಶಿಸಿರುವ ರೀತಿ ಇತರ ಧರ್ಮಗಳು ನಿರ್ದೇಶಿಸಿರುವ ಅಥವಾ ಅಂಗೀಕರಿಸಿರುವ ರೀತಿಯಿಂದ ಭಿನ್ನವಾಗಿದೆ.

ಪ್ರಾಯಕ್ಕೆ ಬಂದ ಪ್ರತಿಯೊಬ್ಬ ಮುಸ್ಲಿಂ ಎಲ್ಲಾ ವರ್ಷ ಒಂದು ಮಾಸ ಕಾಲ ವ್ರತವನ್ನನುಷ್ಠಿಸಬೇಕೆಂದು ಇಸ್ಲಾಂ ಆದೇಶಿಸುತ್ತದೆ. ಈ ವ್ರತಮಾಸದಲ್ಲಿ ರೋಗಿಗಳು ಮತ್ತು ಯಾತ್ರಿಕರು ಉಪವಾಸ ಆಚರಿಸಬೇಕೆಂದಿಲ್ಲ. ಬಿಟ್ಟು ಹೋದಷ್ಟು ದಿನಗಳ ಉಪವಾಸವನ್ನು ಬೇರೆ ಕಾಲದಲ್ಲಿ ಅನುಷ್ಠಿಸಿದರೆ ಸಾಕು. ಆದರೆ ಖಾಯಂ ರೋಗಿಯಾಗಿದ್ದವರಿಗೂ ಉಪವಾಸ ಅನುಷ್ಠಿಸಲಿಕ್ಕೆ ಅಸಾಧ್ಯವಾದ ಮಟ್ಟಿಗೆ ಬಲಹೀನರಾಗಲಿ ಅತಿವೃದ್ಧರಾಗಲಿ ಆಗಿದ್ದವರಿಗೂ ಮೇಲಿನ ಆಜ್ಞೆಯಿಂದ ವಿನಾಯಿತಿ ಇದೆ.

ವ್ರತಾನುಷ್ಠಾನಿ ಮುಂಜಾನೆಯಿಂದ ಮುಸ್ಸಂಜೆ ತನಕ ಎಲ್ಲಾ ವಿಧ ಆಹಾರ ಪಾನೀಯಗಳನ್ನೂ ಸತಿ-ಪತಿ ದೈಹಿಕ ಸಂಬಂಧವನ್ನೂ ವರ್ಜಿಸಬೇಕಾಗಿದೆ. ಆದರೆ, ಶರೀರಕ್ಕೆ ಅನಾವಶ್ಯಕವಾದ ಪೀಡೆಗಳುಂಟಾಗದಿರಲಿಕ್ಕಾಗಿ ಮುಂಜಾನೆಗೆ ಮುಂಚೆ ಏನಾದರೂ ಆಹಾರವನ್ನು ಸೇವಿಸಬೇಕಾಗಿದೆ. ಮಾತ್ರವಲ್ಲ. ಮುಂಜಾನೆಗೆ ಮೊದಲು ಆಹಾರವನ್ನೇನೂ ಸೇವಿಸದೆ ನಿರಂತರ ಇಪ್ಪತ್ತನಾಲ್ಕು ಗಂಟೆಗಳ ದೀರ್ಘಕಾಲದ ವ್ರತಾನುಷ್ಠಾನವನ್ನು ಇಸ್ಲಾಂ ಅಂಗೀಕರಿಸುವುದಿಲ್ಲ.

ವ್ರತಾನುಷ್ಠಾನದ ಉದ್ದೇಶವನ್ನು ಪವಿತ್ರ ಖುರ್‌ಆನ್ ಹೀಗೆ ವಿವರಿಸುತ್ತದೆ:

لتكبروا الله على ما هدٰكم ولعلكم تشكرون

"ನಿಮಗೆ ಮಾರ್ಗದರ್ಶನ ಮಾಡಿದುದಕ್ಕೆ ನೀವು ಅಲ್ಲಾಹನ ಮಾಹಾತ್ಮ್ಯವನ್ನು ಕೀರ್ತನೆ ಮಾಡಲಿಕ್ಕೂ ಕೃತಜ್ಞತೆಯುಳ್ಳವರಾಗಲಿಕ್ಕೂ ಬೇಕಾಗಿ" (2:186). ಆದ್ದರಿಂದ, ವ್ರತಾನುಷ್ಠಾನದ ಉದ್ದೇಶ ಇದಾಗಿದೆ: ವ್ರತಕಾಲದಲ್ಲಿ ಹಗಲು ಹೊತ್ತು ಭಕ್ಷ್ಯ ವಸ್ತುಗಳನ್ನು ಪಾಕ ಮಾಡುವುದು, ಆಹಾರ ಸೇವನೆ ಮುಂತಾದ ಕ್ರಿಯೆಗಳಿಂದ ವಿರಾಮ ಪಡೆಯುವುದರಿಂದ ಆ ವಿರಾಮ ಕಾಲದಲ್ಲಿ ಮನುಷ್ಯರು ಆಧ್ಯಾತ್ಮಿಕ ವಿಚಾರಗಳಿಗೆ ಹೆಚ್ಚಿನ ಗಮನವನ್ನು ಕೊಟ್ಟು ಅಧಿಕವಾಗಿ ದೇವಸ್ಮರಣೆ ಮಾಡಬೇಕು. ವ್ರತಾನುಷ್ಠಾನದ ಇನ್ನೊಂದು ಉದ್ದೇಶ, ಹಸಿವೆ ನೀರಡಿಕೆಯ ಫಲವಾದ ಕ್ಲೇಶ ಮೂಲಕ ಮನುಷ್ಯರ ತಾವು ಅನುಭವಿಸಿಕೊಂಡಿರುವ ದೇವರ ಕಾರುಣ್ಯಾನುಗ್ರಹಗಳ ಬೆಲೆಯನ್ನರಿಯಲೂ ದೇವರೊಡನೆ ಕೃತಜ್ಞತೆಯುಳ್ಳವರಾಗಲಿಕ್ಕೂ ಪ್ರಾಪ್ತರಾಗುತ್ತಾರೆ ಎಂಬುದಾಗಿದೆ. ಮನುಷ್ಯನು ತನ್ನ ಕೈವಶದಲ್ಲಿರುವ ವಸ್ತುವನ್ನು ಅಷ್ಟು ಲೆಕ್ಕಿಸುವುದಿಲ್ಲ. ಆದರೆ ಅದು ತನಗೆ ನಷ್ಟವಾಗುವಾಗ ಅವನು ಅದರ ಬೆಲೆ ತಿಳಿಯುತ್ತಾನೆ. ಕಣ್ಣುಗಳು ದೇವರ ಒಂದು ಮಹಾನುಗ್ರಹವೆಂಬುದರ ಕುರಿತು ಅಧಿಕಾಂಶ ಜನರು ತಿಳಿದುಕೊಂಡಿರುವುದಿಲ್ಲ. ಆದರೆ ಅವು ತಮಗೆ ನಷ್ಟವಾಗುವಾಗ ಅವರು ಅವುಗಳ ಮಹಿಮೆಯನ್ನು ತಿಳಿಯುತ್ತಾರೆ. ಅದೇ ಪ್ರಕಾರ. ಒಬ್ಬನು ವ್ರತಕಾಲದಲ್ಲಿ ಎಲ್ಲಾ ವಿಧ ಭೋಜ್ಯ ವಸ್ತುಗಳನ್ನು ವರ್ಜಿಸಿ ಹಸಿವೆಯ ಉಗ್ರತೆಯನ್ನು ಅನುಭವಿಸುವಾಗ ದೇವರು ತನಗೆ ನೀಡಿರುವ ಸುಖ ಸೌಕರ್ಯಗಳ ಕುರಿತು ಅವನು ಚಿಂತಿಸಿ ಅಂತಹ ಸುಖಜೀವಿತವನ್ನು ಕ್ಷುಲ್ಲಕವೂ ಅನಾವಶ್ಯಕವೂ ಆದ ಕಾರ್ಯಗಳಲ್ಲಿ ವ್ಯಯಿಸದೆ ಉತ್ತಮ ಹಾಗೂ ಉಪಕಾರ ಪ್ರದವಾದ ಕಾರ್ಯಗಳಿಗಾಗಿ ವಿನಿಯೋಗಿಸಬೇಕೆಂದು ಮನಗಾಣಲು ತೊಡಗುವನು.

ಮತ್ತೂ ವ್ರತಾನುಷ್ಠಾನದ ಉದ್ದೇಶದ ಕುರಿತು ಅಲ್ಲಾಹು ಹೇಳುತ್ತಾನೆ : لعلكم تتقون

“ನೀವು ‘ತಖ್‌ವಾ’ ಉಳ್ಳವರಾಗಲಿಕ್ಕಾಗಿ” (2 : 184). ‘ತಖ್‌ವಾ’ ಎಂಬ ಪದವು ‘ದುಃಖದಿಂದ ವಿಮುಕ್ತಿ, ಪಾಪದಿಂದ ವಿಮುಕ್ತಿ, ಆತ್ಮೋನ್ನತಿ’ ಎಂಬೀ ಮೂರು ಅರ್ಥಗಳಲ್ಲಿ ಪವಿತ್ರ ಖುರ್‌ಆನಿನಲ್ಲಿ ಪ್ರಯೋಗಿಸಲಾಗಿದ್ದು, ವ್ರತವು ಈ ಮೂರು ರೀತಿಯ ಫಲಗಳನ್ನು ಉಂಟು ಮಾಡುತ್ತದೆ. ವ್ರತವು ಮನುಷ್ಯನ ಮೇಲೆ ಕ್ಲೇಶಭಾರವನ್ನು ಹೊರಿಸುತ್ತಿರುವುದರಿಂದ, ಅದು ಮನುಷ್ಯನನ್ನು ಕ್ಲೇಶದಿಂದ ವಿಮೋಚಿಸುವುದೆಂದು ಹೇಳುವುದು ಪ್ರಥಮ ಶ್ರವಣದಲ್ಲಿ ಒಂದು ವಿರೋಧೋಕ್ತಿಯಾಗಿ ತೋರಬಹುದು. ಆದರೆ ತುಸು ಚಿಂತಿಸುವುದಾದರೆ, ವ್ರತವು ಮನುಷ್ಯರಿಗೆ ಸಮುದಾಯ ಕ್ಷೇಮವನ್ನು ನೆಲೆನಿಲ್ಲಿಸಲಿಕ್ಕಿರುವ ಗುಣಪಾಠಗಳನ್ನು ನೀಡಿರುವುದಾಗಿ ಕಾಣಬಹುದು.

ಅದು ನೀಡುವ ಒಂದನೆಯ ಪಾಠ, ಎಂದೂ ಹಸಿವೆಯನ್ನು ಅನುಭವಿಸದ ಒಬ್ಬ ಧನಿಕನಿಗೆ ಪದೇ ಪದೇ ಹೊಟ್ಟೆಗಿಲ್ಲದೆ ದಿನಗಳೆಯುವ ತನ್ನ ದರಿದ್ರ ಸಹೋದರರ ಕ್ಲೇಶಗಳ ಕುರಿತು ಅರಿಯಲು ಸಾಧ್ಯವಿಲ್ಲವಾದರೂ ಆತನು ವ್ರತವನ್ನನುಷ್ಠಿಸುವುದರಿಂದ ಆತನಿಗೆ ಹಸಿವೆಯ ಕಠಿಣತೆ ಅನುಭವವಾಗಿ, ಬಡ ಜನರು ಅನುಭವಿಸುವ ಕಷ್ಟತೆಗಳ ಬಗ್ಗೆ ತಿಳಿಯುವಂತಾಗುತ್ತದೆಂಬುದಾಗಿದೆ. ತನ್ನ ಈ ಅನುಭವವು ಆತನ ಮನಸ್ಸಿನಲ್ಲಿ ಬಡವರ ಮೇಲೆ ದಯೆ ಹುಟ್ಟುವಂತೆ ಮಾಡಿ, ಅದು ಅವರ ಸ್ಥಿತಿಯನ್ನು ಸುಧಾರಿಸಲಿಕ್ಕಾಗಿ ಬೇಕಾದ ಏರ್ಪಾಡುಗಳನ್ನು ಮಾಡುವರೆ ಆತನಿಗೆ ಪ್ರೇರಣೆ ನೀಡುತ್ತದೆ. ಇದರ ಫಲವಾಗಿ ಸಮುದಾಯದ ಕ್ಷೇಮವೂ ರಕ್ಷಣೆಯೂ ಉತ್ತಮಗೊಳ್ಳುತ್ತದೆ. ಸಮುದಾಯದ ಕ್ಷೇಮ ವ್ಯಕ್ತಿಗಳ ಕ್ಷೇಮವೆಂಬುದು ಸುವ್ಯಕ್ತವಷ್ಟೇ.

ವ್ರತದಿಂದ ಲಭ್ಯವಾಗುವ ಮತ್ತೊಂದು ಪಾಠ **ಇದಾಗಿದೆ:** ಇಸ್ಲಾಂ ಅದರ ಅನುಯಾಯಿಗಳು ಆಲಸಿಗರೂ ಉದಾಸೀನರೂ ಕ್ಲೇಶಾನುಭವಗಳನ್ನು ಸಹಿಸಿದವರೂ ಆಗಿರಲಿಕ್ಕೆ ಇಷ್ಟಪಡುವುದಿಲ್ಲ. ಬದಲು, ಅಗತ್ಯ ಬಿದ್ದರೆ ಅವರು ಎಲ್ಲಾ ತರ ಕಷ್ಟಗಳನ್ನು ಸಹಿಸಲಿಕ್ಕೆ ಸಿದ್ಧರೂ ಶಕ್ತರೂ ಆಗಿರಬೇಕೆಂದು ಅದು ಉದ್ದೇಶಿಸುತ್ತದೆ. ವ್ರತವು ಮುಸ್ಲಿಮರಿಗೆ ಹಸಿವೆ ಬಾಯಾರಿಕೆಗಳನ್ನು ಸಹಿಸಲಿಕ್ಕೂ ಎಲ್ಲಾ ಇಚ್ಛೆಗಳನ್ನು ನಿಗ್ರಹಿಸಲಿಕ್ಕೂ ತರಬೇತಿ ನೀಡುತ್ತದೆ. ಇಸ್ಲಾಮಿನ ಈ ಆಜ್ಞೆಯನ್ನು ಸರಿಯಾಗಿ ಅನುಸರಿಸುವವರು ಎಂದಿಗೂ ಆಲಸಿಗರೂ ಸುಖಲೋಲುಪರೂ ಆಗಲಿಕ್ಕಿಲ್ಲ.

ವ್ರತಾನುಷ್ಠಾನದ ಇನ್ನೊಂದು ಪ್ರಯೋಜನವು ಅದು ಮನುಷ್ಯನನ್ನು ಪಾಪದಿಂದ ಮುಕ್ತಿಗೊಳಿಸುತ್ತದೆ ಎಂಬುದಾಗಿದೆ. ಪಾಪವು ಶಾರೀರಿಕವಾದ ಭೋಗಾಸಕ್ತಿಯಿಂದ ಉತ್ಪನ್ನವಾಗುತ್ತದೆ. ಮನುಷ್ಯನಿಗೆ ಒಂದು ಅಭ್ಯಾಸ ಅಂಟಿಹೋದರೆ ಮತ್ತೆ ಅದನ್ನು ಬಿಟ್ಟುಬಿಡಲಿಕ್ಕೆ ಬಹಳ ಪ್ರಯಾಸಕರವೆಂಬುದು ಸುವಿದಿತ. ಆದರೆ ಒಬ್ಬನು ತನ್ನ ಅಭ್ಯಾಸವನ್ನಾಗಲಿ ಸಂಪ್ರದಾಯವನ್ನಾಗಲಿ ಇಷ್ಟಾನುಸಾರ ತೊರೆಯಲಿಕ್ಕೆ ಶಕ್ತನಾಗಿಬಿಟ್ಟರೆ ಅವನು ಎಂದಿಗೂ ಅದರ ಗುಲಾಮನಾಗಲಾರ. ತನ್ನನ್ನು ಕೆಲವೊಮ್ಮೆ ಪಾಪಕ್ಕೆ ಪ್ರೇರೇಪಿಸುವಂತಹ ಲೌಕಿಕವಾದ ಸುಖ ಭೋಗಗಳನ್ನೆಲ್ಲಾ ದೇವ ಸಂಪ್ರೀತಿಗಾಗಿ ಒಂದು ಮಾಸಕಾಲವಿಡೀ ಪರಿತ್ಯಜಿಸಿ, ಇಚ್ಛಾನಿರೋಧವನ್ನೂ ‘ಆತ್ಮ ನಿಯಂತ್ರಣವನ್ನೂ ಅಭ್ಯಾಸ ಮಾಡಿದವನಿಗೆ ಪಾಪಕರವಾದ ಪ್ರೇರಣೆಗಳನ್ನು ಸುಲಭದಲ್ಲಿ ಸೋಲಿಸಲು ಸಾಧ್ಯವಿದೆ.

ವ್ರತಾನುಷ್ಠಾನದಿಂದ ಉಂಟಾಗುವ ಮತ್ತೊಂದು ಫಲ ಇದಾಗಿದೆ: ರಮಝಾನ್ ಮಾಸದಲ್ಲಿ ವ್ರತಾನುಷ್ಠಾನಿ ರಾತ್ರಿಯ ಅಪರಾಂಶದಲ್ಲಿ ‘ಸಹ್ರಿ’ ಉಣ್ಣಲು ಏಳಬೇಕಾಗುವುದರಿಂದ, ಅವನಿಗೆ ತನ್ನನ್ನು ಆತ್ಮೋನ್ನತಿಯ ಮಾರ್ಗದಲ್ಲಿ ಶೀಘ್ರಗಮನ ಮಾಡಿಸುವ ಪ್ರಾರ್ಥನೆ ಮತ್ತು ಆರಾಧನೆ ಮಾಡಲಿಕ್ಕೆ ಹೆಚ್ಚಿನ ಸಂದರ್ಭ ದೊರೆಯುತ್ತದೆ. ಹಾಗೆ ಅವನು ತನ್ನ ಸುಖ ಸೌಕರ್ಯಗಳನ್ನು ದೈವಾಜ್ಞೆಗಾಗಿ ಬಲಿಯರ್ಪಿಸುವಾಗ ದೇವರು ಅವನ ಆತ್ಮವನ್ನು ಬಲಗೊಳಿಸಿ ತನ್ನ ಸಮೀಪಕ್ಕೆ ತರುತ್ತಾನೆ.

# ★ ಪೋಪರಿಗೆ ಸ್ವಾಗತ-ಇಸ್ಲಾಮಿಗೆ ಆಮಂತ್ರಣ ★

ಕೆಥೋಲಿಕರ ಪರಮೋಚ್ಚ ಧರ್ಮಗುರು ಪೋಪ್ ಜಾನ್ ಪೌಲ್ II ಅವರು ಈ ಕಳೆದ ಫೆಬ್ರುವರಿ ತಿಂಗಳಲ್ಲಿ ಮಂಗಳೂರಿಗೆ ಭೇಟಿ ನೀಡಿದ ವೇಳೆ ಅಹ್ಮದಿಯೂ ಸಂಘಟನೆಯ ವತಿಯಿಂದ ಅವರಿಗೆ ಸ್ವಾಗತ ಬಯಸಿ ಹಾಗೂ ಕ್ರೈಸ್ತ ಬಾಂಧವರನ್ನು ಇಸ್ಲಾಂ ಧರ್ಮದ ಸತ್ಯ ಸಂದೇಶದ ಕಡೆಗೆ ಆಮಂತ್ರಿಸಿಕೊಂಡು ವಾರ್ತಾ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು.* ಈ ಪ್ರಕಟಣೆಯನ್ನು ಓದಿದ ಕ್ರೈಸ್ತ ಮಿತ್ರರಲ್ಲಿ ಕೆಲವರು ತಮ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿಕೊಂಡು ನಮಗೆ ಪತ್ರ ಬರೆದಿರುತ್ತಾರೆ. ಪತ್ರಗಳಲ್ಲಿ ಕೆಲವು ನಮ್ಮನ್ನು ಆಕ್ಷೇಪಿಸಿ ಕೊಂಡು ಬರೆದುದಾಗಿವೆ. ಆದರೆ, ಸತ್ಯಾನ್ವೇಷಿಗಳಾದ ಕೆಲವು ಕ್ರೈಸ್ತ ಮಿತ್ರರು ಇಸ್ಲಾಂ ಧರ್ಮ ಹಾಗೂ ಅಹ್ಮದಿಯೂ ಸಂಘಟನೆಯ ಕುರಿತು ತಿಳಿಯಲು ಇಚ್ಛಿಸಿ ಆ ಬಗ್ಗೆ ಹೆಚ್ಚಿನ ವಿವರಗಳನ್ನು ತಿಳಿಸುವಂತೆ ನಮ್ಮನ್ನು ಕೇಳಿಕೊಂಡಿರು ತ್ತಾರೆ. ನಮಗೆ ಬಂದಿರುವ ಎಲ್ಲಾ ಪತ್ರಗಳಿಗೂ ಉತ್ತರಗಳನ್ನು ಬರೆದು ಆಯಾ ವ್ಯಕ್ತಿಗಳಿಗೆ ರವಾನಿಸಲಾಗಿದೆ. ನಮ್ಮ ಓದುಗರ ಅವಗಾಹನೆಗಾಗಿ ಅವುಗಳನ್ನು "ಯುಗರಶ್ಮಿ"ಯಲ್ಲಿ ಪ್ರಕಟಿಸಬೇಕೆಂಬುದು ನಮ್ಮ ಬಯಕೆಯಾಗಿತ್ತು. ಆದರೆ, ಎಲ್ಲಾ ಪತ್ರಗಳಿಗೂ ನೀಡಿದ ಉತ್ತರಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲು ಸಾಧ್ಯವಾಗದ ಕಾರಣ ಮಂಗಳೂರಿನ ಓರ್ವ ಕ್ರೈಸ್ತ ಬಂಧು ನಮಗೆ ಬರೆದ ಪತ್ರಕ್ಕೆ ನೀಡಲಾದ ಉತ್ತರವನ್ನು ಇಲ್ಲಿ ಪ್ರಕಟಿಸುತ್ತೇವೆ. ಅವರು ಬರೆದ ಪತ್ರದ ಕೊನೆಯಲ್ಲಿ ಎರಡು ಪ್ರಶ್ನೆಗಳನ್ನು ಕೇಳಿದ್ದಾರೆ. 1) ಇಸ್ಲಾಂ ಧರ್ಮದ ವ್ಯವಸ್ಥಾಪಕರು ಯಾರು? ಈ ಹೆಸರು ಧರ್ಮಕ್ಕೆ ಹೇಗೆ ಬಂತು ಮತ್ತು ಯಾವಾಗದಿಂದ? 2) ಅಹ್ಮದಿಯೂ ಮುಸ್ಲಿಂ ಧರ್ಮದ ವ್ಯವಸ್ಥಾಪಕರು ಯಾರು? ಈ ಹೆಸರು ಎಲ್ಲಿಂದ ಉಪಯುಕ್ತವಾಯಿತು?

ಈ ಪ್ರಶ್ನೆಗಳಿಗೆ ನೀಡುವ ಉತ್ತರವು ಇಸ್ಲಾಂ ಹಾಗೂ ಅಹ್ಮದಿಯೂ ಸಂಘಟನೆಯ ಪರಿಚಯವನ್ನು ತಿಳಿಯ ಲಿಚ್ಛಿಸುವ ಇತರ ಅನ್ವೇಷಕರಿಗೂ ಗುಣಕರವಾಗಿರಲಿಯೆಂದು ಉತ್ತರವನ್ನು ಸಾಧ್ಯವಾದ ಮಿತಿಯೊಳಗೆ ಸ್ವಲ್ಪ ವಿಸ್ತಾರವಾಗಿಯೇ ಬರೆದಿದ್ದೇವೆ. ಓದುಗರು ಪ್ರಯೋಜನ ಪಡೆಯುವರೆಂದು ಭಾವಿಸುತ್ತೇವೆ.

—ಎಂ. ಪಿ. ಇಬ್ರಾಹಿಂ
ಪ್ರಚಾರ ಕಾರ್ಯದರ್ಶಿ, ಅಹ್ಮದಿಯಾ ಮುಸ್ಲಿಂ ಮಿಶನ್,
10-23-1008 ಅನ್ಸಾರಿ ರಸ್ತೆ, ಮಂಗಳೂರು–1.

ಪ್ರಿಯ ಬಂಧು,

ಪೋಪ್‌ರವರು ಭಾರತಕ್ಕೆ ಆಗಮಿಸಿದ ವೇಳೆ ನಾವು ಪತ್ರಿಕೆಗಳಲ್ಲಿ ಪ್ರಕಟಿಸಿದ, ಇಸ್ಲಾಂ ಧರ್ಮ ಸಂದೇಶದ ಕಡೆಗೆ ಕ್ರೈಸ್ತ ಬಾಂಧವರಿಗೆ ಆಮಂತ್ರಣದ ಕುರಿತು ನಿಮ್ಮ ಪತ್ರದಲ್ಲಿ ಪ್ರತಿಪಾದಿಸಿದ್ದೀರಿ. ಯೇಸು ಕ್ರಿಸ್ತರನ್ನು ಜಗದೊಡೆಯನಾದ ಏಕ ಪರಮಾತ್ಮನ ಒಬ್ಬ ಸತ್ಯ ದೂತರೆಂದು ನಂಬುವ ನಾವು ಆ ಸತ್ಯ ಪ್ರವಾದಿ ಯವರು ಪ್ರವಾದಿತ್ವ ಶೃಂಖಲೆಯ ತನ್ನ ನಂತರದ ಕೊಂಡಿಯಾದ ಮುಹಮ್ಮದ್ ಪೈಗಂಬರರ ಕುರಿತು ಭವಿಷ್ಯ ನುಡಿದಿರುವುದನ್ನೂ ಆ ಪ್ರಕಾರವೇ ಆಗತರಾದ ದೇವರ ಸತ್ಯ ಪ್ರವಾದಿಯಾದ ಮುಹಮ್ಮದ್ ಪೈಗಂಬರರ ಸಂದೇಶದ ಬಗ್ಗೆಯೂ ಕ್ರೈಸ್ತ ಬಾಂಧವರಿಗೆ ತಿಳುವಳಿಕೆ ನೀಡುವುದು ನಮ್ಮ ಕರ್ತವ್ಯವೆಂದು ಭಾವಿಸಿರುವು ದರಿಂದಲೇ ನಾವು ಆ ರೀತಿ ಮಾಡಿದ್ದೇವೆ. ಆ ನಿಮಿತ್ತ ವಾಗಿ ಯಾರಾದರೂ ಕ್ರೈಸ್ತ ಮಿತ್ರರು ಮುಹಮ್ಮದ್ ಪೈಗಂಬರರ ಸಂದೇಶದ ಕಡೆಗೆ ಗಮನ ಹರಿಯಿಸಲು ಪ್ರೇರಿತರಾದರೆ ಹಾಗೂ ಸತ್ಯ ಪಥದತ್ತ ಆಕರ್ಷಿತರಾದರೆ ನಮ್ಮ ಶ್ರಮವು ಸಾರ್ಥಕವಾಯಿತೆಂದು ಭಾವಿಸುತ್ತೇವೆ. ತನ್ನ ನಂತರ ದೇವರ ಸಂದೇಶವಾಹಕರಾಗಿ ಆಗಮಿಸ ಲಿರುವ ಮುಹಮ್ಮದ್ ಪೈಗಂಬರರ ಕುರಿತು ಯೇಸು ಕ್ರಿಸ್ತರು ಸ್ಪಷ್ಟವಾಗಿ ಭವಿಷ್ಯ ನುಡಿದಿದ್ದಾರೆ. ಈ ಭವಿಷ್ಯ

* ಇದೇ ಸಂಚಿಕೆಯ ಬೇರೆಡೆಯಲ್ಲಿ ಇದರ ಪೂರ್ಣಪಾಠವನ್ನು ಕೊಡಲಾಗಿದೆ. —ಸಂ.

ವಾಣಿಗಳ ಕೆಲವು ಅಂಶಗಳು ಬೈಬಲ್‌ನಲ್ಲಿ ಈಗಲೂ ಹಲವು ಕಡೆಗಳಲ್ಲಿ ಕಾಣಸಿಗುತ್ತವೆ. ಅಂತಿರುವಾಗ ಮುಹಮ್ಮದ್ ಪೈಗಂಬರರ ದೌತ್ಯ ಹಾಗೂ ಇಸ್ಲಾಂ ಧರ್ಮ ಸಂದೇಶದ ಸತ್ಯತೆಯನ್ನು ಕಂಡುಕೊಳ್ಳಲು, ಯೇಸುಕ್ರಿಸ್ತರನ್ನು ದಿವ್ಯಾತ್ಮರೆಂದು ನಂಬುವ ಜನರಿಗೆ ಸುಲಭ ಸಾಧ್ಯವಾಗಬಹುದಲ್ಲವೇ?

ನಿಮ್ಮ ಪತ್ರದಲ್ಲಿ ನೀವು ಕೇಳಿರುವ ಎರಡು ಪ್ರಶ್ನೆಗಳಿಗೆ ನೇರವಾಗಿ ಉತ್ತರಿಸುವ ಮೊದಲು ಕೆಲವು ಪ್ರಧಾನ ವಿಷಯಗಳನ್ನು ಹೇಳಬೇಕಾಗಿದೆ. ಈ ಪತ್ರ ದೀರ್ಘವಾಗುವುದೆಂಬ ಭಯದಿಂದ ಬಹಳ ಚುಟುಕಾಗಿಯೇ ಬರೆಯುತ್ತೇವೆ.

ಈ ಸಮಸ್ತ ಸಂಸಾರಕ್ಕೆ ಒಡೆಯನಾಗಿ ಒಬ್ಬ ದೇವರಿದ್ದಾನೆಂಬುದು ಎಲ್ಲಾ ಧರ್ಮ ವಿಶ್ವಾಸಿಗಳ ನಂಬಿಕೆಯಾಗಿದೆಯಷ್ಟೆ. ಅವನು ಏಕ ಪರಮಾತ್ಮನಾಗಿರುತ್ತಾನೆ. ಸಮಸ್ತವನ್ನೂ ಸೃಷ್ಟಿಸಿದವನು ಅವನು. ದೇವರು, ಮನುಷ್ಯ ಸೃಷ್ಟಿಯ ಉದ್ದೇಶ, ದೇವಸಂದೇಶಗಳ ಅವತರಣೆ ಇತ್ಯಾದಿ ವಿಷಯಗಳ ಬಗ್ಗೆ ಮುಸ್ಲಿಮರ ಮತ್ತು ಕ್ರೈಸ್ತರ ವಿಶ್ವಾಸಗಳು ಹೆಚ್ಚು ಕಡಿಮೆ ಸಮಾನವಾದವು ಎಂದು ಭಾವಿಸುತ್ತೇವೆ. ಈ ಲೋಕದಲ್ಲಿ ದೇವನು ಮನುಷ್ಯನನ್ನು ಸೃಷ್ಟಿಸಿದನು ಹಾಗೂ ಲೋಕದಲ್ಲಿರುವ ಇತರ ಎಲ್ಲವನ್ನೂ ಮನುಷ್ಯನ ಒಳಿತಿಗೂ ಉಪಯೋಗಕ್ಕೂ ಸೃಷ್ಟಿಸಿದ್ದಾನೆ. ಮನುಷ್ಯನನ್ನು ಪರಮಾತ್ಮನು ಯಾಕಾಗಿ ಸೃಷ್ಟಿಸಿದ? ಏನಾದರೂ ಮಹತ್ವಪೂರ್ಣವಾದ ಉದ್ದೇಶ ಇರಲೇಬೇಕು. ಮನುಷ್ಯರು ದೇವರ ಕುರಿತು ತಿಳುವಳಿಕೆ ಹೊಂದಿ ಆ ಏಕ ಪರಮಾತ್ಮನನ್ನು ಮಾತ್ರವೆ ಆರಾಧಿಸಬೇಕೆಂಬುದೂ ಅವನು ತೋರಿಸಿಕೊಡುವ ಸತ್ಪಥದಲ್ಲಿ ಚರಿಸಿ ಮುಕ್ತಿಗಳಿಸಬೇಕೆಂಬುದೂ ಮನುಷ್ಯ ಸೃಷ್ಟಿಯ ಉದ್ದೇಶವಾಗಿದೆ. ಮನುಷ್ಯನಿಗೆ ತನ್ನ ಸೃಷ್ಟಿಯ ಉದ್ದೇಶವನ್ನು ತಿಳಿಸಿಕೊಡಲು ಹಾಗೂ ಒಳಿತು ಮತ್ತು ಕೆಡುಕುಗಳ ಕುರಿತು ಅವರಿಗೆ ಸರಿಯಾದ ಜ್ಞಾನವನ್ನು ನೀಡಲು ಪರಮಾತ್ಮನು ಸ್ವೀಕರಿಸಿದ ವಿಧಾನವೇ ಪ್ರವಾದಿತ್ವವೆಂಬುದು. ಅಂದರೆ, ಜನರೆಡೆಯಲ್ಲಿ ಅತ್ಯಂತ ಸಾತ್ವಿಕ ಪುರುಷನೊಬ್ಬನನ್ನು ಆರಿಸಿ ಆ ವ್ಯಕ್ತಿಯೊಂದಿಗೆ ಜಗದೊಡೆಯನಾದ ಪರಮಾತ್ಮನು ನೇರವಾಗಿ ಮಾತನಾಡುತ್ತಾನೆ. ತನ್ನ ಇಂಗಿತವನ್ನು ಆ ವ್ಯಕ್ತಿಗೆ ತಿಳಿಸಿ ಅದನ್ನು ಆ ಕಾಲದ ಎಲ್ಲ ಜನರಿಗೂ ಬೋಧಿಸುವಂತೆ ನಿರ್ದೇಶಿಸುತ್ತಾನೆ. ಈ ರೀತಿ ದಿವ್ಯ ಸಂದೇಶವಾಹಕರಾಗಿ ನಿಯೋಜಿಸಲ್ಪಡುವವರೇ ಪ್ರವಾದಿಗಳು. ಪ್ರವಾದಿಗಳು ದೇವರ ಅಸ್ತಿತ್ವದ ಬಗ್ಗೆಯೂ ದೇವೋಪಾಸನೆಯ ಕುರಿತೂ ಮನುಷ್ಯರು ಅನುಸರಿಸಬೇಕಾದ ಉತ್ತಮ ನಡವಳಿಕೆಗಳ ಬಗ್ಗೆಯೂ ಜನರಿಗೆ ಬೋಧಿಸುತ್ತಾರೆ. ಈ ಪ್ರವಾದಿತ್ವ ಶೃಂಖಲೆಯು ಮನುಷ್ಯ ಸೃಷ್ಟಿಯೊಂದಿಗೇ ಆರಂಭವಾಗಿದೆ. ಆಯಾ ಕಾಲದ ಮನುಷ್ಯರ ಸಂಸ್ಕೃತಿಗೆ ಅನುಯೋಜ್ಯವಾಗಿ, ಜನರ ದೇಶ-ಕಾಲ-ವೈಜ್ಞಾನಿಕ ಅಭಿವೃದ್ಧಿ ಮೊದಲಾದುವುಗಳಿಗೆ ಹೊಂದುವ ರೀತಿಯಲ್ಲಿ ದೇವರು ತನ್ನ ಸಂದೇಶವಾಹಕರಾದ ಪ್ರವಾದಿಗಳನ್ನು ವಿಭಿನ್ನ ಕಾಲದಲ್ಲಿ ಬೇರೆ ಬೇರೆ ದೇಶಗಳಲ್ಲಿ ಕಳುಹಿಸಿರುತ್ತಾನೆ. ಮನುಷ್ಯ ವಂಶವು ಇಂದಿನ ಈ ನಾಗರಿಕ ಯುಗವನ್ನು ತಲಪಬೇಕಾದರೆ ಎಷ್ಟೋ ಪರಿವರ್ತನೆಗಳ ಘಟ್ಟಗಳನ್ನು ಹಾದು ಬಂದಿದೆಯಲ್ಲವೇ. ಆದುದರಿಂದಲೇ ದೇವನು ಆಯಾ ಕಾಲದ ಜನರಿಗೆ ಅರ್ಥೈಸಲು ಸಾಧ್ಯವಾಗುವಷ್ಟರ ಮಟ್ಟಿಗಿರುವ ಧಾರ್ಮಿಕ ವಿಧಿವಿಧಾನಗಳನ್ನು ತನ್ನ ಆಯಾ ಕಾಲದ ದೂತರ ಮುಖಾಂತರ ಜನರಿಗೆ ತಿಳಿಸುತ್ತಿದ್ದನು. ಮನುಷ್ಯ ವಂಶವನ್ನು ಸಾವಧಾನದಿಂದ ಅಭಿವೃದ್ಧಿಗೊಳಿಸಿ ನಾಗರಿಕತೆಯಲ್ಲೂ ಧಾರ್ಮಿಕತೆಯಲ್ಲೂ ಅವರನ್ನು "ಪೂರ್ಣತ್ವದ ಒಂದು ಪರಮೋಚ್ಚ ಪದವಿ"ಗೆ ಕೊಂಡೊಯ್ಯುವುದು ಹಾಗೂ ಅವರನ್ನು "ಪರಿಪೂರ್ಣ ಮಾನವ"ರನ್ನಾಗಿ ಮಾಡುವುದೇ ಈ ಬೃಹತ್ ಯೋಜನೆಯ ಉದ್ದೇಶವಾಗಿರುತ್ತದೆ. ಈ ಲೋಕದಲ್ಲಿ ಅವತರಿಸಿದ ಎಲ್ಲಾ ಪ್ರವಾದಿಗಳೂ ಆಯಾ ಕಾಲದ ತಮ್ಮ ಅನುಯಾಯಿಗಳಿಗೆ ಈ ವಿವರವನ್ನು ತಿಳಿಸಿರುತ್ತಾರೆ. ಈ ಯೋಜನೆಯ ಪ್ರಕಾರ ತನಗೆ ಮೊದಲು ಅವತೀರ್ಣರಾದ ಪ್ರವಾದಿಗಳ ಬಗ್ಗೆಯೂ ತನ್ನ ನಂತರ ಬರಲಿರುವ ಸಂದೇಶವಾಹಕರ ಕುರಿತೂ ಎಲ್ಲಾ ಪ್ರವಾದಿಗಳೂ ಪ್ರಸ್ತಾಪಿಸಿರುತ್ತಾರೆ. ಈ ಜಗತ್ತಿನಲ್ಲಿ ಅವತರಿಸಿದ ಎಲ್ಲಾ ದಿವ್ಯ ಸಂದೇಶವಾಹಕರೂ ಅವರು ಯಾವುದೇ ಕಾಲದಲ್ಲಿ, ಯಾವುದೇ ದೇಶದಲ್ಲಿ ಅವತರಿಸಲಿ, ಅವರೆಲ್ಲರೂ ಈ ಪ್ರವಾದಿತ್ವ ಶೃಂಖಲೆಯ ಒಂದೊಂದು ಕೊಂಡಿಗಳಾಗಿರುತ್ತಾರೆ. ಈ ರೀತಿಯಲ್ಲಿ ನೋಡುವುದಾದರೆ, ಈ ಎಲ್ಲಾ ಪ್ರವಾದಿಗಳೂ ಬೋಧಿಸಿದ ತತ್ವಗಳ ತಿರುಳೂ ಒಂದೇ ಆಗಿರಬೇಕು. ಆದರೆ, ಆಯಾ ಕಾಲಕ್ಕೆ, ಆ ಕಾಲದ ಜನರ

ತಿಳುವಳಿಕೆಗೆ ಹೊಂದಿಕೊಂಡು ಅದರ ರೂಪ ಮಾತ್ರ ಬೇರೆ ಬೇರೆಯಾಗಿರಬಹುದು. ಎಲ್ಲಾ ಪ್ರವಾದಿಗಳು ಬೋಧಿಸಿದ ಧರ್ಮಗಳಿಗೂ ನಿಜವಾಗಿಯೂ ಒಂದೇ ಹೆಸರು ಇರಲು ಸಾಧ್ಯ. ಅಥವಾ ಇನ್ನೊಂದು ಪ್ರಕಾರದಲ್ಲಿ ಹೇಳುವುದಾದರೆ, ಮಾನವರನ್ನು ಪರಿಪೂರ್ಣವಾದೊಂದು ಜೀವಿತ ಕ್ರಮದತ್ತ (ಧರ್ಮ ಸಂಹಿತೆಯ ಕಡೆಗೆ) ಕೊಂಡೊಯ್ಯಲು ಅವರನ್ನು ಅಣಿಗೊಳಿಸಿ ಅದಕ್ಕೆ ಪೂರಕವಾದ ಪೋಷಕ ಸಿದ್ಧಾಂತಗಳನ್ನು ಬೋಧಿಸಿದವರೇ ಈ ಎಲ್ಲಾ ಪ್ರವಾದಿಗಳು.

ಹೀಗೆ ಮನುಕುಲದ ಯಾತ್ರೆಯು ಈ ಪ್ರವಾದಿಗಳ ಮೂಲಕವಾಗಿ ಅಧಾರ್ಮಿಕತೆಯಿಂದ ಧಾರ್ಮಿಕತೆಯ ಕಡೆಗೂ ಅನಾಗರಿಕತೆಯಿಂದ ನಾಗರಿಕತೆಯ ಕಡೆಗೂ ಅಂಧಕಾರ ಯುಗದಿಂದ ವೈಜ್ಞಾನಿಕ ಯುಗದ ಕಡೆಗೂ ಬಂದು ತಲಪಿತು. ಮನುಷ್ಯನು ಸಮಾಜ ಜೀವಿಯಾಗ ತೊಡಗಿದ. ರಾಜ್ಯ–ವರ್ಣ–ವರ್ಗವೆಂಬ ವ್ಯತ್ಯಾಸವನ್ನು ಭೇಧಿಸಿ, ಭೌಗೋಳಿಕ ಅಡಚಣೆಗಳನ್ನು ಜಯಿಸಿ ಸಮಸ್ತ ಲೋಕವಾಸಿಗಳೂ ಪರಸ್ಪರ ಸಂಚಾರ ವ್ಯವಹಾರಗಳಲ್ಲಿ ಮುಂದುವರಿಯ ತೊಡಗಿದರು. ಹೀಗೆ, ಸಾರ್ವಲೌಕಿಕವಾದ ಒಂದು ಏಕೀಕರಣವು ಉಂಟಾದಾಗ ಪರಮಾತ್ಮನು ತನ್ನ ಯೋಜನೆಯನ್ವಯ ಸಮಸ್ತ ಜಗತ್ತಿಗೂ ಎಂದೆಂದಿಗೂ ಅನ್ವಯವಾಗುವಂತಹ ಆ ಪರಿಪೂರ್ಣವಾದ ಧರ್ಮ ಸಂಹಿತೆಯನ್ನು ಒಬ್ಬ ಮಹಾನ್ ಪ್ರವಾದಿಯ ಮೂಲಕ ಮನುಷ್ಯ ಕುಲಕ್ಕೆ ನೀಡಿರುತ್ತಾನೆ. ಆ ಧರ್ಮ ಸಂಹಿತೆ ಅಥವಾ ಜೀವನ ಕ್ರಮವೇ "ಇಸ್ಲಾಂ" ಆಗಿರುತ್ತದೆ. ಈ ಸಂದೇಶವನ್ನು ಜನರಿಗೆ ತಲಪಿಸಿಕೊಡಲಿಕ್ಕಾಗಿ ಪರಮಾತ್ಮನು ಚುನಾಯಿಸಿದುದು ಹಝ್ರತ್ ಮುಹಮ್ಮದ್ ಪೈಗಂಬರರನ್ನು. ಮುಹಮ್ಮದ್ ಪೈಗಂಬರರು ಸಮಸ್ತಲೋಕಕ್ಕೆ ಅನ್ವಯವಾಗತಕ್ಕ ಪ್ರವಾದಿಯಾಗಿರುತ್ತಾರೆ. ಅವರಿಗೆ ಮೊದಲು ಈ ಲೋಕದಲ್ಲಿ ಎಷ್ಟೆಲ್ಲಾ ಪ್ರವಾದಿಗಳು ಅವತರಿಸಿರುವರೋ ಅವರೆಲ್ಲರೂ ಇಸ್ಲಾಂ ಧರ್ಮಕ್ಕೆ ಪೂರಕವಾಗುವ ಸಿದ್ಧಾಂತಗಳನ್ನು ಬೋಧಿಸಿರುವರಾದರೂ ಅವರಲ್ಲಿ ಯಾರೊಬ್ಬರ ಪ್ರಬೋಧನೆಯೂ ಸರ್ವ ಮಾನವ ಕುಲಕ್ಕೆ ಅನ್ವಯವಾಗುವ ಸಂದೇಶವಾಗಿರಲಿಲ್ಲ. ಅವುಗಳಲ್ಲಿ ಯಾವುದು ಕೂಡ ಎಂದೆಂದಿಗೂ ಮಾರ್ಪಾಟಿಗೆ ಗುರಿಯಾಗಬಾರದಂತಹ ಸರ್ವ ಸಂಪೂರ್ಣವಾದ ಸಂದೇಶವಾಗಿರಲಿಲ್ಲ. ಅವೆಲ್ಲವುಗಳನ್ನೂ ಸಾಂಕೇತಿಕ ಅರ್ಥದಲ್ಲಿ ಇಸ್ಲಾಂ ಎಂದು ಕರೆಯಬಹುದಾದರೂ ಅವುಗಳು ಆಯಾ ಕಾಲಕ್ಕೂ ದೇಶಕ್ಕೂ ಜನರ ತಿಳಿವಳಿಕೆಗೂ ಅನುಯೋಜ್ಯವಾದ ರೀತಿಯಲ್ಲಿ ಸೀಮಿತವಾಗಿದ್ದವು. ತನಗೆ ಮೊದಲು ಅವತರಿಸಿದ ಪ್ರವಾದಿಗಳೂ ಇಸ್ಲಾಂ ಧರ್ಮವನ್ನು ಪ್ರಬೋಧಿಸಿರುವರೆಂದು ಮುಹಮ್ಮದ್ ಪೈಗಂಬರರು ಹೇಳಿದುದು ಇದೇ ಅರ್ಥದಲ್ಲಿ. ಆದರೆ ಪೂರ್ವಿಕರಾದ ಪ್ರವಾದಿಗಳಲ್ಲಿ ಯಾರೂ ತಮ್ಮ ಧರ್ಮಕ್ಕೆ 'ಇಸ್ಲಾಂ' ಎಂಬುದಾಗಿ ನಾಮಕರಣ ಮಾಡಿದ್ದುದು ಇತಿಹಾಸದಿಂದ ತಿಳಿದು ಬರುವುದಿಲ್ಲ. ಯಾಕೆಂದರೆ, ಅವರು ಬೋಧಿಸಿದ ಇಸ್ಲಾಂ "ಪರಿಪೂರ್ಣ ಇಸ್ಲಾಂ" ಆಗಿರಲಿಲ್ಲ. ಧರ್ಮವು ಪೂರ್ಣವಾದುದು ಮುಹಮ್ಮದ್ ಪೈಗಂಬರರ ಮೂಲಕ ಎಂಬುದಾಗಿ ಖುರ್‌ಆನ್ ಹೇಳುತ್ತದೆ. ಆದುದರಿಂದ ಇಸ್ಲಾಂ ಧರ್ಮ ಸ್ಥಾಪನೆಯು ಪ್ರವಾದಿಯಾದ ಆದಂ ಮೊದಲ್ಗೊಂಡು ನಂತರದ ಎಲ್ಲಾ ಪ್ರವಾದಿಗಳಿಂದಲೂ ಪೋಷಿಸಲ್ಪಟ್ಟು ಮುಹಮ್ಮದ್ ಪೈಗಂಬರರ ಮೂಲಕ ಪರಿಪೂರ್ಣತೆಯನ್ನು ಪಡೆಯಿತು ಎಂದು ಹೇಳುವುದು ಹೆಚ್ಚು ಸರಿಯಾಗಬಹುದು. ಇದರ ಮತ್ತೊಂದು ಅರ್ಥ, ಇಸ್ಲಾಂ ಧರ್ಮವನ್ನು ಅದರ ಪರಿಪೂರ್ಣವಾದ ರೂಪದಲ್ಲಿ ಈ ಲೋಕದಲ್ಲಿ ಸ್ಥಾಪಿಸಿದವರು ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಆಗಿರುತ್ತಾರೆ. ಈ ಕಾರಣಕ್ಕಾಗಿ ಮುಹಮ್ಮದ್ ಪೈಗಂಬರರಿಗೆ "ಖಾತಮುನ್ನಬಿಯ್ಯೀನ್" (ಪ್ರವಾದಿಗಳಲ್ಲಿ ಶ್ರೇಷ್ಠ) ಎಂಬ ಬಿರುದನ್ನು ಪರಮಾತ್ಮನು ನೀಡಿರುವನು.

ಈಗ ನಿಮ್ಮ ಪ್ರಶ್ನೆಗಳ ಕುರಿತು ನೋಡುವ.

1) ನಿಮ್ಮ ಒಂದನೆಯ ಪ್ರಶ್ನೆಗೆ ಉತ್ತರ ಈ ಮೇಲಿನ ವಿವರಣೆ ಇಂದ ಸ್ಪಷ್ಟವಾಗಿರಬಹುದೆಂದು ಭಾವಿಸುತ್ತೇನೆ. ಅಂದರೆ, ಲೋಕಾರಂಭ ಮೊದಲ್ಗೊಂಡು ಅವತರಿಸಿದ ಎಲ್ಲಾ ಪ್ರವಾದಿಗಳೂ ಇಸ್ಲಾಂ ಧರ್ಮ ಸ್ಥಾಪನೆಗೆ ಪೂರಕವಾದ ತತ್ತ್ವಾದರ್ಶಗಳನ್ನು ಆಯಾ ಕಾಲಕ್ಕೆ ಅನುಯೋಜ್ಯವಾದ ರೀತಿಯಲ್ಲಿ ತಮ್ಮ ತಮ್ಮ ಕಾಲದ ಜನರಿಗೆ ಪ್ರಬೋಧಿಸಿದ್ದಾರೆ. ಆದರೆ ಅವ್ಯಾವುದೂ ಪರಿಪೂರ್ಣ ಸ್ವರೂಪದ ಇಸ್ಲಾಂ ಆಗಿರಲಿಲ್ಲ. ಆದುದರಿಂದ ಅವುಗಳಲ್ಲಿ ಯಾವುದನ್ನೂ ಅಕ್ಷರಾರ್ಥದಲ್ಲಿ ಅಥವಾ ಪೂರ್ಣ ಅರ್ಥದಲ್ಲಿ ಇಸ್ಲಾಂ ಎಂದು

ಹೇಳಲಾಗಿಲ್ಲ. ತನ್ನ ನಂತರ ಬರಲಿರುವ ಓರ್ವ ಪ್ರವಾದಿಯ ಕುರಿತು ಭವಿಷ್ಯ ನುಡಿಯುತ್ತಾ ಯೇಸುಕ್ರಿಸ್ತರು, "ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ **ಸಕಲ ವಿಷಯದಲ್ಲೂ ಸತ್ಯಕ್ಕೆ ಸೇರಿಸುವನು**" ಎಂಬುದಾಗಿ ಹೇಳಿದ್ದಾರೆ. ಧರ್ಮವು ಮುಹಮ್ಮದ್ ಪೈಗಂಬರರ ಮೂಲಕ ಪೂರ್ಣಗೊಂಡಿದೆ ಎಂಬುದಾಗಿ ಪವಿತ್ರ ಖುರ್‌ಆನ್ ಘೋಷಿಸುತ್ತದೆ. ಅಂದರೆ ಅದು ಸಕಲ ವಿಷಯದಲ್ಲೂ ಅದರ ಪರಮೋಚ್ಚ ಪದವಿಯನ್ನು ಪಡೆಯಿತು ಎಂದರ್ಥ. ಆದುದರಿಂದಲೇ ಮುಹಮ್ಮದ್ ಪೈಗಂಬರರು ಪ್ರಬೋಧಿಸಿದ ಪೂರ್ಣರೂಪದ ಆ ಧರ್ಮಸಂಹಿತೆಗೆ "ಇಸ್ಲಾಂ" ಎಂಬುದಾಗಿ ಹೆಸರಿಸಲಾಗಿದೆ.

2) ನಿಮ್ಮ ಎರಡನೆಯ ಪ್ರಶ್ನೆಯು ಅಹ್ಮದಿಯೂ ಸಂಘಟನೆಯ ಕುರಿತಾಗಿದ್ದು ಅದರ ಬಗ್ಗೆ ಕೂಡ ತುಸು ವಿವರಣೆಯ ಅಗತ್ಯವಿದೆ. ಲೋಕದಲ್ಲಿ ಅವತೀರ್ಣರಾದ ಪ್ರವಾದಿಗಳನ್ನು ಎರಡು ತರದಲ್ಲಿ ವಿಂಗಡಿಸಬಹುದಾಗಿ ಮತ ಚರಿತ್ರೆಯು ನಮಗೆ ತಿಳಿಸಿಕೊಡುತ್ತದೆ.

ಒಂದನೆಯದಾಗಿ, ಅದುವರೆಗೆ ಅಸ್ತಿತ್ವದಲ್ಲಿರುವ ಧರ್ಮಸಂಹಿತೆಯನ್ನು ಸಂಪೂರ್ಣ ರದ್ದುಗೊಳಿಸಿ ಹೊಸತೊಂದು ಧರ್ಮಶಾಸ್ತ್ರದೊಂದಿಗೆ ಆಗತರಾಗುವ ಪ್ರವಾದಿಗಳು. ಇದಕ್ಕೆ ಕಾರಣ ಆ ಮೊದಲೇ ಅಸ್ತಿತ್ವದಲ್ಲಿದ್ದ ದಿವ್ಯಗ್ರಂಥಗಳು ಕಾಲಕ್ರಮದಲ್ಲಿ ಮಾನವ ಹಸ್ತಕ್ಷೇಪದಿಂದ ಕುಲುಷಿತವಾಗಿ ಅನುಸರಣಾಯೋಗ್ಯವಲ್ಲದಾಗಿ ಪರಿಣಮಿಸುವುದು ಮತ್ತು ಮನುಕುಲವು ಪೂರ್ವಾಧಿಕ ಅಭಿವೃದ್ಧಿಯತ್ತ ಸಾಗಿ ಹೆಚ್ಚು ಸಾರಪೂರ್ಣವಾದ ದಿವ್ಯ ಬೋಧನೆಗಳನ್ನು ಸ್ವೀಕರಿಸಲು ತಯಾರಾದ ಅವಸ್ಥೆಗೆ ಸಾಗಿರುವುದು. ಅಂತಹ ಸಂದರ್ಭಗಳಲ್ಲಿ ಮೊದಲು ಅವತೀರ್ಣಗೊಳಿಸಲಾದ ಧರ್ಮ ಶಾಸ್ತ್ರವನ್ನು ರದ್ದುಗೊಳಿಸಿ ನೂತನವಾದೊಂದು ಧರ್ಮ ಸಂಹಿತೆಯೊಂದಿಗೆ ಒಬ್ಬ ಪ್ರವಾದಿಯನ್ನು ಪರಮಾತ್ಮನು ಕಳುಹಿಸುತ್ತಾನೆ. ಅಂತಹ ಪ್ರವಾದಿಗಳ ಬರುವಿಕೆಯೊಂದಿಗೆ ಮೊದಲು ನೆಲೆಸಿದ್ದ ಧರ್ಮ ಗ್ರಂಥಗಳು ಅಕಾಲಿಕವಾಗುತ್ತವೆ ಮತ್ತು ಹೊಸತೊಂದು ಧರ್ಮಸಂಹಿತೆಯ ಸ್ಥಾಪನೆಯಾಗುತ್ತದೆ. ಈ ರೀತಿ ಧರ್ಮ ಸಂಸ್ಥಾಪನೆ ಮಾಡುವ ಪ್ರವಾದಿಗಳ ವರ್ಗದಲ್ಲಿ ಮಹಾತ್ಮ ಮೋಶೆ (ಮೂಸಾ ಪ್ರವಾದಿ) ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರು ಒಳಪಡುತ್ತಾರೆ. ತನ್ನಂತಹ ಓರ್ವ ಪ್ರವಾದಿಯ ಆವಿರ್ಭಾವವು ತನ್ನ ಸಹೋದರ ಸಮುದಾಯದಲ್ಲಿ ಉಂಟಾಗಲಿರುವುದಾಗಿ ಮಹಾತ್ಮ ಮೋಶೆ ಭವಿಷ್ಯನುಡಿದಿರುವರು (ಧರ್ಮೋಪದೇಶ ಕಾಂಡ 18:18). ತನ್ನಂತಹ ಪ್ರವಾದಿಯೆಂದರೆ-ಪ್ರವಾದಿ ಮೋಶೆಯವರು "ತೋರಾ" (ತೌರಾತ್) ಎಂಬ ಹೊಸತೊಂದು ಧರ್ಮ ಶಾಸ್ತ್ರದೊಂದಿಗೆ ಆಗತರಾದಂತೆ ಹಾಗೂ "ತೋರಾ"ದ ಮೂಲಕ ಅದುವರೆಗೆ ನೆಲೆಸಿದ್ದ ದೈವಿಕ ಗ್ರಂಥವನ್ನು ರದ್ದುಗೊಳಿಸಲಾದ ಪ್ರಕಾರವೇ ತೌರಾತನ್ನೂ ಕೂಡ ರದ್ದುಗೊಳಿಸುವ ಮತ್ತೊಂದು ದಿವ್ಯ ಗ್ರಂಥದೊಂದಿಗೆ ಆಗತರಾಗುವ ಒಬ್ಬ ಧರ್ಮ ಸಂಸ್ಥಾಪಕರಾದ ಪ್ರವಾದಿ ಎಂದರ್ಥ. ಮೋಶೆಯವರ ಸಹೋದರ ಸಮುದಾಯ ಅಂದರೆ–ಇಸ್ರಾಯೀಲ್ಯರ ಸಹೋದರರಾದ ಇಸ್ಮಾಯೀಲ್ಯರ ವಂಶದಲ್ಲಿ ಜನಿಸುವ ಪ್ರವಾದಿ ಎಂದು ತಾತ್ಪರ್ಯ. ಹಝ್ರತ್ ಮೋಶೆಯವರ ಈ ಪ್ರವಾದನವು ತನ್ನ ಬರುವಿಕೆಯೊಂದಿಗೆ ಪೂರ್ತಿಯಾಗಿರುವುದಾಗಿ ಮುಹಮ್ಮದ್ ಪೈಗಂಬರ್ ಘೋಷಿಸಿದ್ದಾರೆ. ಮೋಶೆಯವರ ನಂತರ ಮುಹಮ್ಮದ್ ಪೈಗಂಬರರ ಆವಿರ್ಭಾವದ ವರೆಗೆ ಇಸ್ರಾಯೀಲ್ಯ ವಂಶದಲ್ಲಿ ಅದೆಷ್ಟೋ ಪ್ರವಾದಿಗಳು ನಿಯೋಜಿತರಾಗಿದ್ದರೂ ಧರ್ಮೋಪದೇಶ ಕಾಂಡದಲ್ಲಿ ವಿವರಿಸಲಾದ ಮೇಲಿನ ಭವಿಷ್ಯವಾಣಿಯ ಪೂರ್ತೀಕರಣವು ಮುಹಮ್ಮದ್ ಪೈಗಂಬರ್ ಮಾತ್ರವೇ ಆಗಿದ್ದಾರೆ.

ಈ ರೀತಿ ಧರ್ಮ ಸಂಸ್ಥಾಪನೆಗಾಗಿ ಆವಿರ್ಭವಿಸುವ ಪ್ರವಾದಿಗಳಲ್ಲದೆ ಮತ್ತೊಂದು ವಿಧದ ಪ್ರವಾದಿಗಳೂ ಈ ಲೋಕದಲ್ಲಿ ಅವತರಿಸಿರುವರು. ಮಾತ್ರವಲ್ಲ ಪ್ರವಾದಿಗಳಲ್ಲಿ ಹೆಚ್ಚಿನವರೂ ಈ ಎರಡನೆಯ ವಿಭಾಗಕ್ಕೆ ಸೇರಿದವರಾಗಿದ್ದಾರೆ. ಅವರೆಂದರೆ, ಧರ್ಮ ಸಂಸ್ಥಾಪಕರಾದ ಪ್ರವಾದಿಗಳ ಮೂಲಕ ಸ್ಥಾಪಿತವಾದ ಧರ್ಮ ಸಂಹಿತೆಯಿಂದ, ಅವರ ಮೂಲಕ ಅವತೀರ್ಣಗೊಳಿಸಲಾದ ದಿವ್ಯ ಗ್ರಂಥದ ತತ್ವೋಪದೇಶಗಳಿಂದ ಜನರು ವಿಮುಖರಾಗಿ ಆ ದಿವ್ಯ ಸಂದೇಶದ ಸಾರವನ್ನು ಗ್ರಹಿಸದೆ ಮಾರ್ಗಭ್ರಂಶರಾದಾಗ ಮೊದಲು ನೆಲೆಸಿರುವ ಅದೇ ಧರ್ಮಶಾಸ್ತ್ರದೆಡೆಗೆ ಜನರನ್ನು ಆಹ್ವಾನಿಸಲು ನಿಯೋಜಿಸಲಾಗುವ ಪ್ರವಾದಿಗಳು. ಇಂತಹ ಪ್ರವಾದಿ

ಗಳಿಗೆ ಪರಮಾತ್ಮನಿಂದ ದಿವ್ಯ ಪ್ರಕಟಣೆಗಳು ಲಭಿಸುತ್ತವೆ. ಶುಭವಾರ್ತೆಗಳೂ ಮುನ್ನೆಚ್ಚರಿಕೆಗಳೂ ಅವರ ಮೂಲಕ ಪ್ರಕಟವಾಗುತ್ತವೆ. ಆದರೆ ಧರ್ಮ ಶಾಸ್ತ್ರದಲ್ಲಿ ಯಾವುದೇ ಬದಲಾವಣೆಯನ್ನು ಇವರ ಮೂಲಕ ಮಾಡಲಾಗುವುದಿಲ್ಲ. ಜನರನ್ನು ಧಾರ್ಮಿಕ ತತ್ವಗಳತ್ತ ಆಹ್ವಾನಿಸಿ ಪರಮಾತ್ಮನ ಕುರಿತು ಭಯ ಭಕ್ತಿಯನ್ನು ಬೋಧಿಸಿ ಜನರಲ್ಲಿ ಒಂದು ದಿವ್ಯ ಬೋಧೋದಯವನ್ನುಂಟು ಮಾಡುವುದೇ ಈ ಪ್ರವಾದಿಗಳ ಕೆಲಸವಾಗಿರುತ್ತದೆ. ಪ್ರವಾದಿ ಮೋಶೆಯವರ ನಂತರ ಇಸ್ರಾಯೀಲ್ಯ ವಂಶದಲ್ಲಿ ಅವತರಿಸಿದ ಯೇಸು ಮಸ್ಸೈಯರ ಸಮೇತ ಎಲ್ಲಾ ಪ್ರವಾದಿಗಳೂ ಮೋಶೆಯವರ ಧರ್ಮ ಶಾಸ್ತ್ರವನ್ನೇ ಜನರಿಗೆ ಪ್ರಬೋಧಿಸಲು ಆಗತರಾದ ಈ ಎರಡನೆಯ ವಿಭಾಗಕ್ಕೆ ಸೇರಿದ ಪ್ರವಾದಿಗಳಾಗಿದ್ದಾರೆ. ಇಂತಹ ಪ್ರವಾದಿಗಳ ಬರುವಿಕೆಯ ಕಾಲದಲ್ಲಿ ಆಗ ನೆಲೆಸಿದ್ದ ಧರ್ಮದ ವಕ್ತಾರರಾಗಿ ಅನೇಕ ಪಂಡಿತರೂ ಪುರೋಹಿತರೂ ಇರುತ್ತಾರೆಂಬುದು ನಿಜ. ಆದರೆ, ಅವರೆಲ್ಲರೂ ಧರ್ಮದ ಅಂತರಾರ್ಥವನ್ನರಿಯದ, ಆಧ್ಯಾತ್ಮಿಕತೆಯಿಂದ ದೂರವಾದ ನಾಮಧಾರಿ ಪುರೋಹಿತರು ಮಾತ್ರವಾಗಿರುತ್ತಾರೆ. ಇಂತಹವರ ದುರ್ವ್ಯಾಖ್ಯಾನಗಳಿಂದಲೂ ದುಷ್ಟ ಹಿಡಿತದಿಂದಲೂ ಧರ್ಮ ಶಾಸ್ತ್ರವನ್ನು ಪಾವನಗೊಳಿಸಲಿಕ್ಕಾಗಿ ಪರಮಾತ್ಮನು ದಿವ್ಯ ದೂತರನ್ನು ಮತ್ತೆ ಮತ್ತೆ ಕಳುಹಿಸುತ್ತಾನೆ.

ಹಝ್ರತ್ ಈಸಾ ನಬಿಯವರು (ಯೇಸುಕ್ರಿಸ್ತರು) ಈ ರೀತಿಯ ಪ್ರವಾದಿಗಳಲ್ಲೊಬ್ಬರಾಗಿದ್ದರು. ಅವರು ನೂತನವಾದ ಯಾವುದೇ ಧರ್ಮ ಸಂಹಿತೆಯನ್ನು ಪ್ರತಿಪಾದಿಸಲು ನಿಯುಕ್ತರಾಗಿರಲಿಲ್ಲ. ಬದಲಾಗಿ, ಆ ವೇಳೆಯಲ್ಲಿ ಜಾರಿಯಲ್ಲಿದ್ದ ಮೂಸಾ ಪ್ರವಾದಿಯ ಧರ್ಮ ಶಾಸ್ತ್ರದತ್ತ ಇಸ್ರಾಯೀಲ್ ಜನರನ್ನು ಆಹ್ವಾನಿಸಲು ನಿಯೋಜಿತರಾದವರು ಮಾತ್ರ. ಈ ಸತ್ಯವನ್ನು ಪವಿತ್ರ ಖುರ್‌ಆನ್ ಮತ್ತು ಬೈಬಲ್ ಏಕಪ್ರಕಾರವಾಗಿ ಸಾರಿ ಹೇಳುತ್ತವೆ. ಈ ಸಂಬಂಧವಾಗಿ ಬೈಬಲಿನ ಸುವಾರ್ತೆಗಳಲ್ಲಿ ಕಾಣಲ್ಪಡುವ ಉಲ್ಲೇಖಗಳಲ್ಲಿ ಕೆಲವನ್ನು ನೋಡಿರಿ:

"ತರುವಾಯ ಯೇಸು ಜನರ ಗುಂಪಿಗೂ ತನ್ನ ಶಿಷ್ಯರಿಗೂ ಹೇಳಿದ್ದೇನೆಂದರೆ ಶಾಸ್ತ್ರಿಗಳೂ ಫರಿಸಾಯರೂ ಮೋಶೆಯ ಪೀಠದಲ್ಲಿ ಕೂತುಕೊಂಡಿದ್ದಾರೆ; ಆದುದರಿಂದ ಅವರು ನಿಮಗೆ ಏನೇನು ಹೇಳುತ್ತಾರೋ ಅದನ್ನೆಲ್ಲಾ ಮಾಡಿರಿ, ಕಾಪಾಡಿಕೊಳ್ಳಿರಿ; ಆದರೆ ಅವರ ನಡತೆಯ ಪ್ರಕಾರ ನಡೆಯಬೇಡಿರಿ."

(ಮತ್ತಾಯ 23:1-3)

"ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದು ಹಾಕುವುದಕ್ಕೆ ನಾನು ಬಂದೆನೆಂದು ನೆನಸಬೇಡಿರಿ. ತೆಗೆದು ಹಾಕುವುದಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ಬಂದಿದ್ದೇನೆ."

(ಮತ್ತಾಯ 5:17)

"ಕಳೆದು ಹೋಗಿರುವುದನ್ನು ರಕ್ಷಿಸಲು ಮನುಷ್ಯ ಕುಮಾರನು ಬಂದಿರುವನು." (ಮತ್ತಾಯ 18:11)

ಕಾರ್ಯವನ್ನು ಗ್ರಹಿಸಲು ಸುಲಭವಾಗಲಿಯೆಂದು ಈ ದೀರ್ಘ ವಿವರಣೆಯನ್ನು ನೀಡಿರುವೆವು. ಈಗ, ಇಸ್ಲಾಂ ಧರ್ಮ ಸಂಸ್ಥಾಪನೆಯಾದ ಬಳಿಕ ಇಸ್ಲಾಂ ಧರ್ಮದ ಭವಿಷ್ಯತ್ತಿನ ಬಗ್ಗೆ ನೋಡುವ. "ಇಸ್ಲಾಂ" ಎಂಬ ಧರ್ಮವು ಅದರ ಪರಿಪೂರ್ಣವಾದ ಅರ್ಥದಲ್ಲಿ ಹಾಗೂ ಸಂಪೂರ್ಣವಾದ ರೂಪದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ ಮೂಲಕ ಸ್ಥಾಪನೆಗೊಂಡಿತು. ಧರ್ಮ ಸಂಸ್ಥಾಪನೆಯ ಕಾರ್ಯವು ಮುಹಮ್ಮದ್ ಪೈಗಂಬರರ ಮೂಲಕ ಪೂರ್ಣತೆಯನ್ನು ಗಳಿಸಿರುವ ಕಾರಣ ಈ ಪರಿಪೂರ್ಣ ಧರ್ಮಶಾಸ್ತ್ರವನ್ನು ರದ್ದುಗೊಳಿಸಿ ಇನ್ನೊಂದು ಧರ್ಮಸಂಹಿತೆಯ ಸ್ಥಾಪನೆಯು ಉಂಟಾಗಲಾರದು. ಅಂದರೆ, ಧರ್ಮಶಾಸ್ತ್ರದೊಂದಿಗೆ ಬರುವ ಪ್ರವಾದಿಗಳ ಅವತರಣೆಯು ಇನ್ನು ಉಂಟಾಗಲಾರದು. ಯಾಕೆಂದರೆ, ಇಸ್ಲಾಂ ಧರ್ಮ ಶಾಸ್ತ್ರವಾದ ಪವಿತ್ರ ಖುರ್‌ಆನ್ ಲೋಕಾಂತ್ಯದ ವರೆಗೂ ಯಾವುದೇ ಮಾರ್ಪಾಟಿಗೆ ಈಡಾಗದ ರೀತಿಯಲ್ಲಿ ಎಲ್ಲಾ ಕಾಲಕ್ಕೂ ಅನುಯೋಜ್ಯವಾಗುವ ತರದಲ್ಲಿ ಸಂರಕ್ಷಿಸಲ್ಪಡುವುದು. ಮಾನವರಿಗೆ ಅತ್ಯಂತ ಉತ್ಕೃಷ್ಟ ಮಾದರಿಯ ಜೀವನ ಕ್ರಮವಾದ ಹಝ್ರತ್ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆಯೂ ಲೋಕಕ್ಕೆ ಕೊಡುಗೆಯಾಗಿ ನೀಡಲಾಯಿತು. ಆದರೆ, ಇಲ್ಲಿ ಏಳುವ ಪ್ರಶ್ನೆಯು, ಮುಹಮ್ಮದ್ ಪೈಗಂಬರರ ಮೂಲಕ ಅವತೀರ್ಣಗೊಳಿಸಲಾದ ಪರಿಪೂರ್ಣ "ಶರೀಅತ್" (ಧರ್ಮಶಾಸ್ತ್ರ) ಹಾಗೂ ಅವರ ಪವಿತ್ರ ಜೀವನ ಚರ್ಯೆಗಳಿಂದ ಅವರ ಅನುಯಾಯಿಗಳೂ ಸೇರಿ

ದಂತೆ ಲೋಕದ ಜನತೆಯು ದೂರ ಸರಿಯುವ ಕಾಲ ಬರುವುದೇ? ಎಂಬುದು. ಲೋಕಾಂತ್ಯದ ವರೆಗೂ ಕನಿಷ್ಠ ಪಕ್ಷ ಮುಸ್ಲಿಮರಾದರೂ "ಇಸ್ಲಾಂ" ಧರ್ಮದ ಯಥಾರ್ಥ ಅನುಯಾಯಿಗಳಾಗಿ ಉಳಿಯುವರೇ? ಎಂಬ ಪ್ರಶ್ನೆ. ಇಲ್ಲವೆಂಬುದೇ ಇದಕ್ಕೆ ಉತ್ತರ.

ತನ್ನ ನಂತರದ ಕಾಲದಲ್ಲಿ ಇಸ್ಲಾಂ ಧರ್ಮವು ಅಭಿವೃದ್ಧಿಗೊಂಡು ಸಮಸ್ತ ಜಗತ್ತಿನಲ್ಲಿ ಪಸರಿಸುವು ದೆಂದು ಭವಿಷ್ಯ ನುಡಿದಿರುವ ಮುಹಮ್ಮದ್ ಪೈಗಂಬ ರರೇ ಆ ನಂತರದ ಕಾಲದಲ್ಲಿ ಮುಸ್ಲಿಂ ಜನಾಂಗವು ಅಧಃಪತನಗೊಳ್ಳುವುದೆಂದು ಕೂಡ ಪ್ರವಾದಿಸಿರುವರು. ಎಷ್ಟರವರೆಗೆಂದರೆ, ಮೊದಲಿನ ಯಾವುದೇ ಪ್ರವಾದಿಯ ಅನುಯಾಯಿಗಳು ಮಾರ್ಗ ಭ್ರಂಶರಾದುದಕ್ಕಿಂತಲೂ ಮಿಗಿಲಾದ ಅಧಃಪತನದ ಪಾತಾಳಕ್ಕೆ ಮುಸ್ಲಿಮರು ತಳ್ಳಲ್ಪಡುವರೆಂದು ಪ್ರವಾದಿಯವರು ಭವಿಷ್ಯ ನುಡಿದಿ ದ್ದಾರೆ. ಇಸ್ಲಾಂ ಎಂಬ ಹೆಸರು ಮತ್ತು ಖುರ್‌ಆನ್ ಲಿಪಿಗಳು ಮಾತ್ರ ಬಾಕಿಯಾಗುವ ಕಾಲವು ಬರಲಿದೆ ಯೆಂದೂ ಆ ಮಹಾತ್ಮರು ಭವಿಷ್ಯ ನುಡಿದಿದ್ದಾರೆ. ಆ ಭವಿಷ್ಯವಾಣಿಗಳೆಲ್ಲವೂ ನೂರಕ್ಕೆ ನೂರು ಸತ್ಯವಾಗಿ ಪರಿ ಣಮಿಸಿ ಪೂರ್ತಿಯಾಗಿರುವುದನ್ನು ನಾವಿಂದು ಕಾಣ ತ್ತೇವೆ. ಜಾಗತಿಕ ಮುಸ್ಲಿಮರ ಅಧಃಪತನದ ವಿವರಣೆ ಯನ್ನು ಬರೆಯುತ್ತಾ ಹೋದರೆ ಈ ಪತ್ರ ತುಂಬಾ ದೀರ್ಘವಾಗಬಹುದೆಂದು ಭಯಪಡುತ್ತೇವೆ. ಸಂಕ್ಷಿಪ್ತ ದಲ್ಲಿ, ಇಂದಿನ ಮುಸಲ್ಮಾನರು ರಾಜಕೀಯವಾಗಿಯೂ ಬೌದ್ಧಿಕವಾಗಿಯೂ ಆರ್ಥಿಕವಾಗಿಯೂ ಸಾಮುದಾಯಿಕ ವಾಗಿಯೂ ಆಧ್ಯಾತ್ಮಿಕವಾಗಿಯೂ ಅತ್ಯಂತ ಕೀಳು ಮಟ್ಟವನ್ನು ತಲಪಿದ್ದಾರೆ. ಇಸ್ಲಾಮಿನ ಹೆಸರು ಮಾತ್ರವೇ ಇಂದು ಬಾಕಿಯುಳಿದಿದೆ. ಖುರ್‌ಆನಿನಲ್ಲಿ ಲಿಪಿಗಳಷ್ಟೇ ಇವೆ. ಅದರ ಅಂತರಾರ್ಥಗಳನ್ನು ಗ್ರಹಿಸಿಕೊಳ್ಳುವಲ್ಲಿ ಮುಸ್ಲಿಮರೇ ಪರಾಜಿತರಾಗಿದ್ದಾರೆ. ಪುರೋಹಿತರೂ ಮುಲ್ಲಾಗಳೂ ನಿಕೃಷ್ಟರಾಗಿ ಮಾರ್ಪಟ್ಟಿ ದ್ದಾರೆ. ಪ್ರವಾದನೆಗಳಲ್ಲಿ ವಿವರಿಸಲಾದ ಎಲ್ಲಾ ದುರ್ಗತಿಗಳೂ ಇಂದು ಮುಸ್ಲಿಂ ಸಮೂಹಕ್ಕೆ ಬಂದೊದ ಗಿವೆ.

ಈ ರೀತಿ ಸತ್ಯ ಪಥದಿಂದ ದೂರವಾದ ಮುಸ್ಲಿಮ ರನ್ನು ಹಾಗೂ ಯಥಾರ್ಥ ದೈವಜ್ಞಾನದಿಂದ ವಂಚಿತ ರಾದ ಎಲ್ಲಾ ಮಾನವರನ್ನು ನಿಜವಾದ ಆಧ್ಯಾತ್ಮಿಕತೆ ಯತ್ತ ಅಥವಾ ಮುಹಮ್ಮದ್ ಪೈಗಂಬರರು ಪ್ರಬೋ ಧಿಸಿದ ಆ ಯಥಾರ್ಥ ಹಾಗೂ ಪರಿಪೂರ್ಣ ಧರ್ಮ ಸಂಹಿತೆಯತ್ತ ಆಹ್ವಾನಿಸಲು ಮೊದಲು ವಿವರಿಸಿದ ಎರಡನೆಯ ಪ್ರಕಾರದ ಪ್ರವಾದಿಯೊಬ್ಬರ ಆಗಮನವು ಅನಿವಾರ್ಯವಾಗುತ್ತದೆ. ಅಂತೆಯೇ ಪೂರ್ವ ಪ್ರವಾದಿ ಗಳ ಭವಿಷ್ಯವಾಣಿಗಳ ಪೂರ್ತೀಕರಣವಾಗಿ ಈ ಕಾಲದಲ್ಲಿ ಓರ್ವ ಪ್ರವಾದಿಯನ್ನು ಪರಮಾತ್ಮನು ಕಳುಹಿಸಿರು ತ್ತಾನೆ. ಅವರು ನೂತನವಾದೊಂದು ಧರ್ಮ ಶಾಸ್ತ್ರ ವನ್ನು ತಂದ ಪ್ರವಾದಿಯಲ್ಲ. ಹರ್ಝ್ರತ್ ಮುಹಮ್ಮದ್ ಪೈಗಂಬರರಿಂದ ಪ್ರಬೋಧಿಸಲಾದ, ಆದರೆ ಲೋಕ ದಿಂದ ಇಂದು ಕಣ್ಮರೆಯಾಗಿರುವ ಆ ಯಥಾರ್ಥ ಸತ್ಯ ಧರ್ಮದೆಡೆಗೆ ಜನರನ್ನು ಆಹ್ವಾನಿಸಲು ನಿಯೋಜಿತ ರಾದ ಪ್ರವಾದಿಯಾಗಿದ್ದಾರೆ. ಪ್ರವಾದಿ ಮೋಶೆಯವರ ಮೂಲಕ ಸ್ಥಾಪಿಸಲ್ಪಟ್ಟ ಧರ್ಮದಿಂದ ಇಸ್ರಾಯೀಲ್ ಜನರು ವಿಮುಖರಾದಾಗ, ಧರ್ಮದ ಆಂತರಿಕವನ್ನು ಕೈಬಿಟ್ಟು ಕೇವಲ ಬಾಹ್ಯಾಚರಣೆ ಮತ್ತು ಮೂಢ ನಂಬಿಕೆ ಗಳಲ್ಲಿ ಮುಳುಗಿ ಇಸ್ರಾಯೀಲ್ ಜನರು ಅಧಃಪತನ ಗೊಂಡಾಗ ಅವರನ್ನು ಪುನಃ ಅದೇ ಧರ್ಮಶಾಸ್ತ್ರದತ್ತ ಆಹ್ವಾನಿಸಲು ಹಾಗೂ ಪ್ರವಾದಿ ಮೋಶೆಯವರ ಧರ್ಮ ವನ್ನು ಪುನರುಜ್ಜೀವನಗೊಳಿಸಲು ಒಬ್ಬ ಉದ್ಧಾರಕನಾಗಿ ಯೇಸು ಮಸ್ಸೈಯ ನಿಯುಕ್ತರಾದಂತೆಯೇ ಮುಹಮ್ಮದ್ ಪೈಗಂಬರರ ತತ್ವೋಪದೇಶಗಳಿಂದ ಜನರು ಪಥಭ್ರಷ್ಟ ರಾದಾಗ ಅವರನ್ನು ಪುನಃ ಅದೇ ಧರ್ಮ ಸಿದ್ಧಾಂತಗಳ ಕಡೆ ಕೊಂಡೊಯ್ಯಲು ನಿಯುಕ್ತರಾದ ಪ್ರವಾದಿ. ತನ್ನ ಸಮುದಾಯದಲ್ಲೂ ಓರ್ವ ಮಸೀಹರ ಅವತಾರ ಉಂಟಾಗುವುದೆಂದು ಮುಹಮ್ಮದ್ ಪೈಗಂಬರರು ವಾಗ್ದಾನ ಮಾಡಿದ್ದಾರೆ. ಅಂದರೆ, ಯಾವ ರೀತಿಯಲ್ಲಿ ಮೂಸಾ ಪ್ರವಾದಿಯವರ ಸಮುದಾಯವು ಮಾರ್ಗ ಭ್ರಂಶವಾದಾಗ 14 ಶತಮಾನಗಳ ಬಳಿಕ ಆ ಸಮುದಾಯ ದಲ್ಲಿ ಓರ್ವ ಉದ್ಧಾರಕನಾಗಿ ಈಸಾ ಮಸೀಹರ ಆಗಮನ ವುಂಟಾಯಿತೋ ಅದೇ ರೀತಿಯಲ್ಲಿ ತನ್ನ ಸಮುದಾಯವು ಅಧಃ ಪತನಗೊಳ್ಳುವ ಕಾಲದಲ್ಲಿ, ತನ್ನ ಬಳಿಕ 14ನೇ ಶತ ಮಾನದಲ್ಲಿ ಓರ್ವ ಉದ್ಧಾರಕನನ್ನು ದೇವರು ನಿಯೋಜಿ ಸುವನು ಎಂದು. ಮುಹಮ್ಮದ್ ಪೈಗಂಬರರ ಸಮು ದಾಯದಲ್ಲಿ ಬರುವ ಈ ಉದ್ಧಾರಕ ಪ್ರವಾದಿಗೂ ಪ್ರವಾದಿ ಮೋಶೆಯವರ ಸಮುದಾಯದಲ್ಲಿ ಅವತೀರ್ಣ ರಾದ ಉದ್ಧಾರಕ ಯೇಸು ಮಸ್ಸೈಯರಿಗೂ ಹಲವಾರು

ವಿಷಯಗಳಲ್ಲಿ ಸಾಮತ್ಯೆಗಳಿರುವುದರಿಂದ ಬರಲಿರುವ ಈ ಮಹಾತ್ಮರನ್ನೂ "ಮಸೀಹ್" ಎಂಬುದಾಗಿ ಭವಿಷ್ಯ ವಾಣಿಗಳಲ್ಲಿ ನಾಮಕರಣ ಮಾಡಲಾಗಿದೆ.

ಆದರೆ, ಇಲ್ಲೊಂದು ವಿಪರ್ಯಾಸವು ಸಂಭವಿಸಿತು. ಇಸ್ಲಾಂ ಧರ್ಮದ ವೈಭವದ ಕಾಲದಲ್ಲಿ ಆ ಧರ್ಮಕ್ಕೆ ಕ್ರೈಸ್ತ ವಿಶ್ವಾಸಿಗಳಾದ ಜನರು ತಂಡೋಪತಂಡವಾಗಿ ಪ್ರವೇಶಿಸ ತೊಡಗಿದರು. ಈ ಜನಸ್ತೋಮಗಳು ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗ ಅವರಿಗೆ ಸರಿಯಾದ ರೂಪದಲ್ಲಿ ಇಸ್ಲಾಂ ಧರ್ಮ ಸಿದ್ಧಾಂತಗಳನ್ನು ಬೋಧಿಸಲು ಮುಸ್ಲಿಮರಿಗೆ ಅವಕಾಶವೂ ಸೌಕರ್ಯವೂ ಸಾಕಾಗದೆ ಹೋಯಿತು. ಆದುದರಿಂದ ಕ್ರೈಸ್ತ ವಿಶ್ವಾಸದ ಪಳೆಯುಳಿಕೆಯಾದ "ಯೇಸು ಮಸೀಹರು ಮರಣ ಹೊಂದದೆ ಆಕಾಶದಲ್ಲಿ ಜೀವಿಸುತ್ತಿದ್ದಾರೆ" ಎಂಬ ಮಿಥ್ಯಾ ವಿಶ್ವಾಸವು ಮುಸಲ್ಮಾನರಲ್ಲಿ ಸಂಕ್ರಮಿಸಿತು. ಓರ್ವ ಮಸೀಹರ ಬರುವಿಕೆಯ ಬಗ್ಗೆ ಮುಹಮ್ಮದ್ ಪೈಗಂಬರರು ಭವಿಷ್ಯ ನುಡಿದಿರುವುದನ್ನೂ ಅವರು ಕಂಡರು. ಹೀಗೆ, ಅವರು ತಮ್ಮ ಪೂರ್ವ ವಿಶ್ವಾಸವನ್ನು ಈ ಪ್ರವಾದನದೊಂದಿಗೆ ಕಲಬೆರಕೆ ಮಾಡಿ ಈಸಾ ಮಸೀಹರು ಆಕಾಶದಲ್ಲಿ ಜೀವಿಸುತ್ತಿರುವರೆಂದೂ ಅಂತ್ಯಕಾಲದಲ್ಲಿ ಅವರೇ ಈ ಭೂಮಿಗೆ ಇಳಿದು ಬರುವ ಮಸೀಹ್ ಆಗಿದ್ದಾರೆಂದೂ ವ್ಯಾಖ್ಯಾನಿಸಲು ತೊಡಗಿದರು.

ಆದರೆ ಈ ವಿಶ್ವಾಸವು ಸಂಪೂರ್ಣ ಅಸಂಬದ್ಧವೆಂದು ಪವಿತ್ರ ಖುರ್‌ಆನ್ ಸಾರಿ ಸಾರಿ ಹೇಳುತ್ತದೆ. ಇತರ ಎಲ್ಲಾ ಪ್ರವಾದಿಗಳಂತೆಯೇ ಈಸಾ ಪ್ರವಾದಿ (ಯೇಸುಕ್ರಿಸ್ತರು) ಕೂಡ ಮರಣ ಹೊಂದಿರುವರೆಂದೂ ಮರಣಗೊಂಡ ವ್ಯಕ್ತಿ ಈ ಲೋಕಕ್ಕೆ ಪುನಃ ಬರುವುದು ಪರಮಾತ್ಮನ ಕಾನೂನಿಗೆ ವಿರುದ್ಧವೆಂದೂ ಖುರ್‌ಆನ್ ಅತ್ಯಂತ ಸ್ಪಷ್ಟವಾಗಿ ವಿವರಿಸುತ್ತದೆ. ಸ್ಥೂಲ ಶರೀರದೊಂದಿಗೆ ಆಕಾಶಕ್ಕೆ ಏರಿಹೋಗಿ ದೀರ್ಘವಾದ ಒಂದು ಕಾಲಮಿತಿಯ ವರೆಗೆ ಅನ್ನಾಹಾರಗಳಿಲ್ಲದೆ ಆಕಾಶದಲ್ಲೇ ಜೀವಿಸುವಂತಹ ಒಂದು ಶರೀರವನ್ನು ಈಸಾ ಪ್ರವಾದಿಗಾಗಲಿ ಇನ್ನಾರಿಗೂ ಕೂಡ ನೀಡಿಲ್ಲವೆಂದೂ ಇದು ಪ್ರಕೃತಿ ನಿಯಮಗಳಿಗೆ ವಿರುದ್ಧವಾದೊಂದು ಆಭಾಸವೆಂದೂ ಪವಿತ್ರ ಖುರ್‌ಆನ್ ತಿಳಿಸಿಕೊಡುತ್ತದೆ. ಆಕಾಶದಿಂದ ಇಳಿದು ಬಂದವರಲ್ಲದೆ ಮತ್ತಾರೂ ಆಕಾಶಕ್ಕೆ ಏರಿ ಹೋಗಲಾರರು ಎಂಬುದಾಗಿ ಹೇಳಿ ಆಕಾಶಕ್ಕೆ ಏರಿ ಹೋಗುವ ಸಾಧ್ಯತೆಯನ್ನು ಯೇಸು ಸ್ವಯಂ ಅಲ್ಲಗಳೆದಿದ್ದಾರೆ. (ಯೋಹಾನ 3 : 13 ನೋಡಿರಿ)*

ಆದುದರಿಂದ ಮುಹಮ್ಮದ್ ಪೈಗಂಬರರ ನಂತರ 14ನೇ ಶತಮಾನದಲ್ಲಿ ಲೋಕವು ಆಧ್ಯಾತ್ಮಿಕ ಅಂಧಕಾರದಲ್ಲಿ ಮುಳುಗುವಾಗ ಆವಿರ್ಭವಿಸಬೇಕಾದ "ವಾಗ್ದತ್ತ ಮಸೀಹ್" ಅಥವಾ 'ಮಹ್‌ದಿ' ಅಥವಾ 'ಉದ್ಧಾರಕ'ನು ಯೇಸು ಮಸ್ಸೆಯಅಲ್ಲವೆಂಬುದು ಸ್ಪಷ್ಟವಾಯಿತು. ಬರಬೇಕಾದ ಈ ಮಹಾ ಪುರುಷರು ಯೇಸು ಮಸ್ಸೆಯರಿಗೆ ಸಮಾನರಾದ ಒಬ್ಬ "ಸದೃಶ ಮಸೀಹ್" (ಮಸೀಲುಲ್ ಮಸೀಹ್) ಆಗಿದ್ದಾರೆ. ಅವರು ಮುಹಮ್ಮದ್ ಪೈಗಂಬರರ ಅನುಯಾಯಿಗಳಲ್ಲೊಬ್ಬರಾಗಿರಬೇಕು. ಬರಲಿರುವ ಉದ್ಧಾರಕ ತನ್ನ ಸಮುದಾಯದಿಂದಲೇ (ಉಮ್ಮತ್‌ನಿಂದಲೇ) ನಿಯೋಜಿತರಾಗುವ ಓರ್ವ ವ್ಯಕ್ತಿಯೆಂಬುದಾಗಿ ಪೈಗಂಬರರು ಹೇಳಿರುವರು. (ಬುಖಾರಿ).

ಮುಹಮ್ಮದ್ ಪೈಗಂಬರರ ಬಳಿಕ 14ನೇ ಶತಮಾನದಲ್ಲಿ ಅಂದರೆ ಕ್ರಿಸ್ತ ಶಕ 19ನೇ ಶತಮಾನದಲ್ಲಿ ಯೇಸು ಕ್ರಿಸ್ತರ ಪುನರಾಗಮನದ ಭವಿಷ್ಯವಾಣಿಯನ್ನು ಪೂರ್ತೀಕರಿಸಿಕೊಂಡು ಆಗಮಿಸಿದ ಮಹಾತ್ಮರೇ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್. ಈ ಕಾಲದಲ್ಲಿ ಅವತರಿಸಬೇಕಾದ ಉದ್ಧಾರಕನ ಕುರಿತಂತೆ ಪೂರ್ವ ಪ್ರವಾದಿಗಳ ಭವಿಷ್ಯವಾಣಿಗಳೆಲ್ಲವೂ ತನ್ನ ಆಗಮನದೊಂದಿಗೆ ಈಡೇರಿರುವುದಾಗಿ ಹಝ್ರತ್ ಅಹ್ಮದ್ ಘೋಷಿಸಿದ್ದಾರೆ. ಅವರು 1889ನೇ ಇಸವಿಯಲ್ಲಿ ದೇವರ ಆಜ್ಞೆಯ ಪ್ರಕಾರ ರೂಪ ನೀಡಿದ ಸಂಘಟನೆಯೇ "ಅಹ್ಮದಿಯಾ ಜಮಾಅತ್" ಎಂಬುದು. ಇದು ಒಂದು ಹೊಸ ಧರ್ಮದ ಹೆಸರಲ್ಲ. ಇಸ್ಲಾಂ ಧರ್ಮದ ಉದ್ಧಾ

* ಯೋಹಾನ 3ನೇ ಅಧ್ಯಾಯದ 13ನೇ ವಚನವು Bible Society of America ಪ್ರಕಟಿಸಿದ ಒಡಂಬಡಿಕೆಯ King James Versionನಲ್ಲಿ ಈ ರೀತಿಯಿದೆ: "And no man hath ascended upto heaven, but he that came down from heaven, even the son of man............"

ಕನ್ನಡ ಬೈಬಲಿನಲ್ಲಿ ಈ ವಚನವು ವಿರುದ್ಧಾರ್ಥದಲ್ಲಿ ಪ್ರಯುಕ್ತವಾಗಿರುವುದು ಕಾಣಲ್ಪಡುತ್ತದೆ.

—ಸಂ.

# ★ ಅಹ್ಮದಿಯಾ ವಾರ್ತೆಗಳು ★

## ಭಾರತ ಸಂದರ್ಶನಕ್ಕೆ ಆಗಮಿಸಿರುವ ಪೋಪ್ ಎರಡನೇ ಜಾನ್ ಪಾಲರಿಗೆ ಸ್ವಾಗತ *

**ಯೇಸುಕ್ರಿಸ್ತರು ಹೇಳಿರುವರು:—**

"ಇಸ್ರಾಯೇಲ್ ಜನವೇ ಕೇಳು, ನಮ್ಮ ದೇವರಾದ ಕರ್ತನು ಒಬ್ಬನೇ ದೇವರು; ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಬುದ್ಧಿಯಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು ಎಂಬುದೇ ಮೊದಲನೆಯ ಆಜ್ಞೆ" –ಬೈಬಲ್ (ಮಾರ್ಕ 12:30)

"ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ, ಸದ್ಯಕ್ಕೆ ಅದನ್ನು ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು" –ಬೈಬಲ್ (ಯೋಹಾನ 16:12–13)

**ಪ್ರಿಯ ಕ್ರಿಸ್ತುವ ಸಹೋದರರೇ,**

ಅಖಿಲ ಬ್ರಹ್ಮಾಂಡದ ಸೃಷ್ಟಿಕರ್ತನೂ ಸಂರಕ್ಷಕನೂ ಆದ ಏಕದೇವನ ಹೊರತು ಮತ್ತಾವ ದೇವರೂ ಸಂರಕ್ಷಕನೂ ಇರುವುದಿಲ್ಲ. ಯೇಸುಕ್ರಿಸ್ತರು ದೇವರಲ್ಲ. ದೇವ ಪುತ್ರನೂ ಅಲ್ಲ. ಅವರು ಸತ್ಯಸ್ವರೂಪಿಯಾದ ದೇವನಿಂದ ನಿಯೋಜಿತರಾದ ಒಬ್ಬ ಪ್ರವಾದಿಯಾಗಿದ್ದರು. ಯೇಸುಕ್ರಿಸ್ತರು ಮೊದಲನೆಯ ಆಜ್ಞೆಯೆಂಬುದಾಗಿ ಬೋಧಿಸಿದ ಏಕದೇವ ವಿಶ್ವಾಸವೇ ಎಲ್ಲಾ ಧರ್ಮ ತತ್ವಗಳ ಮರ್ಮ ಪ್ರಧಾನವಾದ ಅಂಶ. ಯೇಸುಕ್ರಿಸ್ತರು ಭವಿಷ್ಯ ನುಡಿದಂತೆ ಅವರ ನಂತರ ದಿವ್ಯ ಸಂದೇಶವಾಹಕರಾಗಿ ನಿಯೋಜಿತರಾದ ಮಹಾನ್ ಪ್ರವಾದಿ ಮುಹಮ್ಮದ್ ಪೈಗಂಬರರ ಸತ್ಯ ಸಂದೇಶದೆಡೆಗೆ–ಇಸ್ಲಾಂ ಧರ್ಮದ ದಿವ್ಯ ಸಂದೇಶದ ಕಡೆಗೆ ನಾವು ನಿಮ್ಮನ್ನು ಆಮಂತ್ರಿಸುತ್ತೇವೆ.

ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಿಲ್ಲ. ಶಾಪಗ್ರಸ್ತವಾದ ಶಿಲುಬಾ ಮರಣದಿಂದ ತನ್ನನ್ನು ಸಂರಕ್ಷಿಸುವಂತೆ ಅವರು ದೇವರಲ್ಲಿ ದೈನ್ಯದಿಂದ ಪ್ರಾರ್ಥಿಸಿದ್ದರು. ಯೇಸುಕ್ರಿಸ್ತರ ಈ ಪ್ರಾರ್ಥನೆಯ ಕುರಿತು ಬೈಬಲ್ ಹೇಳುತ್ತದೆ:—

"ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿ" –ಮತ್ತಾಯ 26:39

"ಅಪ್ಪಾ, ತಂದೆಯೇ, ನಿನಗೆ ಎಲ್ಲವೂ ಸಾಧ್ಯ; ಈ ಪಾತ್ರೆಯನ್ನು ನನ್ನಿಂದ ತೊಲಗಿಸು" –ಮಾರ್ಕ 14:36

"ಕ್ರಿಸ್ತನು ತಾನು ಭೂಲೋಕದಲ್ಲಿದ್ದಾಗ ಮರಣಕ್ಕೆ ತಪ್ಪಿಸಿ ಕಾಪಾಡಲು ಶಕ್ತನಾಗಿರುವಾತನಿಗೆ ಬಲವಾಗಿ ಕೂಗುತ್ತಾ ಕಣ್ಣೀರನ್ನು ಸುರಿಸುತ್ತಾ ಪ್ರಾರ್ಥನೆ ವಿಜ್ಞಾಪನೆಗಳನ್ನು ಸಮರ್ಪಿಸಿ ದೇವರ ಮೇಲಣ ಭಯ ಭಕ್ತಿಯ ನಿಮಿತ್ತ ಕೇಳಲ್ಪಟ್ಟನು". – ಇಬ್ರಿಯರಿಗೆ 5:7

ಭಕ್ತಿ ನಿರ್ಭರವೂ ಹೃದಯ ವಿದ್ರಾವಕವೂ ಆದ ಯೇಸುಕ್ರಿಸ್ತರ ಈ ಪ್ರಾರ್ಥನೆಗಳನ್ನು ದೇವರು ಸ್ವೀಕರಿಸಿರುವುದಾಗಿಯೂ ಮೇಲಿನ ಬೈಬಲ್ ಉದ್ಧರಣೆಯಿಂದ ಸ್ಪಷ್ಟವಾಗುತ್ತದೆ. ಶಿಲುಬಾ ಮರಣದಿಂದ ಅವರನ್ನು ದೇವರು ವಿಮೋಚಿಸಿದನು. ಮರಣ ಬರಿಸುವಷ್ಟು ಕಾಲ ಅವರು ಶಿಲುಬೆಯಲ್ಲಿ ತೂಗಿರಲಿಲ್ಲ. ಶಿಲುಬೆಯಲ್ಲಿ ಪ್ರಜ್ಞಾಹೀನರಾಗಿ ಮರಣಗೊಂಡಂತೆ ಕಾಣಲ್ಪಟ್ಟರು. ಶಿಲುಬೆಯಿಂದಿಳಿಸಲಾದ ಯೇಸು ಮಸೀಹಾರಿಗೆ ಶವ ಕುಠೀರದಲ್ಲಿ ಶುಶ್ರೂಷೆ ನೀಡಲಾಯಿತು. ಶಿಲುಬೆಯಲ್ಲಿ ಪ್ರಾಣಬಿಡುವಂತಹ ಹೇಯವೂ ಶಾಪಗ್ರಸ್ತವೂ ಆದ ಮರಣದಿಂದ ಪರಮಾತ್ಮನು ಯೇಸುಕ್ರಿಸ್ತರನ್ನು ಸಂರಕ್ಷಿಸಿದನು.

**ಅಹ್ಮದಿಯಾ ಮುಸ್ಲಿಂ ಮಿಶನ್**
10-23-1008 ಅನ್ಸಾರಿ ರಸ್ತೆ, ಬಂದರ, ಮಂಗಳೂರು.

* ಪೋಪ್ ಎರಡನೇ ಜಾನ್ ಪಾಲ್ ಅವರು ಕಳೆದ ಫೆಬ್ರುವರಿ 6 ರಂದು ಮಂಗಳೂರು ಸಂದರ್ಶಿಸಿದ ಸಂದರ್ಭದಲ್ಲಿ ಅಹ್ಮದಿಯಾ ಮುಸ್ಲಿಂ ಮಿಶನ್ ಮಂಗಳೂರಿನ ವತಿಯಿಂದ ನೀಡಲಾದ ಪತ್ರಿಕಾ ಪ್ರಕಟನೆ.

# ಕೇರಳ ಅಹ್ಮದಿಯಾ ಮುಸ್ಲಿಂ ವಾರ್ಷಿಕ ಸಮ್ಮೇಳನ

ಕಳೆದ ಎಪ್ರಿಲ್ 12 ಮತ್ತು 13 ರಂದು ಕಣ್ಣಾನ್ನೂರು ಜಿಲ್ಲೆಯ ಪಯಂಗಾಡಿಯ ಇಮಾಂ ಮಹ್‌ದಿ ನಗರದಲ್ಲಿ ಕೇರಳ ಅಹ್ಮದಿಯಾ ಮುಸ್ಲಿಂ ವಾರ್ಷಿಕ ಸಮ್ಮೇಳನವು ಜರಗಿತು.

ಅಹ್ಮದಿಯಾ ಜಮಾಅತ್ ಇಸ್ಲಾಂ ಧರ್ಮದ ಯಥಾರ್ಥ ರೂಪವೇದೂ ಮುಸ್ಲಿಮರನ್ನು ಪುನರುದ್ಧಾರ ಮಾಡುವುದು ಹಾಗೂ ಇಸ್ಲಾಮಿನ ನಿಜ ರೂಪವನ್ನು ಪ್ರಚಾರಪಡಿಸುವುದು ಅಹ್ಮದಿಯಾ ಜಮಾಅತಿನ ಸ್ಥಾಪಕರ ದೌತ್ಯಲಕ್ಷ್ಯವೆಂದೂ ಸಮ್ಮೇಳನ ವನ್ನು ಉದ್ಘಾಟನೆ ಮಾಡುತ್ತಾ ಉಸ್ಮಾನಿಯಾ ವಿಶ್ವ ವಿದ್ಯಾಲಯದ ಖಗೋಳ ಶಾಸ್ತ್ರ ವಿಭಾಗದ ಮುಖ್ಯಸ್ಥ ರಾದ ಡಾ। ಹಾಫಿಝುನ್ ಸಾಲಿಹ್ ಮುಹಮ್ಮದ್ ಅಲ್ಲಾವುದ್ದೀನ್ ಸಾಹೇಬ್ ಹೇಳಿದರು.

ಇಸ್ಲಾಮಿನ ಅಧ್ಯಾಪನ ಪ್ರಕಾರ, ಎಲ್ಲಾ ಸಮು ದಾಯಗಳಲ್ಲೂ ಪ್ರವಾದಿಗಳು ಆಗಮಿಸಿದ್ದಾರೆಂದೂ ಭಾರತದಲ್ಲಿ ಆಗತರಾದ ಶ್ರೀಕೃಷ್ಣ ಮತ್ತು ಶ್ರೀರಾಮ ದೇವರ ಪ್ರವಾದಿಗಳಾಗಿದ್ದರೆಂದೂ ಇತರ ಸಮುದಾಯ ಗಳಲ್ಲಿ ನಿಯೋಜಿತರಾದ ಪ್ರವಾದಿಗಳನ್ನು ಸಹ ಖುರ್ ಆನಿನ ಅಧ್ಯಾಪನಾನುಸಾರ ಮುಸ್ಲಿಮರು ವಿಶ್ವಸಿಸ ಬೇಕೆಂದೂ ಅವರು ಹೇಳಿದರು.

ಕೇರಳ ಅಹ್ಮದಿಯಾ ಅಮೀರ್ ಸಿದ್ದೀಖ್ ಅಮೀರ್ ಅಲಿ ಸಾಹೇಬ್ ಅಧ್ಯಕ್ಷತೆ ವಹಿಸಿದ್ದರು. ಪ್ರೊಫೆಸರ್ ಟಿ. ಪಿ. ಸುಕುಮಾರನ್ ಆಶಂಸಾ ಭಾಷಣ ಮಾಡಿದರು. ಮುಹಮ್ಮದ್ ಕರೀಮುಲ್ಲಾ ನೌಜವಾನ್ (ಮದರಾಸು), ಮೌಲವಿ ಮುಹಮ್ಮದ್ ಅಬುಲ್ ವಫಾ, ಪ್ರೊ। ಎಂ. ಮುಹಮ್ಮದ್, ಅಬ್ದುರಹ್ಮಾನ್ ಭಾಷಣ ಮಾಡಿದರು.

ಲೋಕ ಶಾಂತಿಯ ವಿರುದ್ಧವಾಗಿ ಬೆದರಿಕೆಯನ್ನು ಹುಟ್ಟಿಸುವ ಶಕ್ತಿಗಳ ಮೃತ್ಯುದಾಡೆಗಳಿಂದ ಪ್ರಪಂಚ ವನ್ನು ರಕ್ಷಿಸಲು ಪ್ರಯತ್ನಿಸುವ ಶಾಂತಿ ಮಂತ್ರವನ್ನಾಗಿ ಇಸ್ಲಾಂ ಧರ್ಮವನ್ನು ಕಾಣಬೇಕೆಂದು ಕೇರಳ ಅಹ್ಮದಿಯಾ ಮುಖ್ಯ ಮಿಶನರಿ ಮೌಲವಿ ಮುಹಮ್ಮದ್ ಅಬುಲ್ ವಫಾ ಸಾಹೇಬರು ದ್ವಿತೀಯ ದಿನ ಸಮ್ಮೇ ಳನದ ಅಧ್ಯಕ್ಷ ಭಾಷಣ ಮಾಡುತ್ತಾ ಹೇಳಿದರು. ಜಿಹಾದ್ ಧರ್ಮ ಯುದ್ಧವಲ್ಲ, ಬದಲು ಏಕದೇವ ವಿಶ್ವಾಸದ ಶಾಂತಿ ಪ್ರಚಾರವೆಂದು ಅವರು ಅಭಿಪ್ರಾಯ ಪಟ್ಟರು. ದೇಶದ ಐಕ್ಯವು ಅಪಾಯದಲ್ಲಿರುವ ಇಂದಿನ ಪರಿಸ್ಥಿತಿಯಲ್ಲಿ ಅಹ್ಮದಿಯಾ ಸಂಘಟನೆ ಕೋಮು ಸೌಹಾರ್ದಕ್ಕಾಗಿ ಅತ್ಯಂತ ಪ್ರಯತ್ನಿಸುವುದೆಂದು ಅವರು ಘೋಷಿಸಿದರು.

## ಪೋಪರಿಗೆ ಸ್ವಾಗತ............

( 37ನೇ ಪುಟದಿಂದ )

ರಕ್ಕಾಗಿ ಸ್ಥಾಪಿತವಾದ ಯೋಜನೆಯ ಹೆಸರೇ ಅಹ್ಮ ದಿಯ್ಯಾತ್ ಎಂಬುದು. ಲೋಕದ ಜನರನ್ನು ಆಧ್ಯಾತ್ಮಿಕ ತತ್ವಗಳ ಕಡೆಗೆ ಆಹ್ವಾನಿಸಲು ಹಾಗೂ ಇಸ್ಲಾಂ ಧರ್ಮ ವನ್ನು ಅದರ ನೈಜರೂಪದಲ್ಲಿ ಪ್ರತಿನಿಧೀಕರಿಸಲು ಅಲ್ಲಾಹನು ಹಝ್ರತ್ ಮಿರ್ಝಾ ಗುಲಾಂ ಅಹ್ಮದರನ್ನು ಓರ್ವ ಪ್ರವಾದಿಯಾಗಿ ನಿಯೋಗಿಸಿರುವನು ಎಂಬುದೇ ನಮ್ಮ ವಿಶ್ವಾಸ. ಈ ದಿವ್ಯ ಸಂಬೋಧನೆಯ ಕಡೆಗೆ ಜನರನ್ನು ಆಹ್ವಾನಿಸುವುದು ಅಹ್ಮದೀಯರಾದ ನಮ್ಮ ಕರ್ತವ್ಯವಾಗಿರುವಂತೆಯೇ ಮಹತ್ವಪೂರ್ಣವಾದ ಈ ಸಂದೇಶದ ಸತ್ಯಾಸತ್ಯತೆಯನ್ನು ವಿವೇಚಿಸಿ ಸತ್ಯವಾಗಿ ತೋರಿಬಂದಲ್ಲಿ ಈ ದಿವ್ಯಕರೆಯನ್ನು ಸ್ವೀಕರಿಸ ಬೇಕಾದುದು ದೇವಾಸ್ತಿತ್ವದಲ್ಲಿ ನಂಬಿಕೆಯಿರುವ ಪ್ರತಿ ಯೊಬ್ಬ ಆಸ್ತಿಕ ವಿಶ್ವಾಸಿಯ ಕರ್ತವ್ಯ ಕೂಡ ಆಗಿರುತ್ತದೆ.

ಅಹ್ಮದಿಯಾ ಸಂಘಟನೆಯ ಕುರಿತಿರುವ ನಿಮ್ಮ ಪ್ರಶ್ನೆಯೂ ಈ ಮೂಲಕ ಉತ್ತರಿಸಲ್ಪಟ್ಟಿದೆ ಎಂದು ಭಾವಿಸುತ್ತೇನೆ.

ವಸ್ಸಲಾಮು ಅಲಾ ಮನಿತ್ತಬಅಲ್‌ಹುದಾ (ಸತ್ಯಪಥದೆಡೆಗೆ ಸರಿಯುವವರ ಮೇಲೆ ಶಾಂತಿಯಿರಲಿ) ವ ಆಖಿರು ದಅ್‌ವಾನಾ ಅನಿಲ್ ಹಂದುಲಿಲ್ಲಾಹಿ ರಬ್ಬಿಲ್ ಆಲಮೀನ್. (ಸಕಲ ಸ್ತುತಿಸ್ತೋತ್ರಗಳೂ ಜಗತ್ಪಾಲಕ ನಾದ ಅಲ್ಲಾಹನಿಗೆ ಸಲ್ಲುತ್ತವೆ). ★

ವಾಣಿದಾಸ್ ಇಳಯಾವೂರ್, ಎನ್ ಅಬ್ದುರ್ರಹೀಂ, ಪ್ರೊ। ಮಹಮೂದ್ ಅಹ್ಮದ್, ತಮಿಳ್ನಾಡಿನ ಅಹ್ಮದಿಯಾ ಮಿಶನರಿ ಮೌಲವಿ ಮುಹಮ್ಮದ್ ಉಮರ್, ಮೌಲವಿ ಮುಹಮ್ಮದ್ ಯೂಸುಫ್ ಮೊದಲಾದವರು ವಿವಿಧ ವಿಷಯಗಳ ಕುರಿತು ಭಾಷಣ ಮಾಡಿದರು.

ಸಮ್ಮೇಳನದ ಅಂಗವಾಗಿ ಅನ್ಸಾರುಲ್ಲಾ, ಖುದ್ದಾಮುಲ್ ಅಹ್ಮದಿಯಾ ಅತ್ಫಾಲುಲ್ ಅಹ್ಮದಿಯಾ ಎಂಬೀ ವಿಭಾಗಗಳಲ್ಲಿ ಭಾಷಣ, ಖುರ್‌ಆನ್ ವಾಚನ, ಹಾಡು ಇತ್ಯಾದಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ವಿಜಯ ಗಳಿಸಿದವರಿಗೆ ಹಾಫಿಝ್ ಡಾ। ಸಾಲಿಹ್ ಮುಹಮ್ಮದ್ ಅಲ್ಲಾವುದ್ದೀನ್ ಸಾಹೇಬರು ಪ್ರಮಾಣ ಪತ್ರಗಳನ್ನು ನೀಡಿದರು.

ಮಂಗಳೂರಿನಿಂದ ಖುದ್ದಾಮುಲ್ ಅಹ್ಮದಿಯಾ ಖಾಯಿದ್ ಮುಹಮ್ಮದ್ ಯೂಸುಫ್ ಅವರ ನಾಯಕತ್ವದಲ್ಲಿ ಆರು ಮಂದಿ ಉತ್ಸಾಹೀ ತರುಣರು ಸೈಕಲ್ ಸವಾರಿ ಹೊರಟು ಸಮ್ಮೇಳನದಲ್ಲಿ ಭಾಗವಹಿಸಿದರು.

## ಭಾರತೀಯ ಧರ್ಮ ಸಮ್ಮೇಳನದಲ್ಲಿ ಅಹ್ಮದೀ ಪ್ರತಿನಿಧಿಯ ಭಾಷಣ

ಕಳೆದ ಫೆಬ್ರುವರಿ 16 ರಂದು ಶಿರಸಿಯಲ್ಲಿ ಸಮಾವೇಶಗೊಂಡ ಭಾರತೀಯ ಧರ್ಮ ಸಮ್ಮೇಳನದ 10 ನೆಯ ಅಧಿವೇಶನದಲ್ಲಿ ಮಂಗಳೂರಿನ ಅಹ್ಮದಿಯಾ ಪ್ರಚಾರ ಕಾರ್ಯದರ್ಶಿ ಎಂ. ಪಿ. ಇಬ್ರಾಹಿಂ ಅವರು ಇಸ್ಲಾಂ ಮತ್ತು ಕೋಮು ಸೌಹಾರ್ದ ಎಂಬ ವಿಷಯದಲ್ಲಿ ಭಾಷಣ ಮಾಡಿದರು.

ಧರ್ಮ ಸಮ್ಮೇಳನದ ವೇದಿಕೆಯ ಮೇಲಿದ್ದ ವಿವಿಧ ಧರ್ಮ ಗುರುಗಳಿಗೆ "ಯುಗರಶ್ಮಿ" ಸಂಪಾದಕ ಮುಹಮ್ಮದ್ ಯೂಸುಫ್ ಅವರು ಅಹ್ಮದಿಯಾ ಸಾಹಿತ್ಯಗಳನ್ನು ಕೊಡುಗೆಯಿತ್ತರು.

ಸಮ್ಮೇಳನ ಸ್ಥಳದ ವಠಾರದಲ್ಲಿ ತೆರೆಯಲಾಗಿದ್ದ ಅಹ್ಮದಿಯಾ ಬುಕ್ ಸ್ಟಾಲ್‌ನಿಂದ ಸಾವಿರಾರು ಕಿರು ಹೊತ್ತಗೆಗಳನ್ನು ಸಭಿಕರಿಗೆ ವಿತರಣೆ ಮಾಡಲಾಯಿತು. ಈ ಸಮ್ಮೇಳನದಲ್ಲಿ ಸುಮಾರು 8 ಸಾವಿರ ಮಂದಿ ಭಾಗವಹಿಸಿರುವರೆಂದು ಸಮ್ಮೇಳನದ ಸಂಘಟಕರು ಹೇಳಿದ್ದಾರೆ.

## ಪಾಕಿಸ್ತಾನದಲ್ಲಿ ನಿರಪರಾಧಿ ಅಹ್ಮದಿಯರಿಗೆ ಶಿಕ್ಷೆ

ಪಾಕಿಸ್ತಾನದ ಮಿಲಿಟರಿ ನ್ಯಾಯಾಲಯವು ಕಳೆದ ಫೆಬ್ರುವರಿ 15 ರಂದು ಸಾಹಿವಾಲದ ಅಹ್ಮದೀ ಮುಸ್ಲಿಮರಾದ ನಈಮುದ್ದೀನ್ ಮತ್ತು ಇಲ್ಯಾಸ್ ಮುನೀರ್ ಎಂಬ ನಿರಪರಾಧಿಗಳಿಗೆ ಪ್ರತಿಯೊಬ್ಬರಿಗೆ 10 ಸಾವಿರ ರೂಪಾಯಿ ದಂಡ ಮತ್ತು ಮರಣ ದಂಡನೆ ಶಿಕ್ಷೆಯನ್ನೂ ಇತರ ನಾಲ್ವರಿಗೆ ತಲಾ ಐದು ಸಾವಿರ ರೂಪಾಯಿ ದಂಡ ಮತ್ತು 25 ವರ್ಷಗಳ ದೀರ್ಘ ಸಜೆಯನ್ನು ವಿಧಿಸಿದೆ. 1984 ಅಕ್ಟೋಬರ್ 26 ರಂದು ಸಾಹಿವಾಲದಲ್ಲಿ ಅಹ್ಮದಿಯಾ ಮಸೀದಿಯೊಂದಕ್ಕೆ ವಿರೋಧಿಗಳ ಗುಂಪೊಂದು ಧಾಳಿಯಿಟ್ಟಾಗ ಆತ್ಮ ರಕ್ಷಣೆಗಾಗಿ ಇವರು ಹೋರಾಡಿದ್ದರು.

ಇನ್ನೊಂದು ಮೊಕದ್ದಮೆಯಲ್ಲಿ ಸಕ್ಕರ್ ಎಂಬಲ್ಲಿನ ಇಬ್ಬರು ಸಹೋದರರಾದ ರಫೀ ಅಹ್ಮದ್ ಖುರೈಶಿ ಮತ್ತು ಪ್ರೊಫೆಸರ್ ನಾಸಿರ್ ಅಹ್ಮದ್ ಖುರೈಶಿ ಎಂಬಿಬ್ಬರಿಗೆ ಸಹ ಮೇಲಿನ ವಿಧಿಯ ಎರಡು ವಾರಗಳ ನಂತರ ಮಿಲಿಟರಿ ನ್ಯಾಯಾಲಯವು ಮರಣ ದಂಡನೆ ಶಿಕ್ಷೆಯನ್ನು ವಿಧಿಸಿದೆ. 1984 ಮೇ ತಿಂಗಳಲ್ಲಿ ಅಹ್ಮದೀ ವಿರೋಧಿಗಳಾದ ಕೇಡಿಗೇಡಿಗಳು ಕೊಲೆಮಾಡಿದ ಸ್ಥಳೀಯ ಅಮೀರ್ ಅಬ್ದುಲ್ ರಹ್ಮಾನ್ ಖುರೈಶಿ ಸಾಹೇಬರ ಪುತ್ರರಾಗಿದ್ದಾರೆ ಈ ಇಬ್ಬರು ನಿರಪರಾಧಿಗಳು.

ಪಾಕಿಸ್ತಾನದ ಝಿಯಾ ಆಡಳಿತವು ಅಲ್ಪ ಸಂಖ್ಯಾತ ಅಹ್ಮದೀ ಮುಸ್ಲಿಮರ ಮಾನವೀಯ ಹಕ್ಕುಗಳನ್ನು ಹತ್ತಿಕ್ಕಲು ನಡೆಸುತ್ತಿರುವ ಬರ್ಬರ ಕೃತ್ಯಗಳ ನೂತನ ಉದಾಹರಣೆಗಳಾಗಿವೆ ಇವು. ಸಂಪ್ರದಾಯವಾದಿ ಮುಲ್ಲಾಗಳನ್ನು ಸಂಪ್ರೀತಿಗೊಳಿಸಲು ಝಿಯಾ ಮತ್ತು ಅವರ ಸರಕಾರ ಮನವೀಯತೆಯ ಕಗ್ಗೊಲೆ ನಡೆಸುತ್ತಿದೆ. ಪಾಕಿಸ್ತಾನದಲ್ಲಿ ಮಿಲಿಟರಿ ನ್ಯಾಯಾಲಯಗಳನ್ನು ರದ್ದುಗೊಳಿಸಲಾಗಿದೆಯೆಂದು ಸಾರಿದ ಎರಡು ತಿಂಗಳ ಬಳಿಕ ಮಿಲಿಟರಿ ನ್ಯಾಯಾಲಯದ ಮೂಲಕ ಈ ರೀತಿ ಅನ್ಯಾಯದ ತೀರ್ಮಾನ ಹೊರಬಂದಿರುವುದು ಅತ್ಯಂತ ಕಳವಳಕಾರಿಯಾಗಿದೆ. ಅನ್ಯಾಯದ ಈ ತೀರ್ಪನ್ನು ರದ್ದುಗೊಳಿಸುವಂತೆ ಪಾಕ್ ಸರಕಾರವನ್ನು ಎಲ್ಲೆಡೆಯಿರುವ ಅಹ್ಮದಿಯರೆಲ್ಲ ಒತ್ತಾಯಿಸಿದ್ದಾರೆ.

# ಅಲೀಗಢ ಮುಸ್ಲಿಂ ವಿಶ್ವವಿದ್ಯಾಲಯದಲ್ಲಿ ಡಾ। ಅಬ್ದುಸ್ಸಲಾಂ

ಕಳೆದ ಜನವರಿ 14 ರಂದು ನೋಬೆಲ್ ಪ್ರಶಸ್ತಿ ವಿಜೇತ ಅಹ್ಮದೀ ಭೌತಶಾಸ್ತ್ರ ವಿಜ್ಞಾನಿ ಡಾ। ಅಬ್ದುಸ್ಸಲಾಂ ಅವರು ಅಲೀಗಢ ಮುಸ್ಲಿಂ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದರು. ವಿಶ್ವವಿದ್ಯಾಲಯದ ವತಿಯಿಂದ ಕೆಂಪು ರತ್ನಗಂಬಳಿ ಹಾಸಿ ಹಾಗೂ ಗೌರವ ರಕ್ಷೆಯನ್ನು ನೀಡಿ ಅವರನ್ನು ಸ್ವಾಗತಿಸಲಾಯಿತು.

ಅಂದು ಸಂಜೆ ಇಂಜಿನಿಯರಿಂಗ್ ಕಾಲೇಜ್ ಕಾಂಪ್ಲೆಕ್ಸ್‌ನಲ್ಲಿ ಜರಗಿದ ಸಮಾರಂಭದಲ್ಲಿ ಅಬ್ದುಸ್ಸಲಾಮ್‌ರವರ 60 ನೇ ಜನ್ಮದಿನದ ಸವಿನೆನಪಿಗಾಗಿ ವಿಶ್ವವಿದ್ಯಾಲಯದ ವತಿಯಿಂದ ಪ್ರಕಟಿಸಲಾದ "ಅಬ್ದುಸ್ಸಲಾಂ" ಎಂಬ ಸ್ಮರಣ ಸಂಚಿಕೆಯನ್ನು ಡಾ। ಅಬ್ದುಸ್ಸಲಾಂ ಅವರು ಬಿಡುಗಡೆಗೊಳಿಸಿದರು.

ಭಾರತದ ಮೊತ್ತಮೊದಲ ಬಯೋಟೆಕ್ನೋಲಜಿ ಇನ್‌ಸ್ಟಿಟ್ಯೂಟ್ ಆಫ್ ಅಲೀಗಢ್ ಮುಸ್ಲಿಂ ಯುನಿವರ್ಸಿಟಿಗೆ ಮರುದಿನ ಡಾ। ಅಬ್ದುಸ್ಸಲಾಮರು ಶಿಲಾನ್ಯಾಸಗೈದರು. ಮೂರು ಕೋಟಿ ರೂಪಾಯಿ ವೆಚ್ಚದಲ್ಲಿ ಸ್ಥಾಪಿಸಲಾಗುವ ಈ ಸಂಸ್ಥೆಯ ಬಗ್ಗೆ ಅಬ್ದುಸ್ಸಲಾಮರು ತನ್ನ ಅತೀವ ಸಂತೋಷವನ್ನು ವ್ಯಕ್ತಪಡಿಸಿದರು.

ಅಂದೇ 'ಸೆಂಟರ್ ಫೋರ್ ಪ್ರಮೋಶನ್ ಆಫ್ ಸಯನ್ಸ್' ಅನ್ನು ಡಾ। ಅಬ್ದುಸ್ಸಲಾಮರು ಉದ್ಘಾಟನೆ ಮಾಡಿದರು. ಪವಿತ್ರ ಖುರ್‌ಆನಿನ ಆಯತುಗಳನ್ನು ಉದ್ಧರಿಸಿಕೊಂಡು ಅವರು ದೀರ್ಘವಾದ ಭಾಷಣ ಮಾಡಿದರು. ಪವಿತ್ರ ಖುರ್‌ಆನಿನಲ್ಲಿ ಸುಮಾರು 750 ವಚನಗಳು ಎಂದರೆ ಖುರ್‌ಆನಿನ 1/8 ಅಂಶ ಕೇವಲ ವಿದ್ಯೆ ಮತ್ತು ವಿಜ್ಞಾನದ ಕುರಿತು ಪ್ರಸ್ತಾಪಿಸುತ್ತವೆಂದೂ ಅವುಗಳ ಪೈಕಿ ಕನಿಷ್ಠ ಪಕ್ಷ 220 ವಚನಗಳು ಬರೇ ವಿಜ್ಞಾನದ ಕುರಿತುಳ್ಳದ್ದಾಗಿವೆಯೆಂದೂ ಅವರು ನುಡಿದರು. ಖುರ್‌ಆನಿನ ಬಗ್ಗೆ ಏನೂ ಸಂದೇಹಿಸಲಿಕ್ಕಿಲ್ಲವೆಂದು ಅಲ್ಲಾಹನೇ ಹೇಳಿರುವನೆಂದು ಅವರು ನುಡಿದರು.

ಪೂರ್ವ ಕಾಲದ ಮುಸ್ಲಿಮರು ವಿಜ್ಞಾನದಲ್ಲಿ ಬಹಳ ಪ್ರಗತಿಯನ್ನು ಗಳಿಸಿದ್ದರೆಂದು ಹೇಳಿದ ಅವರು ಇಂದಿನ ಮುಸ್ಲಿಮರು ವಿಜ್ಞಾನ ಮತ್ತು ತಾಂತ್ರಿಕತೆಯಲ್ಲಿ ಬಹಳ ಹಿಂದೆ ಬಿದ್ದಿರುವರೆಂದು ಕಳವಳ ಪಟ್ಟರು. ಇಂದಿನ ಮುಸ್ಲಿಂ ಯುವಪೀಳಿಗೆ ತೀವ್ರವಾಗಿ ಪರಿಶ್ರಮಿಸಿದರೆ ಹಾಗೂ ಖುರ್‌ಆನಿನ ಪ್ರಸ್ತಾಪನೆಗಳ ಬಗ್ಗೆ ಚಿಂತಿಸುವುದಾದರೆ ಪುನಃ ವಿಜ್ಞಾನದ ಹಿಂದಿನ ಕಾಲದ ಪ್ರಗತಿಯನ್ನು ಸಾಧಿಸಬಹುದೆಂದು ಅವರು ಹೇಳಿದರಲ್ಲದೆ ಸೂಕ್ತವಾದ ಸಲಹೆಗಳನ್ನಿತ್ತರು.

ಪ್ರೊ। ಅಬ್ದುಸ್ಸಲಾಮರ ಹೆಸರಿನಲ್ಲಿ ಸ್ಕಾಲರ್‌ಶಿಪ್ ನೀಡಲಾಗುವುದೆಂದೂ "ಪ್ರೊಫೆಸರ್ ಅಬ್ದುಸ್ಸಲಾಂ ಫೌಂಡೇಶನ್ ಅವಾರ್ಡ್" ಜಾರಿಗೊಳಿಸಲಾಗುವುದೆಂದೂ ವಿಶ್ವವಿದ್ಯಾಲಯದ ವತಿಯಿಂದ ಸಾರಲಾಯಿತು. ವಿಜ್ಞಾನ ವಿದ್ಯಾರ್ಥಿಗಳಿಗಾಗಿ ಪ್ರತಿವರ್ಷ ಒಂದು ಸಾವಿರ ಡಾಲರ್‌ನ ಸ್ಕಾಲರ್‌ಶಿಪ್ ನೀಡುವೆನೆಂದು ಡಾ। ಅಬ್ದುಸ್ಸಲಾಂ ವಾಗ್ದಾನ ಮಾಡಿದರು.

## ಬ್ರೆಝಿಲ್ ನಲ್ಲಿ ಪ್ರಚಾರ ಕೇಂದ್ರ

ಬ್ರೆಝಿಲ್ ನಲ್ಲಿ ಅಹ್ಮದಿಯಾ ಪ್ರಚಾರ ಕೇಂದ್ರವೊಂದನ್ನು ಇತ್ತೀಚೆಗೆ ತೆರೆಯಲಾಗಿದೆ. ದೇಶದಲ್ಲೇ ಅತಿ ದೊಡ್ಡದಾದ ರಿಯೋ ಡಿ ಜನಿರೋ ಎಂಬ ನಗರದ ಸಮೀಪ ನಿಟೆರ್ರೊ ಎಂಬಲ್ಲಿ ಸಣ್ಣದಾದೊಂದು ಕಟ್ಟಡ ಸಹಿತ ಹನ್ನೆರಡುವರೆ ಎಕ್ರೆ ಸ್ಥಳವನ್ನು ಈ ಉದ್ದೇಶಕ್ಕಾಗಿ ಖರೀದಿಸಲಾಗಿದೆ.

## ಫ್ರೆಂಚ್ ಭಾಷೆಯಲ್ಲಿ ಖುರ್‌ಆನ್ ಭಾಷಾಂತರ

ಅಹ್ಮದಿಯಾ ಜಮಾಅತಿನ ವತಿಯಿಂದ ಇತ್ತೀಚೆಗೆ ಫ್ರೆಂಚ್ ಭಾಷೆಯಲ್ಲಿ ಖುರ್‌ಆನ್ ಭಾಷಾಂತರವನ್ನು "ದೀಬಾಚ ತಫ್ಸೀರುಲ್ ಖುರ್‌ಆನ್" ಅನುವಾದ ಸಹಿತ ಪ್ರಕಟಿಸಲಾಗಿದೆಯೆಂದು ತಿಳಿದು ಬಂದಿದೆ.

## ಕಲಿಮ ಬ್ಯಾಡ್ಜ್ ಧರಿಸಿದ್ದರೆ ಶಿಕ್ಷೆ

ಪಾಕಿಸ್ತಾನದ ಗೋಜ್ರಾ ಎಂಬಲ್ಲಿ ಮುನೀರ್ ಅಹ್ಮದ್ ಎಂಬ ಯುವ ಅಹ್ಮದಿಯೋರ್ವರು ಕಲಿಮ ಬರೆದ ಬ್ಯಾಡ್ಜ್ ಧರಿಸಿದ ಕಾರಣಕ್ಕೆ ಸ್ಥಳೀಯ ಮೆಜಿಸ್ಟ್ರೇಟ್ ಒಂದು ವರ್ಷದ ಕಠಿಣ ಸಜೆಯನ್ನೂ ಒಂದು ಸಾವಿರ ರೂಪಾಯಿ ದಂಡವನ್ನೂ ವಿಧಿಸಿದ್ದಾರೆ. ದಂಡ ತೆರಲು ತಪ್ಪಿದ ಪಕ್ಷ ಇನ್ನೂ ಮೂರು ತಿಂಗಳ ಸಜೆಗೆ ಗುರಿಯಾಗಬೇಕಾಗಿದೆ.

ನಿಧನ ವಾರ್ತೆ

# ಜ| ಹಾಜಿ ಕೆ. ಪಿ. ಅಸ್ಸೂ ಸಾಹೇಬ್

ಕಲ್ಲಿಕೋಟೆ ಅಹ್ಮದಿಯಾ ಜಮಾಅತಿನ ಅಧ್ಯಕ್ಷರಾಗಿ 1964 ರಿಂದ 70 ರ ವರೆಗೆ ಸೇವೆಗೆಯ್ದ ಜನಾಬ್ ಕೆ. ಪಿ. ಅಸ್ಸೂ ಸಾಹೇಬ್ ಕಳೆದ ನವೆಂಬರ್ 28 ರಂದು ಕಲ್ಲಿಕೋಟೆಯಲ್ಲಿರುವ ಸ್ವಗೃಹದಲ್ಲಿ ನಿಧನರಾದರು. (ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್). ದಿವಂಗತರಿಗೆ 66 ವರ್ಷ ಪ್ರಾಯವಾಗಿತ್ತು. ನಿಷ್ಠಾವಂತ ಅಹ್ಮದಿಯಾಗಿದ್ದ ಅವರು ಕೇರಳ ಅಹ್ಮದಿಯಾ ಮುಸ್ಲಿಂ ಸ್ಟೇಟ್ ಕಮಿಟಿಯ ಸದಸ್ಯರೂ ಆಗಿದ್ದರು. 1966 ರಲ್ಲಿ ಅವರು ಹಜ್ ಪುಣ್ಯಯಾತ್ರೆ ಮಾಡಿದರು. ಅವರು 1948 ರಲ್ಲಿ ಅಹ್ಮದಿಯಾ ಜಮಾಅತಿಗೆ ಸೇರಿದ್ದರು. ದಿವಂಗತರು ಪ್ರಮುಖ ವ್ಯಾಪಾರಿಯೂ ಮರದ ಮಿಲ್ಲಿನ ಮಾಲೀಕರೂ ಆಗಿದ್ದರು. ದಿವಂಗತರು ಓರ್ವ ಪುತ್ರನನ್ನೂ ಐವರು ಪುತ್ರಿಯರನ್ನೂ ಪತ್ನಿಯನ್ನೂ ಅಗಲಿದ್ದಾರೆ.

ಜನಾಬ್ ಅಸ್ಸೂ ಸಾಹೇಬರು "ಯುಗರಶ್ಮಿ"ಯ ಹಿತೈಷಿಯೂ ಆಗಿದ್ದರು.

ದಿವಂಗತರಿಗೆ ಅಲ್ಲಾಹನು ಮಗ್‌ಫಿರತ್ ನೀಡಲಿ—ಆಮೀನ್.


## AHMADIYYA URDU LITERATURE

1. Ahmadiyyath Ka Paigham
2. Aqaide Ahmadiyyath
3. Zuhoore Imam Mahdi
4. Nuzoolul Masih
5. Kya Hazrath Masih Nasree Zinda Hein?
6. Masih Hindustan Mein
7. Hazrath Masih Mashriq Mein
8. Sadaqathe Hazrath Masih Mauwood
9. Khatme Nubuwwath Ki Haqeeqath
10. Khathamunnabiyyeen Aur Buzurgane Ummath

—: *WILL BE SENT FREE* :—

Apply with 30 paise stamp for each book to :

**The Book Secretary,**
**Ahmadiyya Muslim Mission,**
10-23-1008 Ansari Road,
Bunder, Mangalore-575 001.


## Ahmadiyya English Literature

| | | | |
|---|---|---|---|
| 1. | Introduction to the Study of the Holy Quran | By Hazrath Mirza Bashiruddin Mahmood Ahmad | 16–00 |
| 2. | The Philosophy of the Teachings of Islam | By Hazrat Mirza Gulam Ahmad | 6–00 |
| 3. | Characteristics of the Quranic Teachings | Hazrat Mirza Bashiruddin Mahmood Ahmad | 2–00 |
| 4. | The Holy Prophet Muhammad | By Hazrat Mirza Bashiruddin Mahmood Ahmad | 2–00 |
| 5. | Ahmadiyya Movement | By Hazrat Mirza Bashiruddin Mahmood Ahmad | 2–25 |
| 6. | What is Ahmadiyyat? | By Hazrat Mirza Bashiruddin Mahmood Ahmad | 1–50 |
| 7. | The Economic Structure of Islamic Society | By Hazrat Mirza Bashiruddin Mahmood Ahmad | 2–50 |
| 8. | The New World Order of Islam | By Hazrat Mirza Bashiruddin Mahmood Ahmad | 2–25 |
| 9. | Truth About Khatme Nabuwat | By Hazrat Mirza Bashir Ahmad M.A. | 2–50 |
| 10. | Islam and Slavery | By Hazrat Mirza Bashir Ahmad, M.A. | 1–25 |
| 11. | Forty Gems of Beauty | By Hazrat Bashir Ahmed, M.A. | 2–50 |
| 12. | Our Teachings | By Hazrat Mirza Ghulam Ahmad | 1–00 |
| 13. | An Interpretation of Islam | By Laura Viccia Vaglieri | 3–00 |
| 14. | Muhammad the Most Successful Prophet | By Moulana Sharif Ahmad Amini | 1–00 |
| 15. | The Goal of Man and the way to Reach it | By Muhammad Karimullah Naujawan & Dr. Hafiz Saleh Muhammad Allahdin, Ph. D | 0–50 |
| 16. | Jesus in India | By Hazrat Mirza Ghulam Ahmad | 2–25 |
| 17. | A Review of Christianity | By Hazat Mirza Ghulam Ahmad | 1–00 |
| 18. | Four Questions by a Christian and their Answers | Hazrat Mirza Ghulam Ahmad | 1–25 |
| 19. | How to get rid of the Bondage of Sin | Hazrat Mirza Ghulam Ahmad | 1–25 |
| 20. | Where did Jesus Die? | By J. D. Shams | 5–00 |
| 21. | Did Jesus Redeem Mankind ? | | 2–50 |
| 22. | The Tomb of Jesus | By Sufi Mutiur Rahman Bengalee, M. A. | 1–00 |
| 23. | The Christian Doctrine of Atonement | By Dr. M. M. Sadiq. D.D. LL.D S.S.P (London) | 1–00 |
| 24. | Why did early Christians accept Islam ? | By J. D. Shams | 1–00 |
| 25. | Latest Findings about Jesus Christ | | 0–50 |

Write to : **Secretary for Mission Works**

Sadr Anjuman Ahmadiyya, Qadian-143 516 (Punjab)

Regd. with the Registrar of Newspapers for India Regd. No. R. N. 27354/75
YUGARASHMI Kannada Quarterly, June 1986 / Ihsan 1365




English Translation of the
HOLY QURAN
with Arabic Text &
Extensive Index

**Price: Rs. 20-00**
**Postage Extra**

Write to:
**NAZIR DAWAT-O-TABLIGH**
Sadr Anjuman Ahmadiyya
Qadian - 143 516 (Punjab)

ಎಲ್ಲಾ ಬಗೆ ಹಂಚುಗಳಿಗೆ ವಿಚಾರಿಸಿರಿ:

# STANDARD TILERY

**KADUR**
**CHICKMAGALUR DISTRICT**

**RAJA MARK** Roofing Tiles, Ridges, Wall Tiles, Span Tiles, Floorings, Decorative Tiles, Ceilings, Etc. Etc.

**ALL CLAY PRODUCTS AVAILABLE**

Edited and Published by Muhammad Yusuf on behalf of Jamath Ahmadiyya at 10-23-1008, Ansari Road, Bunder, Mangalore-575 001. Phone: 32039
Printed at Jubilee Printing Press, Ansari Road, Bunder, Mangalore-575 001.